ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು - ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ

### ಎಂ.ಎ. (ಪ್ರಥಮ)

# ಉತ್ತರ ಭಾರತದ ಇತಿಹಾಸ ಕಾನಿಷ್ಕ, ಸಮುದ್ರಗುಪ್ತ, ಅಶೋಕ, ಹರ್ಷವರ್ಧನ, ಕಾಳಿದಾಸ, ಆರ್ಯಭಟ, ವರಾಹ ಮೀಹಿರ

ಕೋರ್ಸ್ - 2

ಬ್ಲಾಕ್ - 4

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

**Higher Education To Everyone Everywhere**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ - 2

# ಬ್ಲಾಕ್ 4

---

ಘಟಕ - 47
ಪ್ರಾಚೀನ ಭಾರತದ ಗಣರಾಜ್ಯಗಳು

---

ಘಟಕ - 48
ಮೌರ್ಯರು - ಚಂದ್ರಗುಪ್ತ ಮೌರ್ಯ - ಅಶೋಕ ಮೌರ್ಯ - ಅವನತಿ

---

ಘಟಕ - 49
ಮೌರ್ಯರ ಕಾಲದ ಆಡಳಿತ, ಆರ್ಥಿಕ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆ

---

ಘಟಕ - 50
ಪ್ರಾಚೀನ ಭಾರತದ ರಾಜಕೀಯ ಚಿಂತನೆ ಮತ್ತು ಸಂಸ್ಥೆಗಳು

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ


**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

***ವಿಷಯ ಸಂಯೋಜಕರು***


## ಪಠ್ಯಕ್ರಮ ನಿರೂಪಕರು


1. ***ಘಟಕ ಬರೆದವರು*** — ಘಟಕಗಳು **47** ರಿಂದ **50**

ಮೂಲ : **ಷೇಕ್ ಮಸ್ತಾನ್**
ಪ್ರವಾಚಕರು
ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾನಿಲಯ
ಬೆಂಗಳೂರು.

ಅನುವಾದ : **ಶ್ರೀ.ಕೆ.ಬಿ. ಚಂದ್ರ** — ಘಟಕಗಳು **47** ರಿಂದ **50**
ಇತಿಹಾಸ ಪ್ರಾಧ್ಯಾಪಕರು (ನಿವೃತ್ತ)
ವಿದ್ಯಾನಗರ,
ಹಾಸನ


## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, **2013**
ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ/
ಕುಲಸಚಿವರು (ಆಡಳಿತ)

# ಇತಿಹಾಸ

## ಕೋರ್ಸ್ ೬ - 2

## ಬ್ಲಾಕ್ - 4

### ಪೀಠಿಕೆ

ಬ್ಲಾಕ್ 4 ರಲ್ಲಿ 47 ರಿಂದ 50 ರವರೆಗೆ ಒಟ್ಟು ನಾಲ್ಕು ಘಟಕಗಳಿವೆ. ಈ ಘಟಕಗಳು ಪ್ರಾಚೀನ ಭಾರತದ ಪ್ರಮುಖ ಐತಿಹಾಸಿಕ ಬೆಳವಣಿಗೆಗಳನ್ನು ವಸ್ತು ವಿಷಯವನ್ನಾಗಿ ಹೊಂದಿವೆ. ಘಟಕ 47 ಪ್ರಾಚೀನ ಭಾರತದಲ್ಲಿ ಉಗಮವಾಗಿ ಪ್ರವರ್ಧಮಾನಕ್ಕೆ ಬಂದು ಕಣ್ಮರೆಯಾದ ಗಣರಾಜ್ಯಗಳ ಬಗ್ಗೆ ವಿಷಯವನ್ನು ಹೊಂದಿದೆ. ಘಟಕ 48 ಹಾಗೂ 49 ಪ್ರಾಚೀನ ಭಾರತದ ಪ್ರಥಮ ಸಾಮ್ರಾಜ್ಯವನ್ನು ಸ್ಥಾಪಿಸಿದ ಮೌರ್ಯರ ಬಗೆಗಿನ ಆಡಳಿತ, ಆರ್ಥಿಕ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆಗಳ ಬಗೆಗೆ ಅನೇಕ ವಿವರಗಳನ್ನು ನೀಡುತ್ತವೆ. ಘಟಕ 50 ಪ್ರಾಚೀನ ಭಾರತದಲ್ಲಿ ಪ್ರಚಲಿತವಿದ್ದ ರಾಜಕೀಯ ಪರಿಕಲ್ಪನೆಗಳು, ಚಿಂತನೆಗಳು ಹಾಗೂ ರಾಜಕೀಯ ಸಂಸ್ಥೆಗಳನ್ನು ಕುರಿತಾದ ವಿಚಾರಗಳ ಬಗೆಗೆ ನಿಮಗೆ ಮಾಹಿತಿಯನ್ನು ಒದಗಿಸುತ್ತದೆ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಪ್ರಾಚೀನ ಭಾರತದ ಗಣರಾಜ್ಯಗಳು

## ರಚನೆ

47.0 ಉದ್ದೇಶಗಳು

47.1 ಪೀಠಿಕೆ

47.2 ವೇದಗಳ ಕಾಲ ಮತ್ತು ಕ್ರಿ.ಪೂ. 6ನೇ ಶತಮಾನ

47.3. ಗಣರಾಜ್ಯಗಳು

47.3.1. ಮೂಲ

47.3.2. ಬೆಳವಣಿಗೆ ಮತ್ತು ಇತಿಹಾಸ

47.3.3. ರಾಜ್ಯ ರಚನೆ ಮತ್ತು ನಗರೀಕರಣ

47.4. ಮಹಾಜನಪದಗಳು

47.4.1. ಮಗದದ ಏಳಿಗೆ

47.5. ಸಂವಿಧಾನ

47.6 ಗಣರಾಜ್ಯಗಳ ಕಣ್ಮರೆ

47.7 ಮುಕ್ತಾಯ

## 47.0. ಉದ್ದೇಶಗಳು

ಈ ಘಟಕವನ್ನು ಅಭ್ಯಸಿಸಿದ ನಂತರ ನಾವು ಕೆಳಕಂಡ ಅಂಶಗಳನ್ನು ಅರಿತುಕೊಳ್ಳಲು ಸಾಧ್ಯವಾಗಬೇಕು.

* ಕ್ರಿ.ಪೂ. 6 ನೇ ಶತಮಾನದ ಮತ್ತು ಅದಕ್ಕೆ ಮೊದಲಿನ ಕಾಲದ ಸಾಮಾಜಿಕ ವ್ಯವಸ್ಥೆಗಳ ನಡುವೆ ವ್ಯತ್ಯಾಸವನ್ನುಗುರುತಿಸುವುದು.
* ಕ್ರಿ.ಪೂ.6ನೇ ಶತಮಾನದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಹುಟ್ಟಿಕೊಂಡ ಹೊಸ ವರ್ಗಗಳ ಬಗ್ಗೆ ತಿಳಿಯುವುದು.
* ಈ ಕಾಲದಲ್ಲಿ ಪ್ರಾಮುಖ್ಯತೆಗೆ ಬಂದ ಅನೇಕ ಜನಪದಗಳು ಮತ್ತು ಮಹಾಜನಪದಗಳ ಮೂಲ, ಬೆಳವಣಿಗೆ ಮತ್ತು ಇತಿಹಾಸದ ಬಗ್ಗೆ ವಿವರವಾದ ಮಾಹಿತಿಯನ್ನು ಪಡೆಯುವುದು.
* ಗಣರಾಜ್ಯಗಳ ಸಂವಿಧಾನ, ಕಾರ್ಯಕಲಾಪಗಳು ಮತ್ತು ಕಣ್ಮರೆ/ ಅವನತಿಯ ಬಗ್ಗೆ ತಿಳಿದುಕೊಳ್ಳುವುದು.

## 47.1 ಪೀಠಿಕೆ

ನಮ್ಮ ಸುತ್ತಲಿರುವ ಜನರು ಒಂದೇ ಭಾಷೆಯನ್ನು ಮಾತನಾಡುವುದನ್ನು ನಾವು ಗಮನಿಸಿದ್ದೇವೆ. ಇದು ಮಾತ್ರವೇ ಅಲ್ಲ. ಇಡೀ ಪ್ರದೇಶದಲ್ಲಿ ಒಂದೇ ಬಗೆಯ ಹಬ್ಬಗಳನ್ನು ಆಚರಿಸಲಾಗುತ್ತದೆ. ಸಮಗ್ರ ಭಾಗದ ಜನರ ವಿವಾಹ ಸಂಪ್ರದಾಯಗಳಲ್ಲಿ ಹೋಲಿಕೆಗಳಿವೆ. ಈ ಸಾಂಸ್ಕೃತಿಕ ಏಕರೂಪದ ಪ್ರದೇಶಗಳು ಹೇಗೆ ಅಸ್ಥಿತಕ್ಕೆ ಬಂದವು? ಈ ಪ್ರಕ್ರಿಯೆಯ ಆರಂಭ ಜನಪದಗಳ ಅಥವಾ ಜನಪ್ರಿಯಾದ ಗಣರಾಜ್ಯಗಳ ಏಳಿಗೆ ಕಾಲದಷ್ಟು ಹಿಂದಕ್ಕೆ ಹೋಗುವುದು (ರಾಜ ಪ್ರಭುತ್ವವಲ್ಲದ ಸ್ವಯಮಾಡಳಿತ ರಾಜ್ಯಗಳು). ಗಣರಾಜ್ಯಗಳ ಉದಯವು ಭಾರತದ ಇತಿಹಾಸದಲ್ಲಿ ಭೊಗೋಳಶಾಸ್ತ್ರದ ಹುಟ್ಟಿನಿಂದ ಮಹತ್ವಪೂರ್ಣವಾಗಿದೆ.

ಕೃಷಿಕರ ನೆಲೆಗಳು ತಲೆಯೆತ್ತುವುದರೊಂದಿಗೆ, ನೆಲೆಸಿದರು ತಮ್ಮ ಸುತ್ತಮುತ್ತತಲ ಭೂರಚನೆಯೊಂದಿಗೆ ಶಾಶ್ವತವಾದ ಸಂಬಂಧವನ್ನು ಬೆಳೆಸಿಕೊಂಡರು. ಅವರು ಆ ಪ್ರದೇಶದಲ್ಲಿ ಕಾಣಸಿಗುವ ಬೆಟ್ಟಗಳು, ನದಿಗಳು, ಪಕ್ಷಿಗಳು ಮತ್ತು ಪ್ರಾಣಿಗಳನ್ನು ಗಮನಿಸಿದರು. ಅವರು ಆ ಭೌಗೋಳಿಕ ಸ್ಥಳವನ್ನು ತಮ್ಮದೆಂದು ಕರೆದುಕೊಳ್ಳತೊಡಗಿದರು. ಈ ಭೌಗೋಳಿಕ ಸ್ಥಳವು ಅವರಿಗೆ ಸ್ನೇಹಮಯ ಅಥವಾ ವಿರೊಧಿಯಾಗಿದ್ದ ಇತರ ಜನಾಂಗಗಳಿಂದ ( ಜನಪದಗಳು) ಪ್ರತ್ಯೇಕಿಸಲ್ಪಟ್ಟಿತು.

ಆಂತರಿಕವಾಗಿ ಒಗ್ಗಟ್ಟಿನಿಂದಿದ್ದ ಮತ್ತು ಹೊರಪ್ರಪಂಚದಿಂದ ಪ್ರತ್ಯೇಕತೆಯ ಲಕ್ಷಣಗಳಿಂದ ಕೂಡಿದ ಜನಪದಗಳು ಪ್ರಾಚೀನ ಭಾರತದಲ್ಲಿ ಒಂದು ಬೀಜ ಬೆಳವಣಿಗೆಯೆಂದು ದೃಢಪಟ್ಟಿದೆ. ಈ ಘಟಕಗಳು ಅಥವಾ ಜನಪದಗಳು ಏಕರೀತಿಯ ಭಾಷೆ. ಸಂಪ್ರದಾಯಗಳು ಮತ್ತು ನಂಬಿಕೆಗಳು ಅಭಿವೃದ್ಧಿಯ ಕೇಂದ್ರಗಳಾದವು.

## 47.2. ವೇದಗಳ ಕಾಲ ಮತ್ತು ಕ್ರಿ.ಪೂ. 6ನೇ ಶತಮಾನ.

ಕ್ರಿ.ಪೂ.6ನೇ ಶತಮಾನದಿಂದಲೇ ಜನಪದಗಳ ಬಗ್ಗೆ ತಿಳಿದುಬರುವುದರಿಂದ, ಜನಪದಗಳಿದ್ದ ಪ್ರದೇಶದಲ್ಲಿ ಅನೇಕ ಬದಲಾವಣೆಗಳು ಖಚಿಟ ರೂಪ ಪಡೆದವೆಂದು ನಾವು ಹೇಳಬಹುದು. ಹಳ್ಳಿಗಳು (ಗ್ರಾಮಗಳು), ಪಟ್ಟಣಗಳು ಮತ್ತು ನಗರಗಳು ಜನಪದಗಳ ಜನರು ವಾಸಿಸುತ್ತಿದ್ದ ಘಟಕಗಳಾಗಿದ್ದವು. ಪ್ರಾರಂಭದ ವೇದಗಳ ಮತ್ತು ಉತ್ತರವೇದಗಳ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ನಾವು ಗಮನಿಸಿದಾಗ, ಆ ಕಾಲದ ಜನರು ಸುಧಾರಿತ ನೆಲೆಗಳಲ್ಲಿ ವಾಸಿಸುತ್ತಿದ್ದರು. ಗ್ರಾಮ, ಪಟ್ಟಣ ಮತ್ತು ನಗರದಂತಹ ವಿವಿಧ ನೆಲೆಗಳಲ್ಲಿ ವಾಸಿಸುತ್ತಿದ್ದ ಬಗ್ಗೆ ನಮಗೆ ಉಲ್ಲೇಖಗಳು ಸಿಗುವುದಿಲ್ಲ.

ಅಲ್ಲದೆ, ಅದು ಇತಿಹಾಸ ರಂಗದ ಮೇಲೆ ರಾಜರು ಮತ್ತು ಚಕ್ರವರ್ತಿಗಳು ಕಾಣಿಸಿಕೊಂಡ ಕಾಲವಾಗಿತ್ತು. ಅದು ಗಾಡವಾದ ತತ್ವಜ್ಞಾನ ಜಿಜ್ಞಾಸೆಯ ಕಾಲವೂ ಆಗಿದ್ದಿತು. ಈ ಕಾಲದಲ್ಲಿ ಅನೇಕ ಸಂಪ್ರಾದಾಯ ವಿರೋಧಿ ಬಣಗಳು ಹುಟ್ಟಿಕೊಂಡವು. ಹೀಗೆ ಅನೇಕ ದೃಷ್ಠಿಯಲ್ಲಿ ನಮ್ಮ ಅಧ್ಯಯನದ ಕಾಲವು (ಸೂಮಾರು ಕ್ರಿ.ಪೂ.6ನೇ ಶತಮಾನದಿಂದ ಕ್ರಿ.ಪೂ.4ನೇ ಶತಮಾನ ) ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ನಿರಂತರವಾದ ಬದಲಾವಣೆಯ ಕಾಲವಾಗಿತ್ತೆಂಬುದು ಮನವರಿಕೆಯಾಗುತ್ತದೆ. ಈ ಬದಲಾವಣೆಯನ್ನು ಮುಂದಿನ ಘಟಕಗಳಲ್ಲಿ ನಾವು ಚರ್ಚಿಸಬಹುದಾಗಿತು.

## 47.3 ಗಣರಾಜ್ಯಗಳು

ಪ್ರಾಚೀನ ಭಾರತದಲ್ಲಿ ಗಣರಾಜ್ಯಗಳ ಇತಿಹಾಸವು ಒಂದು ಮನೋಹರ ಮತ್ತು ಭೋದಪರ ಅಧ್ಯಯನವಾಗಿದೆ. ಈ ಅಧ್ಯಯನವು ದೇವರೆಂದು ಪರಿಗಣಿಸಲಾದ ಏಕವ್ಯಕ್ತಿಯಲ್ಲಿ ಅಧಿಕಾರ ಕೇಂದ್ರೀಕರಣಕ್ಕೆ ವಿರುದ್ಧವಾದ ಬಹುವ್ಯಕ್ತಿಗಳ ವ್ಯವಸ್ಥೆಯು ಹಂತ ಹಂತವಾದ ಬೆಳವಣಿಗೆಯ ದೃಷ್ಠಿಯಿಂದ ಆಸಕ್ತಿಯನ್ನು ಕೆರಳಿಸುತ್ತದೆ. ವ್ಯಕ್ತಿಗತ ಅರಸನೊಬ್ಬನು ಎಷ್ಟೇ ಸದ್ಗುಣಶಾಲಿ ಮತ್ತು ಉನ್ನತ ಆದರ್ಶವಾದಿಯಾಗಿದ್ದರೂ ಅವನ ಉತ್ತರಾಧಿಕಾರಿಗಳಿಂದ ಪ್ರಜೆಗಳ ಬಗ್ಗೆ ಅಂತಹದೇ ಕಾಳಜಿಯ ಭರವಸೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲದಿರುವುದರಿಂದ ಆ ಮೂಲಕ ಸಾಂಕುಶ ಪ್ರಭುತ್ವವು ದರ್ಪಿಷ್ಠ ಪ್ರಭುತ್ವಕ್ಕೆ ಅವಕಾಶ ಮಾಡಿಕೊಡುವುದರಿಂದ ಈ ಅಧ್ಯಯನವು ಭೋದಪ್ರದವಾಗಿದೆ.

ಆದಾಗ್ಯೂ ಕೆಲವು ವಿದ್ವಾಂಸರು ಊಹಿಸಿರುವಂತೆ ಗಣರಾಜ್ಯಗಳು ರಾಜಪ್ರಭುತ್ವದಿಂದ ರೂಪುಗೊಂಡವೆಂಬುದನ್ನು ನಿರ್ಧರಿಸುವುದು ಕಷ್ಟವಾಗುತ್ತದೆ. ಆದರೆ ರಾಜಪ್ರಭುತ್ವ ಮಾಧರಿಯದಲ್ಲದ ಸರ್ಕಾರಗಳ ಬೀಜಗಳು ಪ್ರಾಚೀನ ಸಂಘ ಸಂಸ್ಥೆಗಳಲ್ಲಿ ಅಡಗಿದ್ದವೆಂದು ಹೇಳಿದ್ದಲ್ಲಿ ಬಹುಶಃ ನಾವು ತಪ್ಪು ಎಸಗಲಾರೆವು ಮತ್ತು ಕಾಲಕಳೆದಂತೆ ಅವು ನೆಲೆಯೂರಿದ್ದಲ್ಲದೆ ಮಾತ್ರವಲ್ಲದೆ ಕೆಲವು ಪ್ರದೇಶಗಳಲ್ಲಿ ಬಲಗೊಂಡವು.

### 47.3.1 *ಮೂಲ*

'ಗಣ ' ಅಥವ 'ಸ್ವಯಮಾಡಳಿತ ಘಟಕ' ವೆಂಬ ಪದವು ನಮ್ಮ ದೇಶದ ಅತ್ಯಂತ ಪ್ರಾಚೀನ ಸಾಹಿತ್ಯವೆನಿಸಿರುವ ವೇದ ಸಾಹಿತ್ಯದಲ್ಲಿ ಕಾಣಸಿಗುತ್ತದೆ. ಈ ಸಾಹಿತ್ಯದಲ್ಲಿರುವ ವಿವರಣೆಯು ರಕ್ತ ಸಂಬಂಧವನ್ನು ಆದರಿಸಿದ ಬುಡಕಟ್ಟುಗಳು ಮತ್ತು ಬಣಗಳನ್ನು ಸೂಚಿಸುತ್ತದೆ. ಅಂದಿನ ದಿನಗಳಲ್ಲಿ ಗೋವುಗಳ ಅಪಹರಣವು ಯುದ್ಧಗಳಿಗೆ ಕಾರಣವಾಯಿತು ಮತ್ತು ಅಂತಹ ಯುದ್ಧಗಳು ಆಗಿಂದಾಗ್ಗೆ ನಡೆಯುತ್ತಿದ್ದವು. ಈ ಕಾಲದ ಅಂತಹ ಸಂಘಟನೆಗಳನ್ನು ವೇದ ಸಾಹಿತ್ಯದಲ್ಲಿ ಗಣ, ವ್ರತ, ಸರ್ದಾ ಮತ್ತು ವಿಶ ಎಂಬುದಾಗಿ ಕರೆಯಲಾಗಿದೆ.

ವ್ಯಾಕರಣಕಾರನಾದ ಪಾಣೆನಿಯ ಕೃತಿಯಲ್ಲಿ ಗಣ ಮತ್ತು ಸಂಘ ಎಂಬ ಎರಡು ಪದಗಳು ಅನೇಕ ಸೂತ್ರಗಳಲ್ಲಿ ಕಾಣಿಸಿಕೊಂಡಿವೆ. ಪಾಣೆನಿಯು ಸಂಘವನ್ನು ಗಣದೊಂದಿಗೆ ಸಮೀಕರಿಸಿದ್ದು, ಒಂದು ಗುಂಪು ಅಥವಾ ಸಂಸ್ಥೆಯೆಂಬ ಅರ್ಥವನ್ನು ಕೊಡುತ್ತದೆ. ಆದರೆ ಡಿ.ಆರ್.ಭಂಡಾರ್‌ಕರ್ ಎಂಬುವವರ ಅಭಿಪ್ರಾಯದಲ್ಲಿ ಪಾಣೆನಿಯ ದೃಷ್ಠಿಯಲ್ಲಿ ಈ ಎರಡು ಪದಗಳು "ನಿರ್ದಿಷ್ಟ ಉದ್ದೇಶಕ್ಕಾಗಿ ರಚಿಸಲಾದ ವ್ಯಕ್ತಿಗಳ ಒಂದು ಸಹಯೋಗ" ಆರ್.ಸಿ. ಮಜುಂದಾರರು ಈ ಪದಗಳು ಮೂಲತಃ ನೀತಿ ನಿಯಮಗಳಿಗೆ ಬದ್ದವಾದ ಒಂದು ನಿರ್ದಿಷ್ಟವಾದ ಸಂಘಟನೆಯೆಂದು ಅರ್ಥೈಸಿದ್ದಾರೆ. ಕೆ.ಪಿ.ಜಯಸ್ವಾಲರ್ ಅಭಿಪ್ರಾಯದಲ್ಲಿ " ಧಾರ್ಮಿಕ ಸಂಘವು ನಂತರದ ಬೆಳವಣಿಗೆಯಾಗಿದ್ದು, ಈ ಎರಡು ಪದಗಳನ್ನು ಗಣರಾಜ್ಯವೆಂಬ ಅರ್ಥದಲ್ಲಿ ಬಳಸಲಾಗಿದೆ" ಎಂದಿದ್ದಾರೆ. ಗಣ ಎಂಬುದು ರಾಜಪ್ರಭುತ್ವಕ್ಕಿಂತ ಸಂಪೂರ್ಣವಾಗಿ ಭಿನ್ನವಾದ ಒಂದು ಬಗೆಯ ರಾಜ್ಯವನ್ನು ಸೂಚಿಸುತ್ತದೆಂಬುದು ಆಲ್ಟೇಕರರ ದೃಷ್ಠಿಕೋನವಾಗಿದೆ.

ರಾಜಕೀಯ ಸಂಘವು ಧಾರ್ಮಿಕ ಸಂಘಕ್ಕೆ ಮಾದರಿಯಾಯಿತು ಎಂಬ ಅಭಿಪ್ರಾಯವನ್ನು ಒಪ್ಪಿಕೊಂಡಲ್ಲಿ ಗಣ ಸಂಘಗಳು ಪಾಣೆನಿಯ ಕಾಲಕ್ಕೂ ಮೊದಲೇ ಹುಟ್ಟಿದ್ದವು ಮತ್ತು ಕಾರ್ಯನಿರ್ವಹಿಸುತ್ತಿದ್ದವೆಂದು ತರ್ಕಿಸಬಹುದಾಗಿದೆ.

### 47.3.2 *ಬೆಳವಣಿಗೆ ಮತ್ತು ಇತಿಹಾಸ*

ಸಮಕಾಲೀನ ಆಧಾರಗಳು ಒಂದು ನಿರ್ದಿಷ್ಟ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳಲ್ಲಿ ಬದಲಾವಣೆಗಳು ನಡೆಯುತ್ತಿದ್ದುದನ್ನು ತಿಳಿಸುತ್ತದೆ. ನಮ್ಮ ಚರ್ಚೆಯ ಕಾಲಕ್ಕೆ ಸಂಬಂಧಿಸಿದ ಸಾಹಿತ್ಯವು ಅನೇಕ ಬಗೆಯ ನೆಲೆಗಳ ಘಟಕಗಳನ್ನು ಉಲ್ಲೇಖಿಸುತ್ತದೆ. ಅವುಗಳನ್ನು ಮಹಾಜನಪದಗಳು, ಜನಪದಗಳು, ನಗರ, ನಿಗಮ, ಗ್ರಾಮ ಮುಂತಾಗಿ ಕರೆಯಲಾಗಿದೆ.

### 47.3.3 *ರಾಜ್ಯಗಳ ರಚನೆ ಮತ್ತು ನಗರೀಕರಣ*

ಋಗ್ವೇದದ ಕಾಲದ ಬುಡಕಟ್ಟು ರಾಜಕೀಯ ವ್ಯವಸ್ಥೆಯ ಹಂತವು ವೇದಗಳ ಕಾಲದ ಕಡೆಯ ವೇಳೆಗೆ ಪ್ರಾಂತೀಯ ರಾಜ್ಯಗಳ ಉದಯಕ್ಕೆ ದಾರಿಮಾಡಿಕೊಟ್ಟಿತು. ಈ ಪ್ರಾಂತಿಯ ಕಲ್ಪನೆಯು ಕ್ರಿ.ಪೂ.6ನೇ ಶತಮಾನದಲ್ಲಿ ಕ್ರಮೇಣ ಬಲಗೊಂಡಿತು. ಅಧಿಕಾರದ ಕೇಂದ್ರಗಳಾಗಿ ಪಟ್ಟಣಗಳನ್ನೊಳಗೊಂಡ ದೊಡ್ಡ ರಾಜ್ಯಗಳ ಏಳಿಗೆಯೊಂದಿಗೆ, ಒಂದು ನಿರ್ದಿಷ್ಠ ಪ್ರದೇಶದಲ್ಲಿ ಶಾಶ್ವತ ನೆಲೆಗಳು ತಲೆಯೆತ್ತುವ ಮೂಲಕ ಒಂದು ಬುಡಕಟ್ಟು ಅಥವಾ ಬುಡಕಟ್ಟುಗಳ ಗುಂಪಿಗೆ ಭೌಗೋಳಿಕ ಅಸ್ಥಿತ್ವ ದೊರೆಯಿತು ಮತ್ತು ಪ್ರದೇಶಗಳನ್ನು ಪಡೆದುಕೊಳ್ಳುವ ಮೂಲಕ ಈ ಅಸ್ಥಿತ್ವಕ್ಕೆ ಸುಬಧ್ರ ಸರ್ಕಾರವನ್ನು ಒದಗಿಸಲಾಯಿತು. ಇವುಗಳನ್ನು ಬುಡಕಟ್ಟಿನ ಹೆಸರಿನಿಂದಲೇ ಕರೆಯಲಾಯಿತು.

ಈ ಒಡೆತನವನ್ನು ಉಳಿಸಿಕೊಳ್ಳಲು, ಗಣರಾಜ್ಯ ಅಥವಾ ರಾಜಪ್ರಭುತ್ವವಾಗಿ ರಾಜಕೀಯ ಸಂಘಟನೆ ಅಗತ್ಯವಾಯಿತು.

ರಾಜ್‌ಘಾಟ್ ಮತ್ತು ಚಿರಂದ್‌ಗಳಲ್ಲಿ ನಡೆಸಲಾಗಿರುವ ಭೂಉತ್ಖನನದಿಂದ ದೃಢಪಟ್ಟಿರುವಂತೆ ಕ್ರಿ.ಪೂ.6ನೇ ಶತಮಾನದ ನಂತರ ಪೂರ್ವ ಉತ್ತರಪ್ರದೇಶ ಮತ್ತು ಪಶ್ಚಿಮ ಬಿಹಾರಗಳಲ್ಲಿ ವ್ಯಾಪಕವಾದ ಕಬ್ಬಿಣದ ಬಳಕೆಯು ಬೃಹತ್ ಪ್ರಾಂತೀಯ ರಾಜ್ಯಗಳ ರಚನೆಗೆ ಕಾರಣವಾಯಿತು. ಈ ರಾಜ್ಯಗಳು ಸೈನಿಕ ದೃಷ್ಟಿಯಿಂದ ಸುಸಜ್ಜಿತವಾಗಿದ್ದವು. ಕ್ಷತ್ರಿಯ ವರ್ಗದವರು ಅದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹೊಸ ಕೃಷಿ ಸಲಕರಣೆಗಳು ರೈತರು ಅಧಿಕ ಪ್ರಮಾಣದಲ್ಲಿ (ಮಿಗತೆ) ಉತ್ಪಾದಿಸುವಂತೆ ಮಾಡಿದವು. ಇದು ಆಡಳಿತ ವರ್ಗದ ಅಗತ್ಯಗಳನ್ನು ಪೂರೈಸಿದುದಲ್ಲದೆ, ಅನೇಕ ಪಟ್ಟಣಗಳಿಗೂ ಆಧಾರವಾಯಿತು.

ಕೈಗಾರಿಕೆ ಮತ್ತು ವ್ಯಾಪಾರದ ಕೇಂದ್ರಗಳಾಗಿ ಪಟ್ಟಣಗಳು ತಲೆಯೆತ್ತಿದ್ದವು. ಅವುಗಳಲ್ಲಿ ಗಂಗಾ ಬಯಲಿನ ಆರ್ಥಿಕ ವ್ಯವಸ್ಥೆಗೆ ಶ್ರಾವಸ್ತಿ, ಚಂಪ, ರಾಜಗೃಹ, ಅಯೋಧ್ಯ, ಕೌಶಂಭಿ, ಕಾಶಿ ಮತ್ತು ಪಾಟಲೀಪುತ್ರಗಳ ಕೊಡುಗೆ ಗಮನಾರ್ಹವಾದುದು. ವೈಶಾಲಿ, ಉಜ್ಜಯಿನಿ. ತಕ್ಷಶಿಲೆ ಮತ್ತು ಭರುಕಚ್ಛ(ಬ್ರೋಚ್) ಮುಂತಾದ ಇತರ ನಗರಗಳು ವಿಶಾಲ ಆರ್ಥಿಕ ಅವಕಾಶಗಳನ್ನು ಹೊಂದಿದ್ದವು. ಪಾಣಿನಿಯ ಒಂದು ವಿವರಣೆಯು ಜನರು ತಾವು ಸೇರಿದ್ದ ಜನ ಅಥವಾ ಬುಡಕಟ್ಟಿಗೆ ಬದಲಾಗಿ ತಾವು ಸೇರಿದ್ದ ಜನಪದಕ್ಕೆ (ಪ್ರದೇಶ) ತಮ್ಮ ನಿಷ್ಠೆಯನ್ನು ಹೊಂದಿದ್ದರೆಂಬುದನ್ನು ಸ್ಪಷ್ಟಪಡಿಸುತ್ತದೆ.

ಕೆಲವು ಜನಪದಗಳು ಕ್ರಿ.ಪೂ.6ನೆ ಶತಮಾನದ ವೇಳೆಗೆ ಮಹಾಜನಪದಗಳಾಗಿ ಬೆಳವಣಿಗೆಗೊಂಡವು. ಜನಪದಗಳ ಅಂತರಿಕ ಸಾಮಾಜಿಕ - ರಾಜಕೀಯ ರಚನೆಯಲ್ಲಾದ ಅನೇಕ ಬದಲಾವಣೆಗಳ ಪರಿಣಾಮವಾಗಿ ಇದು ನಡೆಯಿತು. ಕೃಷಿಕರ ಸಮುದಾಯದ ವಿಸ್ತರಣೆ ಅಂತಹ ಪ್ರಮುಖ ಬದಲಾವಣೆಯಲ್ಲಿ ಒಂದು.

## 47.4. ಮಹಾಜನಪದಗಳು

ಕ್ರಿ.ಪೂ. 6ನೇ ಶತಮಾನದ ಸುಮಾರಿನಲ್ಲಿ ಕಬ್ಬಿಣದ ಸಲಕರಣೆಗಳನ್ನು ವ್ಯಾಪಕವಾಗಿ ಬಳಸಲು ಪ್ರಾರಂಭಿಸಲಾಯಿತು. ಕಬ್ಬಿಣದ ಸಲಕರಣೆಗಳು ಗಂಗಾ ಬಯಲಿನ ದಟ್ಟವಾದ ಅರಣ್ಯಗಳನ್ನು ತೆರವುಗೊಳಿಸಲು ಸಹಾಯಕವಾಗಿದ್ದರಿಂದ ಪೂರ್ವದ ಕಡೆಗೆ ನಾಗರೀಕತೆ ವಿಸ್ತರಿಸಿತು. ಹೊಸ ಕೃಷಿ ಉಪಕರಣಗಳು ಮತ್ತು ಸಲಕರಣೆಗಳು ಬೇಸಾಯದ ಅರಿವನ್ನು ಉತ್ತಮಪಡಿಸಿದವು. ಇದು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಮಿಗತೆಗೆ ಸಹಾಯಕವಾಯಿತು. ತಮ್ಮ ಸೈನ್ಯದ ಮತ್ತು ಆಡಳಿತ ಆಗತ್ಯವನ್ನು ತುಂಬಲು ದೊರೆಗಳು ಅದನ್ನು ಸಂಗ್ರಹಿಸಲು ಸಾಧ್ಯವಾಯಿತು. ಕೃಷಿ ಆಧಾರಿತ ಅರ್ಥಿಕ ವ್ಯವಸ್ಥೆಯು ಏರ್ಪಾಡಿನಿಂದ ಜನರು ನೆಲೆನಿಂತ ಜೀವನವನ್ನು ಸಾಗಿಸಲು, ತಮ್ಮ ಭೂಮಿಗೆ ಅಂಟಿಕೊಳ್ಳಲು ಮತ್ತು ನೆರೆಯ ಹಸವಾದ ಪ್ರದೇಶಗಳಿಗೆ ವಿಸ್ತರಿಸಲು ಸಾಧ್ಯವಾಯಿತು. ಈ ಕಾಲದ ಹೊತ್ತಿಗೆ ಭಾರತದಲ್ಲಿ 16 ಮಹಾಜನಪದಗಳು ಅಥವಾ ರಾಜ್ಯಗಳು ಪ್ರಾಮುಖ್ಯತೆಗೆ ಬಂದವು.

**ಅಂಗುತ್ತರ ನಿಕಾಯದಂತೆ ಆ 16 ಮಹಾಜನಪದಗಳೆಂದರೆ**

| | ಜನಪದಗಳು | | ರಾಜಧಾನಿಗಳು |
|---|---|---|---|
| 1 | ಕಾಶಿ | - | ಬನಾರಸ್ |
| 2 | ಕೋಸಲ | - | ಶ್ರಾವಸ್ತಿ |
| 3 | ಅಂಗ | - | ಚಂಪ |
| 4 | ಮಗದ | - | ಗಿರಿವ್ರಜ |
| 5 | ವಜ್ಜಿ | - | ವೈಶಾಲಿ |
| 6 | ಮಲ್ಲ | - | ಕುಶಿನಾರ್ |
| 7 | ಚೇದಿ | - | ಶುಕ್ತಿಮತಿ |
| 8 | ವತ್ಸ | - | ಕೌಶಂಬಿ |
| 9 | ಕುರು | - | ಹಸ್ತಿನಾಪುರ |

| | | | |
|---|---|---|---|
| 10 | ಪಾಂಚಾಲ | - | ಅಹಿಚ್ಛತ್ರ |
| 11 | ಮತ್ಸ್ಯ | - | ವಿರಾಟ್‌ನಗರಿ |
| 12 | ಸುರಸೇನ | - | ಮಥುರ |
| 13 | ಅಶ್ಮಕ | - | ಪೊಟ್ನ |
| 14 | ಅವಂತಿ | - | ಉಜ್ಜಯಿನಿ |
| 15 | ಗಾಂಧಾರ | - | ತಕ್ಷಶಿಲ |
| 16 | ಕಾಂಭೋಜ | - | ರಾಜ್‌ಪುತ್ |

ಈ ಮಹಾಜನಪದಗಳಲ್ಲಿ ಅಂಗ, ಕಾಶಿ, ಕೋಸಲ, ಚೇದಿ, ವತ್ಸ, ಮತ್ಸ್ಯ, ಸುರಸೇನ, ಅಶ್ಮಕ, ಅವಂತಿ, ಗಾಂಧಾರ ಮತ್ತು ಮಗಧಗಳನ್ನು ರಾಜರು ಮತ್ತು ದೊರೆಗಳು ಆಳುತ್ತಿದ್ಧರು. ಈ ಮಹಾಜನಪದಗಳು ರಾಜಪ್ರಭುತ್ವ ಇಲ್ಲವೆ ಗಣರಾಜ್ಯದ ಗುಣಲಕ್ಷಣಗಳನ್ನು ಹೊಂದಿದ್ದವು. ಈ ರಾಜ್ಯಗಳಲ್ಲಿ ರಾಜನು ಪರಮಾಧಿಕಾರವನ್ನು ಹೊಂದಿದ್ದನು. ವ್ರಿಜ್ಜಿ, ಮಲ್ಲ, ಕುರು, ಪಾಂಚಾಲ ಮತ್ತು ಕಂಬೋಜ ಮಹಾಜನಪದಗಳು ಗಣರಾಜ್ಯಗಳಾಗಿದ್ದವು ಮತ್ತು ಲಿಚ್ಛವಿ, ಶೌಕ್ಯ, ಕೋಲಿಯ, ಭಗ್ಗ ಮತ್ತು ಮೊರಿಯದಂತಹ ಇತರ ಸಣ್ಣ ಗಣರಾಜ್ಯಗಳಿದ್ದವು.

ಈ ಗಣರಾಜ್ಯಗಳು ಒಂದು ಗಣ -ಪರಿಷದ್ ಅಥವಾ ಹಿರಿಯ ಹಾಗೂ ಜವಾಬ್ದಾರಿಯುತ ನಾಗರೀಕರ ಒಂದು ಸಭೆಯನ್ನು ಹೊಂದ್ದಿವು. ಈ ಗಣ-ಪರಿಷದ್ ರಾಜ್ಯದಲ್ಲಿ ಪರಮಾಧಿಕಾರವನ್ನು ಹೊಂದಿದ್ದಿತು. ಎಲ್ಲಾ ಆಡಳಿತದ ನಿರ್ಧಾರಗಳನ್ನು ಈ ಪರಿಕ್ಷದ್ದಿನಲ್ಲಿ ತೆಗೆದುಕೊಳ್ಳಲಾಗುತ್ತಿತ್ತು. ಮೂಲಭೂತವಾಗಿ ಎರಡು ಬಗೆಯ ಗಣರಾಜ್ಯಗಳಿದ್ದವು.

ಅ) ಒಂದೇ ಬಣವನ್ನೊಳಗೊಂಡ ಶಾಕ್ಯ, ಕೊಲ್ಲಿ ಮತ್ತು ಮಲ್ಲದಂತಹ ಗಣರಾಜ್ಯಗಳು.

ಆ) ಅನೇಕ ಬಣಗಳನ್ನೊಳಗೊಂಡ ಅಥವಾ ಗಣರಾಜ್ಯಗಳ ಒಕ್ಕೂಟವಾದ ವ್ರಿಜ್ಜಿಯಂತಹ ಗಣರಾಜ್ಯಗಳು

### 47.4.1 *ಮಗದದ ಪ್ರಾಬಲ್ಯ*

ಹದಿನಾರು ಮಹಾಜನಪದಗಳಲ್ಲಿ - ಮಗದ, ಕೋಸಲ,ವತ್ಸ ಮತ್ತು ಅವಂತಿ ಅತ್ಯಂತ ಪ್ರಬಲವಾಗಿದ್ದವು. ರಾಜಕೀಯ ಪ್ರಾಮುಖ್ಯತೆಗಾಗಿ ಅವು ಸುಮಾರು ಒಂದು ನೂರು ವರ್ಷಗಳ ಕಾಲ ತಮ್ಮ ತಮ್ಮಲ್ಲೇ ಹೋರಾಟ ನಡೆಸಿದವು.

ಅಂತಿಮವಾಗಿ, ಬಿಂಬಿಸಾರ ಮತ್ತು ಅವನ ಉತ್ತರಾಧಿಕಾರಿಗಳ ನಾಯಕತ್ವದಲ್ಲಿ ಮಗದ ಸಾಮ್ರಾಜ್ಯ ಪ್ರಾಬಲ್ಯಕೆ ಬಂದಿತು. ಮಗದದ ವಿಜಯವು ರಾಜಪ್ರಭುತ್ವ ವ್ಯವಸ್ಥೆಯ ಪರವಾದ ವಿಜಯವಾಗಿತ್ತು. ಮಗದ ಸಾಮ್ರಾಜ್ಯವನ್ನು ನಾಲ್ಕು ಪ್ರಮುಖ ರಾಜಸಂತತಿಗಳು ಆಳಿದವು. ಅವುಗಳೆಂದರೆ

1) ಹರ್ರ್ಯಾಂಕ ಸಂತತಿ(ಕುಲ)

2) ಶಿಶುವಾಗ ಸಂತತಿ

3) ನಂದ ಸಂತತಿ ಮತ್ತು

4) ಮೌರ್ಯ ಸಂತತಿ.

ರಾಜಪ್ರಭುತ್ವ ರಾಜ್ಯಗಳ ಜೊತೆ ಜೊತೆಯಾಗಿಯೇ ಗಣರಾಜ್ಯಗಳು ಬಹಳ ಕಾಲದವರೆಗೆ ಉಳಿದಿದ್ದವು. ಆದರೆ ಕಾಲಕಳೆದಂತೆ ಅವು ಕಡೆಗೆ ಸಾಮ್ರಾಟರ ಸಾಮ್ರಾಜ್ಯ ವಿಸ್ತರಣಾ ನೀತಿಯಿಂದ ಅವರ ಹತೋಟಿಗೊಳ್ಳಪಟ್ಟವು ಮತ್ತು ಅಂತಿಮವಾಗಿ ಜನಪದಗಳು ಕಣ್ಮರೆಯಾದವು.

## 47.5 ಸಂವಿಧಾನ

ಪ್ರಾಚೀನ ಭಾರತದಲ್ಲಿ ಗಣರಾಜ್ಯಗಳು ತಮ್ಮದೇ ಆದ ಒಂದು ಸಂವಿಧಾನವನ್ನು ಹೊಂದಿದ್ದವು ಮತ್ತು ಉತ್ತಮವಾದ ಸಭೆಯ ಕಲಾಪಗಳಿಗೆ ಪ್ರಸಿದ್ಧಾಗಿದ್ದವು. ನಮ್ಮಲ್ಲಿರುವ ಆಧಾರಗಳು ಅತ್ಯಲ್ಪವಾಗಿರುವುದರಿಂದ ಅವುಗಳ ಸಂವಿಧಾನ ಮತ್ತು ಅವುಗಳು ಹೇಗೆ ಕಲಾಪಗಳನ್ನು ನಡೆಸುತ್ತಿದ್ದವೆಂಬ ಬಗ್ಗೆ ಸಮಗ್ರ ಅಥವಾ ಸಂಪೂರ್ಣ ಚಿತ್ರಣವನ್ನು ನೀಡುವುದು ಕಷ್ಟ. ಪ್ರೊ.ಕೈಸ್ ಡೇವಿಡ್ ತಮ್ಮ ಪ್ರಯಾಸದ ಸಂಶೋಧನೆಯಿಂದ ಪಾಳಿ ಗ್ರಂಥಗಳಿಂದ ಕೆಲವು ವಿವರಗಳನ್ನು ನಮ್ಮ ಪರಿವೆಗೆ ತಂದಿದ್ದಾರೆ. ಅದಕ್ಕಾಗಿ ನಾವು ಅವರಿಗೆ ಋಣಿಯಾಗಿದ್ದೇವೆ.

ಕೆಲವು ವಿದ್ವಾಂಸರ ಅಭಿಪ್ರಾಯದಲ್ಲಿ ಬುದ್ಧನು ಪ್ರಜಾಪ್ರಭುತ್ವವಾದಿಯಾಗಿ ಜನಿಸಿದ್ದರಿಂದ ಮತ್ತು ಗಣತಂತ್ರ ವ್ಯವಸ್ಥೆಯ ಪರಂಪತೆಯಲ್ಲಿ ಬೆಳೆದುದರಿಂದ ಸ್ವಾಭಾವಿಕವಾಗಿಯೇ ಅವನು ತನ್ನ ಧಾರ್ಮಿಕ ಸಂಘದಲ್ಲಿ ಅದೇ ತತ್ವಗಳು ಮತ್ತು ಚರಣೆಗಳನ್ನು ಅಳವಡಿಸಿಕೊಂಡನು. ಈ ತತ್ವಗಳು ಮತ್ತು ಆಚರಣೆಗಳು ರಾಜಕೀಯ ಸಂಘಗಳ ಕಾರ್ಯವೈಖರಿಯನ್ನು ಅರಿತುಕೊಳ್ಳಲು ಸ್ವಾಗತಾರ್ಹ ಸುಳಿಯನ್ನು ನೀಡುತ್ತದೆ.

ಜಾತಕಗಳು ಮತ್ತು ಗ್ರೀಕರ ಬರವಣಿಗೆಗಳಿಂದ ದೊರೆತಿರುವ ಮಾಹಿತಿಗಳನ್ನು ಒಟ್ಟಾಗಿ ಸೇರಿಸಿದಾಗ ಅವು ಎಷ್ಟೇ ಅನಿಶ್ಚಿತವಾಗಿದ್ದರೂ ಒಂದು ಚಿತ್ರಣವನ್ನು ಮೂಡಿಸಲು ಸಹಾಯಕವಾಗುತ್ತದೆ.

## 47.6 ಗಣರಾಜ್ಯಗಳ ಕಣ್ಮರೆ

ಪ್ರಾಚೀನ ಭಾರತದಲ್ಲಿ ಗಣರಾಜ್ಯಗಳ ಕಣ್ಮರೆಗೆ ಕಾರರಣಗಳನ್ನು ಹುಡುಕುವುದು, ಕಷ್ಟವಲ್ಲ.

* ಬಹುಶಃ ಕ್ರಿ.ಪೂ.4 ನೇ ಶತಮಾನದ ಸುಮಾರಿನಿಂದ ಕ್ರಿ.ಶ.4ನೇ ಶತಮಾನದವರೆಗೆ ಅವುಗಳು ನಡೆಸಿದ ದೀರ್ಘ ಹಾಗೂ ನಿರಂತರವಾದ ಹೋರಾಟವು ಗಣರಾಜ್ಯಗಳ ಅವನತಿಗೆ ಅತ್ಯಂತ ಪ್ರಮುಖ ಕಾರಣವಾಯಿತು.

* ವಾಯುವ್ಯ ಭಾರತದ ಗಣರಾಜ್ಯಗಳು ಅಲೆಕ್ಸಾಂಡರನ ಧಾಳಿಯ ಹೊಡೆತವನ್ನು ತಾಳಬೇಕಾಯಿತು. ಅವು ಅಲೆಕ್ಸಾಂಡರನ ಕೈಯಲ್ಲಿ ಸೋಲನ್ನನುಭವಿಸಿದವು.

* ನಂತರ ಮೌರ್ಯರ ಸಾಮ್ರಾಜ್ಯಷಾಹಿ ನೀತಿಯನ್ನು ಅವು ಎದುರಿಸಬೇಕಾಯಿತು. ಮೌರ್ಯರ ಆಳ್ವಿಕೆಯ ಪ್ರಾರಂಭದಲ್ಲಿ ಇಡೀ ವಾಯುವ್ಯ ಭಾರತವು ಅನೇಕ ಗಣರಾಜ್ಯಗಳಿಂದ ತುಂಬಿದ್ದಿತು. ಕೌಟಿಲ್ಯನ ಸಾಮ್ರಾಜ್ಯದ ಕಲ್ಪನೆಗೆ ಸ್ವತಂತ್ರ ಪ್ರಜಾಸತ್ತಾತ್ಮಕ ರಾಜ್ಯಗಳ ಅಸ್ತಿತ್ವವುವಿರುದ್ಧವಾಗಿದ್ದಂತೆ ಕಂಡುಬಂದಿತು ಮತ್ತು ಅವನ ಅವುಗಳ ಸಾಮರ್ಥ್ಯವನ್ನು ಕಡೆಗಣಿಸಿದನು.

* ಕೆಲವು ಗಣರಾಜ್ಯಗಳು ಸಾಮ್ರಾಜ್ಯಶಾಹಿ ನೀತಿಯ ಅತಿಯಾ ಬಾರದಿಂದ ನಾಶವಾದವು.

* ಶಕರು ಮತ್ತು ಕುಶಾನರ ಆಗಮನವು ಗಣರಾಜ್ಯಗಳನ್ನು ಪೀಡಿಸಿತು.

* ಗಣರಾಜ್ಯಗಳು ತಮಗೆ ಸರಿಸಮಾನವಾದವರೊಂದಿಗೆ ಒಗ್ಗಟ್ಟನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗುವವರೆಗೂ ಉಳಿದಿದ್ದವು. ನಂತರ ಅವು ಬಹು ಕಾಲ ಉಳಿಯಲಿಲ್ಲ. ಅನೈಕ್ಯತೆ ಅವುಗಳ ಅತ್ಯಂತ ಕೆಟ್ಟ ಶತ್ರುವಾಯಿತು.

* ಗಣರಾಜ್ಯಗಳ ಅವನತಿಗೆ ಸಂಬಂಧಪಟ್ಟಂತೆ ವಿವಿಧ ವಿದ್ವಾಂಸರು ವಿವಿಧ ಸಿದ್ಧಾಂತಗಳನ್ನು ನೀಡಿದ್ದಾರೆ. ಆದರೆ ಶಾಂತಿಪರ್ವದ ಪ್ರಕಾರ (ವಿಭಾಗ 107ರಲ್ಲಿ).

"ಹೆಬ್ಬಯಕೆ ಮತ್ತು ಸಹನೆಯ ಕೊರತೆ ಸಾಮಾನ್ಯವಾಗಿ ಘರ್ಷಣೆಗಳಿಗೆ ಕಾರಣವಾಗುತ್ತದೆ; ಪರಸ್ಪರ ಕಷ್ಟಗಳು ಗೂಡಚಾರರು, ಸಲಹೆಗಾರರು ಮತ್ತು ಸೇನಾ ಪಡೆಗಳಿಂದ ಉಂಟಾಗುತ್ತದೆ. ಅನೈಕ್ಯತೆ ಗಣಗಳಿಗೆ ನಾಶವನ್ನು ತರುತ್ತದೆ. ಅನೈಕ್ಯತೆಯಿಂದಿದ್ದಲ್ಲಿ ಅವು ಶತ್ರುಗಳಿಗೆ ಸುಲಭವಾಗಿ ಬಲಿಯಾಗುತ್ತವೆ; ಆದ್ದರಿಂದ ಅವುಗಳ ಯಾವಾಗಲೂ ಒಗ್ಗಟ್ಟಿನಿಂದರಲು ಪ್ರಯತ್ನಿಸಬೇಕು".

ಹೀಗೆ ಗಣರಾಜ್ಯಗಳು ಒಳಗಿನ ವಿರೋಧವಲ್ಲದೆ ಭಾರತದಲ್ಲಿ ಅಧಿಕಾರವನ್ನು ಸ್ಥಾಪಿಸಿದ ಹೊರಗಿನವರಿಂದಲೂ ವಿರೋಧವನ್ನು ಸಹಿಸಬೇಕಾಯಿತು. ಅವುಗಳು ಮರುಭೂಮಿಯಲ್ಲಿದ್ದರೂ ಪ್ರಜಾಸತ್ತಾತ್ಮಕ ವೈಭವ ಮತ್ತು ಸಂಸದೀಯ ಆಡಳಿತದಲ್ಲಿ ಬದುಕಲು ಬಯಸಿದರು. ಪ್ರತಿಯೊಂದು ಗಣರಾಜ್ಯದಲ್ಲೂ ಇದ್ದ ಬಣದ ಉತ್ಸಾಹ ಅದರ ರಾಜಕೀಯವನ್ನು ಹಾಳು ನೆಡವಿದುದರಿಂದ ಇದು ಅನಿವಾರ್ಯವಾಗಿತ್ತು ಮತ್ತುಸ್ವಾತಂತ್ರದ ಪ್ರೇಮ ಗಣರಾಜ್ಯದ ಪರಂಪರೆಯನ್ನು ಉಳಿಸಿಕೊಳ್ಳಬಹುದಾಗಿದ್ದ ಬಲಿಷ್ಠ ಕೇಂದ್ರ ಸರ್ಕಾರದ ಅಭಿವೃದ್ಧಿಗೆ ಹಿನ್ನಡೆಯುಂಟುಮಾಡಿತು. ಗಣರಾಜ್ಯಸಂಸ್ಥೆಗಳು ರಾಜನನ್ನು ರಾಜ್ಯದ ವಂಶಪಾರಂಪರ್ಯ ಮುಖ್ಯಸ್ಥನನ್ನಾಗು ಹೊಂದಿದ್ದುದು ಕಾಲಕ್ರಮದಲ್ಲಿ ಸ್ವಯಮಾಡಳಿತ ರಾಜ್ಯಗಳ ಅಸ್ಥಿತ್ವಕ್ಕೆ ವಿನಾಶಕಾರಿಯಾಗಿ ಕಂಠಕಪ್ರಾಯವಾಗಿ ಪರಿಣಾಮಿಸಿತು.

ಈ ಎಲ್ಲಾ ಕಾರಣಗಳಿಂದಾಗಿ ಗಣರಾಜ್ಯ ಸಿದ್ಧಾಂತವು "ರಾಜಕೀಯ ನಿರ್ವಾಣದ ಚರಮಗೀತೆಗೆ ದಾರಿತೋರಿಸಲು ಮಹಾಯಾತ್ರೆಯನ್ನು ಆರಂಭಿಸಿತು".

## 47.7 ಮುಕ್ತಾಯ / ಸಾರಾಂಶ

ನಾವು ಕ್ರಿ.ಪೂ.6ನೇ ಶತಮಾನದಲ್ಲಿ ಭಾರತದಲ್ಲಿ ಏರ್ಪಟ್ಟಿದದ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿದೆವು. ಹೊಸ ಬಗೆಯ ಸಾಮಾಜಿಕ-ರಾಜಕೀಯ ಬೆಳವಣಿಗೆಗಳು ಜರುಗುತ್ತಿದ್ದ ಕಡೆಯಲ್ಲಿ ಪ್ರದೇಶಗಳಾಗಿ ತಲೆಯೆತ್ತಿದ ಗಣರಾಜ್ಯಗಳು ವಿಶಿಷ್ಟವಾದ ಭೌಗೋಳಿಕ ವಲಯದಲ್ಲಿದ್ದವು. ಮುಖ್ಯವಾಗಿ ಕೃಷಿ ಉತ್ಪಾಧನೆಯಿಂದ ಸಂಮೃದ್ಧವಾಗಿದ್ದ ಗಂಗಾ ಬಯಲ್ಲಿನಲ್ಲಿದ್ದವು.

ಅಲ್ಲದೆ ನಿರ್ಣಾಯಕ ಸಂಪನ್ಮೂಲಗಳಾದ ಲೋಹದ ಅದಿರುಗಳಿಗೆ ಸುಲಭವಾದ ದಾರಿ ಮತ್ತು ಇದರ ಜೊತೆಗೆ ಪಟ್ಟಣಗಳ ಏಳಿಗೆ ಮುಂತಾದವುಗಳು ರಾಜಕೀಯ- ಆರ್ಥಿಕ ಶಕ್ತಿಗಳ ಉದಯದೊಂದಿಗೆ ಸಂಬಂಧ ಕಲ್ಪಿಸಲಾಗಿದೆ. ಈ ಪ್ರದೇಶದಲ್ಲಿ ಅನೇಕ ಮಹಾಜನಪದಗಳು ಒಂದಕೊಂದು ಅಕ್ಕಪಕ್ಕದಲ್ಲಿದ್ದವೆಂಬುದು ಮಹಾತ್ವಾಕಾಂಕ್ಷಿ ನಾಯಕನೊಬ್ಬನು ನೆರೆಹೊರೆ. ಸಂಮೃದ್ಧ ಪ್ರದೇಶಗಳನ್ನು ಗೆಲ್ಲಲು ಪ್ರಯತ್ನಿಸಬಹುದೆಂದು ಸೂಚಿಸುತ್ತದೆ. ಅಲ್ಲದೆ ನೆರೆಯ ಪ್ರದೇಶಗಳ ಮೇಲೆ ಹತೋಟಿಯನ್ನು ಸ್ಥಾಪಿಸುವುದೂ ಸುಲಭವಾಗಿತ್ತು. ಈ ವಲಯದಲ್ಲಿದ್ದ ಪ್ರಬಲ ರಾಜ್ಯಗಳಲ್ಲಿ ಒಂದಾದ ಮಗದ ನಂತರದ ಕಾಲದಲ್ಲಿ ಅತ್ಯಂತ ಪ್ರಬಲ ರಾಜ್ಯವಾಗಿ ಹೊರಹೊಮ್ಮಿದುದರಲ್ಲಿ ಆಶ್ಚರ್ಯವಿರಲಿಲ್ಲ.

# ಟಿಪ್ಪಣಿಗಳು

# ಘಟಕ 48

## ಮೌರ್ಯರು - ಚಂದ್ರಗುಪ್ತ ಮೌರ್ಯ - ಅಶೋಕ ಮೌರ್ಯ - ಅವನತಿ

### ರಚನೆ

48.0 ಉದ್ದೇಶಗಳು

48.1 ಪೀಠಿಕೆ

48.2 ಮೌರ್ಯರ ಇತಿಹಾಸದ ಆಧಾರಗಳು

- 48.2.1. ಸಾಹಿತ್ಯಾಧಾರಗಳು
- 48.2.2 ಧಾರ್ಮಿಕ ಆಧಾರಗಳು
- 48.2.3. ವಿದೇಶೀ ಸಾಹಿತ್ಯಾಧಿರಗಳು
- 48.2.4 ಪ್ರಾಕ್ಚಾರಿತ್ರಿಕ ಆಧಾರಗಳು
- 48.2.5. ಅಶೋಕನ ಶಾಸನಗಳ ಭಾಷೆಗಳು

48.3 ಮೌರ್ಯರ ರಾಜಕೀಯ ಇತಿಹಾಸ

- 48.3.1 ಮೂಲ

48.4 ಚಂದ್ರಗುಪ್ತಮೌರ್ಯ

- 48.4.1 ಬಿಂದುಸಾರ

48.5 ಅಶೋಕ ಮೌರ್ಯ

- 48.5.1 ಅಶೋಕನ ಜನನ
- 48.5.2 ಸಿಂಹಾಸನಾರೋಹಣ
- 48.5.3 ಕಳಿಂಗ ಯುದ್ಧ
- 48.5.4 ಅಶೋಕನ ಧಾರ್ಮಿಕ ನೀತಿ (ಧಮ್ಮ)
- 48.5.5. ನಂತರದ ಮೌರ್ಯರು

48.6 ಮೌರ್ಯರ ಅವನತಿ

48.7 ಮುಕ್ತಾಯ

## 48.0 ಉದ್ದೇಶ

ಈ ಘಟಕದಲ್ಲಿ ನಾವು ಭಾರತದ ಇತಿಹಾಸದಲ್ಲಿ ಮೌರ್ಯ ಸಂತತಿ ಅಥವ ಮೌರ್ಯ ಸಾಮ್ರಾಜ್ಯವೆಂದು ಕರೆಯಲಾಗಿರುವ ಮೌರ್ಯರ ಬೃಹತ್ ಸಾಮ್ರಾಜ್ಯದ ಧ್ಯೇಯಗಳನ್ನು ಚಿತ್ರಿಸಲಿದ್ದೇವೆ.

ಇದು ಹೇಗೆ ಮತ್ತು ಯಾವ ಕಾರಣಕ್ಕಾಗಿ ಮೌರ್ಯರಿಗೆ ಅಧಿಕಾರವನ್ನು ಸ್ಥಾಪಿಸಲು ಸಾಧ್ಯವಾಯಿತು. ಹಾಗೂ ಅದು ಸಾಮ್ರಾಜ್ಯವಾಯಿತು ಎಂಬುದನ್ನು ತಿಳಿದುಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನಾವು ಕೆಳಗಿನ ಅಂಶಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಬೇಕು.

* ಮೌರ್ಯ ಸಂತತಿಯ ಇತಿಹಾಸದ ಅಧ್ಯಯನಕ್ಕೆ ಆಧಾರಗಳನ್ನು ಗುರುತಿಸುವುದು.
* ಧಾರ್ಮಿಕ ಹಾಗೂ ವಿದೇಶೀ ಸಾಹಿತ್ಯಾಧಾರ ಮತ್ತು ಪ್ರಾಕ್ಚಾರಿತ್ರಿಕ ಆಧಾರಗಳಿಂದ ಮೌರ್ಯ ಸಂತತಿಯ ಬಗ್ಗೆ ಮಾಹಿತಿಗಳನ್ನು ಪಡೆಯುವುದು.
* 'ಅಶೋಕ ಮಹಾಶಯನ' ಶಾಸನಗಳ ಭಾಷೆಯ ಸಂಕ್ಷಿಪ್ತ ಪರಿಚಯ
* ಮೌರ್ಯರ ರಾಜಕೀಯ ಇತಿಹಾಸವನ್ನು ಗುರುತಿಸುವುದು.
* ಮೌರ್ಯ ಸಂತತಿಯ ಪ್ರಾರಂಭದ ದೊರೆಗಳಾದ - ಚಂದ್ರಗುಪ್ತ ಮೌರ್ಯ- ಬಿಂದುಸಾರ ಮತ್ತು ಅಶೋಕ - ಹಾಗೂ ಅವರ ನೀತಿಗಳನ್ನು ಅಧ್ಯಯನ ಮಾಡುವುದು.
* ಕಡೆಯದಾಗಿ, ಮೌರ್ಯರ ಅವನತಿ ಮತ್ತು ಮೌರ್ಯ ಸಂತತಿಯ ಅವನತಿಗೆ ನೀಡಲಾಗಿರುವ ವಿವಾದಾತ್ಮಕ ಕಾರಣಗಳನ್ನು ಪರಿಶೀಲಿಸುವುದು

## 48.1 ಪೀಠಿಕೆ

ಕ್ರಿ.ಪೂ. 321ರಲ್ಲಿ ಚಂದ್ರಗುಪ್ತಮೌರ್ಯನು ಮಗದ ಸಿಂಹಾಸನವನ್ನೇರುವುದರೊಂದಿಗೆ ಮೌರ್ಯ ಸಂತತಿಯ ಇತಿಹಾಸ ಪ್ರಾರಂಭವಾಗುತ್ತದೆ. ಮೌರ್ಯ ಸಾಮ್ರಾಜ್ಯವು ಭಾರತದಲ್ಲಿ ಸ್ಥಾಪಿತವಾದ ಮೊದಲ ಮತ್ತು ಬೃಹತ್ ಸಾಮ್ರಾಜ್ಯವಾಗಿತ್ತು.

**ಮೌರ್ಯರ ಕಾಲವು ಕೆಳಕಂಡ ಕಾರಣಗಳಿಂದಾಗಿ ಭಾರತದ ಇತಿಹಾಸದಲ್ಲಿ ಅತ್ಯಂತ ಮಹತ್ವಪೂರ್ಣವಾಗಿದೆ.**

1. **ಮೊದಲ ಅತಿದೊಡ್ಡ ಸಾಮ್ರಾಜ್ಯ :** ಪ್ರಾಚೀನ ಭಾರತದ ಮೊದಲ ಸಾಮ್ರಾಜ್ಯವನ್ನು ಚಂದ್ರಗುಪ್ತ ಮೌರ್ಯನು ಸ್ಥಾಪಿಸಿದನು. ನಂದರನ್ನು ಸೋಲಿಸಿದ ನಂತರ ಚಂದ್ರಗುಪ್ತಮೌರ್ಯನು ಮಗದ ಸಿಂಹಾಸನವನ್ನು ವಶಪಡಿಸಿಕೊಂಡರು ಮತ್ತು ಸ್ವಲ್ಪ ಕಾಲದಲ್ಲಿಯೇ ಮಗದ ರಾಜ್ಯವನ್ನು ಇಡೀ ಉತ್ತರ ಭಾರತ ಮತ್ತು ದಖಿನ್‌ಗಳಿಗೆ ವಿಸ್ತರಿಸಿದನು.

2. **ಐತಿಹಾಸಿಕವಾಗಿ ಸುಬದ್ರ ಅಡಿಪಾಯವನ್ನು ಹೊಂದಿದೆ:-** ಮೌರ್ಯರ ಇತಿಹಾಸ ರಚನೆಗೆ ಇರುವ ಆಧಾರಗಳು ಹೆಚ್ಚು ನಿಖರ ಮತ್ತು ಹೆಚ್ಚು ವಿಶ್ವಾಸಾರ್ಹವಾಗಿವೆ. ಆದ್ದರಿಂದ ಮೌರ್ಯರ ಕಾಲದಿಂದ ಭಾರತದ ಇತಿಹಾಸವು ಹೆಚ್ಚು ನಿಖರ ಹಾಗೂ ಸ್ಪಷ್ಟವಾಗಿ ಮೂಡಿಬರುತ್ತದೆ.

3 **ಕಾಲಾನುಕ್ರಮಣಿಕೆ:-** ಮೌರ್ಯರಿಗೆ ಮೊದಲಿನ ಕಾಲದ ದೊರೆಗಳ ಕಾಲ ಮತ್ತು ಕಾಲಾನುಕ್ರಮಣಿಕೆಗಳು ಅನಿಶ್ಚಿತ ಮತ್ತು ಗೊಂದಲದಿಂದ ಕೂಡಿವೆ. ಮೌರ್ಯರ ಕಾಲದ ಆರಂಭದೊಂದಿಗೆ ಕಾಲಾನುಕ್ರಮಣಿಕೆಯು ಇದ್ದಕ್ಕಿದಂತೆ ನಿಶ್ಚಿತವೂ ಮತ್ತು ನಿಖರವೂ ಆಗುತ್ತದೆ.

ಮೌರ್ಯರ ಕೆಲವು ಐಕ್ಯತೆ ಮತ್ತು ಪರಿಪೂರ್ಣತೆಯನ್ನು ಸಾಧಿಸಿತು. ಮೌರ್ಯರ ಯುಗದೊಂದಿಗೆ ನಿಜವಾದ ಮತ್ತು ಖಚಿತವಾದ ಇತಿಹಾಸ ಆರಂಭವಾಯಿತೆಂದು ಹೇಳಲಾಗಿದೆ.

## 48.2. ಮೌರ್ಯರ ಇತಿಹಾಸದ ಆಧಾರಗಳು

### ಸಾಹಿತ್ಯಾಧಾರಗಳು : ಲೌಕಿಕ ಆಧಾರಗಳು

**1. ಕೌಟಿಲ್ಯನ ಅರ್ಥಶಾಸ್ತ್ರ :-** ಇದು ಮೌರ್ಯ ಇತಿಹಾಸದ ರಚನೆಗೆ ಇರುವ ಅತ್ಯಂತ ಪ್ರಮುಖ ಆಧಾರವಾಗಿದೆ ಮತ್ತು ಇದನ್ನು 15 ಅಧಿಕರಣಗಳು ಅಥವಾ ಅಧ್ಯಾಯಗಳು ಮತ್ತು 180 ಪ್ರಕರಣಗಳು ಅಥವ ಉಪ ಅಧ್ಯಾಯಗಳನ್ನಾಗಿ ವಿಂಗಡಿಸಲಾಗಿದೆ. ಇದು ಸುಮಾರು 6,000 ಶ್ಲೋಕಗಳನ್ನು ಒಳಗೊಂಡುದೆ. ಈ ಗ್ರಂಥವನ್ನು ಮೈಸೂರಿನ ಪ್ರಾಚ್ಯಾ ಸಂಶೋಧನಾ ಸಂಸ್ಥೆಯಲ್ಲಿದ್ದ ಶ್ಯಾಮಶಾಸ್ತ್ರಿ ಎಂಬುವವರು 1905ರಲ್ಲಿ ಪತ್ತೆ ಮಾಡಿದರು ಮತ್ತು ಉತ್ತಮವಾಗಿ ಭಾಷಾಂತರಿಸಿದರು. ಕೌಟಿಲ್ಯನ ಅರ್ಥಶಾಸ್ತ್ರವು ರಾಜ್ಯಾಡಳಿತ ಮತ್ತು ಸಾರ್ವಜನಿಕ ಆಡಳಿತಕ್ಕೆ ಸಂಬಂಧಿಸಿದ ಗ್ರಂಥವಾಗಿದೆ. ಇದು ಮೌರ್ಯರ ಕಾಲದ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳ ಕ್ರಮಬದ್ಧ ವಿಶ್ಲೇಷಣೆಯನ್ನು ನೀಡುತ್ತದೆ.

ಅಲ್ಲದೆ ಅಂದಿನ ಸಾಮಾಜಿಕ -ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿಯನ್ನು ಒದಗಿಸುವ ಇತರ ಆಧಾರಗಳೆಂದರೆ ವಿಶಾಕದತ್ತನ ಮುದ್ರಾರಾಕ್ಷಸ. ಆದರೆ ಇದನ್ನು ಗುಪ್ತರ ಕಾಲದಲ್ಲಿ ರಚಿಸಲಾಗಿದೆ. (ಕ್ರಿ.ಶ.6ನೇ ಶತಮಾನ). ಇದು ತನ್ನ ಮಂತ್ರಿ ಚಾಣಕ್ಯ ಅಥವಾ ಕೌಟಿಲ್ಯನ ಸಹಾಯದಿಂದ ನಂದರ ಮೇ ಚಂದ್ರಗುಪ್ತಮೌರ್ಯನ ವಿಜಯದ ಕಡೆಯ ಹಂತವನ್ನು ವಿವರಿಸುತ್ತದೆ.

**2. ಧಾರ್ಮಿಕ ಆಧಾರಗಳು :** ಸಂಸ್ಕೃತ ಮತ್ತು ಪಾಳಿಯಲ್ಲಿ ಬರೆದಿರುವ ಅನೇಕ ಬ್ರಾಹ್ಮಣ, ಬೌದ್ಧ ಮತ್ತು ಜೈನ ಕೃತಿಗಳನ್ನು ಮೌರ್ಯರ ಇತಿಹಾಸ ರಚನೆಗೆ ಅನುಕೂಲಕರವಾಗಿ ಬಳಸಿಕೊಳ್ಳಬಹುದಾಗಿದೆ.

**ಬ್ರಾಹ್ಮಣ ಗ್ರಂಥಗಳು:-** ಪುರಾಣಗಳಿಲ್ಲಿರುವ ಕೆಲವು ಹಳೆಯ ಪರಂಪರೆಗಳು ಮೌರ್ಯರ ಮೂಲ ಮತ್ತು ಗೊಂದಲದಿಂದ ಕೂಡಿರುವ ಮೌರ್ಯರ ಕಾಲಾನುಕ್ರಮಣಿಕೆಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ವಿಷ್ಣು ಪೂರಾಣವು ನಂದರ ಮೂಲ ಮತ್ತು ಕೌಟಿಲ್ಯ ಹಾಗೂ ಚಂದ್ರಗುಪ್ತಮೌರ್ಯರಿಂದ ನಂದರ ಸೋಲನ್ನು ವಿವರಿಸುತ್ತದೆ.

**ಬೌದ್ಧ ಸಾಹಿತ್ಯ:-**

(ಅ) ಕ್ರಿ.ಪೂ.3ನೇ ಶತಮಾನ ಮತ್ತು ಕ್ರಿ.ಶ1ನೆ ಶತಮಾನದಲ್ಲಿ ರಚಿತವಾಗಿರುವ ಬೌದ್ಧ ಜಾತಕಕಗಳು ಆ ಕಾಲದ ಸಾಮಾಜಿಕ -ಆರ್ಥಿಕ ಸ್ಥಿತಿಗಳನ್ನು ವಿವರಿಸುತ್ತದೆ. (ಆ) ದಿಘನ್ನಿಕಾಯ ಮತ್ತು ಅದರ ಮೇಲಿನ 'ಭಾಷ್ಯಾವಾದ 'ಸುಮಂಗಲ ವಿಲಾಸಿನಿ'ಯು ಮೌರ್ಯರ ಆಡಳಿತದ ಮೇಲೆ ಬೌದ್ಧ ಚಿಂತನೆಗಳ ಪ್ರಭಾವವನ್ನು ಗುರುತಿಸಲು ಸಹಾಯಕವಾಗುತ್ತದೆ. (ಇ) ಶ್ರೀಲಂಕಾದ ಕ್ರಮಬದ್ದ ಇತಿಹಾಸ ಕೃತಿಗಳಾದ ದೀಪವಂಶ(ಕ್ರಿ.ಶ.3-4ನೇ ಶತಮಾನಗಳು) ಮತ್ತು ಮಹಾವಂಶಗಳು (ಕ್ರಿ.ಶ4ನೇ ಶತಮಾನ) ಶ್ರೀಲಂಕಾದಲ್ಲಿ ಬೌದ್ಧಧರ್ಮ ಪ್ರಸಾರ ಹಾಗೂ ಬೌದ್ಧಧರ್ಮದ ಪ್ರಸಾರದಲ್ಲಿ ಅಶೋಕನ ಕೊಡುಗೆಗಳ ಬಗ್ಗೆ ತಿಲಿಸುತ್ತದೆ. (ಈ) ಕ್ರಿ.ಶ.10ನೆ ಶತಮಾನದಲ್ಲಿ ಮಹಾವಂಶದ ಮೇಲೆ ರಚಿಸಲಾಗಿರುವ ವಂಸತ-ಪಕಾಸಿನಿಯೆಂಬ ವಿಮರ್ಶನಾ ಗ್ರಂಥವು ಮೌರ್ಯರ ಬಗ್ಗೆ ಅನೇಕ ಐತಿಹ್ಯಗಳನ್ನು ಬಳಗೊಂಡಿದೆ. (ಉ) ಅಶೋಕನ ಬಗ್ಗೆ ರಚಿಸಲಾಗಿರುವ ದಂತಕಥೆಗಳ ಸಂಗ್ರಹವಾದ ದಿವ್ಯಾವ ದಾನವು ಭಾರತದಲ್ಲಿ ದೊರೆಯುದಿದ್ದರೂ, ಟಿಬೆಟ್ ಮತ್ತು ಚೀನೀ ಬೌದ್ಧ ಆಧಾರಗಳಲ್ಲಿ ಉಳಿದುಕೊಂಡಿದೆ.

ಬೌದ್ಧ ಧರ್ಮಗುರು ತಾರಾನಾಥನ(ಕ್ರಿ.ಶ16ನೇ ಶತಮಾನ) ಟಿಬೆಟಿನ ಇತಿಹಾಸವು ಮೌರ್ಯರಿಗೆ ಸಂಬಂಧಿಸಿದ ಕೆಲವು ಆಯ್ದು ಐತಿಹಾಸಿಕ ಸಂಪ್ರದಾಯಗಳ ವಿವರಗಳನ್ನು ಒಳಗೊಂಡಿದೆ.(ಊ) ಕ್ರಿ.ಶ.12ನೇ ಶತಮಾನದಲ್ಲಿ ಹೇಮಚಂದ್ರನು ರಚಿಸಿದ ಪರಹಿಸಿಸ್ಟಪರ್ವನ್ ಜೈನಮತಕ್ಕೆ ಚಂದ್ರಗುಪ್ತಮೌರ್ಯನ ಮತಾಂತರದ ಬಗ್ಗೆ ತಿಳಿಸುತ್ತದೆ.

**ವಿದೇಶೀಯ ಸಾಹಿತ್ಯಾಧಾರಗಳು**

ಮೇಗಾಸ್ತನೀಸನ ಇಂಡಿಕಾ - ಸೆಲ್ಯುಕಸ್ ನಿಕೇಟರನು (ಪರ್ಷಿಯಾ ಮತ್ತು ಬ್ಯಾಬಿಲೋನಿಯಾವನ್ನು ಆಳಿದ ಅಲೆಕ್ಸಾಂಡರನ ಉತ್ತರಾಧಿಕಾರಿ) ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಕಳುಹಿಸಿದ ಗ್ರೀಕ್ ರಾಯಭಾರಿಯೇ ಮೆಗಾಸ್ತನೀಸ್. ಮೌರ್ಯರ ರಾಜಧಾನಿಯಾಗಿದ್ದ ಪಾಟಲೀಪುತ್ರದಲ್ಲಿ ಕೆಲವು ಕಾಲ ಇದ್ದ ಅವನು ಪಾಟಲೀಪುತ್ರ ನಗರದ ಆಡಳಿತದ ಬಗ್ಗೆ ಮಾತ್ರವಲ್ಲದೆ ಸಮಗ್ರ ಮೌರ್ಯನ ಸಾಮ್ರಾಜ್ಯದ ಬಗ್ಗೆ ಒಂದು ವರದಿಯನ್ನು ರಚಿಸಿದನು. ಮೆಗಾಸ್ತನೀಸನ ಈ ವರದಿ ಸಂಪೂರ್ಣವಾಗಿ ಉಳಿದಿಲ್ಲ. ಆದರೆ ಅದರ ಕೆಲವು ಭಾಗಗಳನ್ನು ನಂತರದ ಗ್ರೀಕ್ ಬರಹಗಾರರಾದ ಪ್ಲಿನಿ, ದಿಎಲ್ಡರ್, ಸ್ಟ್ರಾಟೊ ಮತ್ತು ಡಿಯೊಡರಸ್ ಮೊದಲಾದವರು ಕೃತಿಗಳಲ್ಲಿ (ಕಾಣಸಿಗುತ್ತವೆ) ಉಲ್ಲೇಖಿಸಿದ್ದಾರೆ.

### ಪ್ರಾಕ್ಚಾರಿತ್ರಿಕ ಆಧಾರಗಳು

ಶಾಸನಶಾಸ್ತ್ರವು ಮೌರ್ಯ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಅತ್ಯಂತ ಖಚಿತ ಆಧಾರವಾಗಿದೆ. ಅಶೋಕನ ಶಾಸನಗಳು ಅತ್ಯಂತ ಪ್ರಾಚೀನವಾಗಿದ್ದು, ಉತ್ತಮವಾಗಿ ಸಂರಕ್ಷಿತಲ್ಪಟ್ಟಿರುವ ಮತ್ತು ನಿಖರವಾದ ಕಾಲವನ್ನು ಒಳಗೊಂಡ ಭಾರತದ ಶಾಸನಶಾಸ್ತ್ರಾಧಾರಗಳಾಗಿವೆ. ಈ ಶಾಸನಗಳ ರಹಸ್ಯವನ್ನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಯಾಗಿದ್ದ ಜೇಮ್ಸ್ ಪ್ರಿನ್ಸೆಪ್ ಎಂಬುವವನು 1837ರಲ್ಲಿ ಬಹಿರಂಗಪಡಿಸಿದನು. ಅವನು ಅಶೋಕನ ಬ್ರಾಹ್ಮಿಲಿಪಿ ಹಾಗೂ 'ದೇವನಾಂಪ್ರಿಯ ಪ್ರಿಯದರ್ಶಿ' ಎಂಬುದು ಅಶೋಕನಿಗೆ ನೀಡಲಾಗಿದ್ದ ಬಿರುದೆಂಬುದನ್ನು ಗುರುತಿಸಿದನು.

**ಅಶೋಕನ ಶಾಸನಗಳಲ್ಲಿ 2 ಬಗೆಗಳಿವೆ.**

1 ನಿಷ್ಠಾವಂತ ಅನುಯಾಯಿಯಾಗಿ ಬೌದ್ಧಧರ್ಮ ಮತ್ತು ಬೌದ್ಧ ಸಂಘಗಳಿಗೆ ಅಶೋಕನ ಘೋಷಣೆಗಳನ್ನೊಳಗೊಂಡ ಒಂದು ಚಿಕ್ಕ ಗುಂಪು. ಇವುಗಳು ಅಶೋಕನ ಬೌದ್ಧಧರ್ಮ ಸ್ವೀಕಾರ ಮತ್ತು ಬೌದ್ಧ ಸಂಘದೊಂದಿಗೆ ಅವನ ಸಂಬಂಧಗಳನ್ನು ವಿವರಿಸುತ್ತದೆ.

ಎರಡನೆಯದಾದ ಶಾಸನಗಳ ಒಂದು ದೊಡ್ಡ ಗುಂಪು 14 ಬೃಹತ್ ಹಲವು ಲಘು ಬಂಡೆಗಲ್ಲು ಶಾಸನಗಳು ಮತ್ತು 7 ಸ್ಥಂಬಶಾಸನಗಳನ್ನು ಒಳಗೊಂಡಿದೆ. ಈ ಶಾಸನಗಳು ಅವನ ಜನಪ್ರಿಯ ಧಾರ್ಮಿಕ (ಧಮ್ಮ) ನೀತಿಯನ್ನು ವಿವರಿಸುತ್ತವೆ. ಶಾಸನಗಳನ್ನು ಶಿಲಾ ಸ್ಥಂಭಗಳ ಮೇಲೆ ಅಥವಾ ಬಂಡೆಗಲ್ಲುಗಳ ಮೇಲೆ ಕೊರೆಯಲಾಗಿದ್ದು ವ್ಯಾಪಾರ ಮಾರ್ಗಗಳಗಳಲ್ಲಿ ಅಥವಾ ಪಟ್ಟಣಗಳ ಆಸುಪಾಸಿನ ಪ್ರಮುಖ ಸ್ಥಳಗಳಲ್ಲಿ ಇರಿಸಲಾಗಿದೆ. ಗುಹೆ ಶಾಸನಗಳೂ ಸಹ ವಿಶೇಷವಾಗಿ ಅಶೋಕನ ಬಗ್ಗೆ ಮತ್ತು ಒಟ್ಟಾರೆ ಮೌರ್ಯರ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡುತ್ತವೆ.

### ನಾಣ್ಯಶಾಸ್ತ್ರ:-

ಮೌರ್ಯರ ನಿವೇಶನಗಳಲ್ಲಿ ನಡೆದಿರುವ ಭೂಉತ್ಖನನಗಳಲ್ಲಿ ನಾಣ್ಯಗಳು ಅಲ್ಲೊಂದು ಇಲ್ಲೊಂದರಂತೆ ಹಾಗೂ ದಂಡಿಯಾಗಿ ಸಂಖ್ಯೆಯಲ್ಲಿ (ಹೆಚ್ಚಿನ) ದೊರೆತಿವೆ. ಮೌರ್ಯರು ಮೊಟ್ಟಮೊದಲು ನಾಣ್ಯಗಳನ್ನು ಅಚ್ಚು ಹಾಕಿಸುದ್ದು ಗುರುತು ಮಾಡಲಾದ ನಾಣ್ಯಗಳೆಂದು (ಪಂಚ್ ಮಾರ್ಕ್‌ಡ್) ಕರೆಯಲಾಗಿದೆ. ಅವುಗಳನ್ನು ಬೆಳ್ಳಿಯಿಂದ ತಯಾರಿಸಿದ್ದು ದಂತಕತೆಗಳ ಬದಲು ಅವುಗಳ ಮೇಲೆ ಅನೇಕ ಚಿಹ್ನೆಗಳನ್ನು ಕೊರೆಯಲಾಗಿದೆ.

### ಪ್ರಾಕ್ತನ ಸಂಶೋಧನೆಗಳು

ಪಾಟ್ನಾಕ್ಕೆ ಸಮೀಪದ ಕುಮ್ರುಹಾರ್ ಮತ್ತು ಬುಲಂದಿಬಾಗಂಗಳಲ್ಲಿ ನಡೆಸಲಾದ ಭೂಸಂಶೋಧನೆಗಳಿಂದ ಚಂದ್ರಗುಪ್ತಮೌರ್ಯನ ವೈಭವಯುತ ಅರಮನೆಯ ಪಳಯುಳಿಕೆಗಳು ದೊರೆತಿವೆ. ಕೌಶಂಬಿ, ರಾಜಗೃಹ, ಪಾಟಲೀಪುತ್ರ, ತಕ್ಷಶಿಲ ಮುಂತಾದ ಕಡೆಗಳಲ್ಲಿ ನಡೆದಿರುವ ಭೂಸಂಶೋಧನೆಗಳಿಂದ ಆ ಕಾಲದ ಇತಿಹಾಸದ ಬೆಳವಣಿಗೆಯನ್ನು ಪುನರ್ ರೂಪಿಸಲು ನಮಗೆ ಸಾಧ್ಯವಾಗಿದೆ. ಉತ್ತರದ ಕಪ್ಪು ಹೊಳಪಿನ ಪಾತ್ರೆಗಳು ದಕ್ಷಿಣ ಭಾರತದ ತುಟ್ಟತುದಿಯ ಭಾಗಗಳನ್ನು ಹೊರತುಪಡಿಸಿ ಮೌರ್ಯ ಸಾಮ್ರಾಜ್ಯದಾದ್ಯಂತ ಬಳಕೆಯಲ್ಲಿದ್ದ ಸಾಮಾನ್ಯ ಮಡಕೆಗಳಗಿದ್ದವು.

### ಕಲಾವಶೇಷಗಳು

ಪ್ರಾಣಿಗಳ ಜೋಡಿಗೆಗಳಿರುವ ಅಶೋಕನ ಸ್ಥಂಬಗಳು (ಸಿಂಹ, ಆನೆ, ಹೋರಿ ಮತ್ತು ಕುದುರೆಗಳ) ಸ್ಥೂಪಗಳು, ಗುಹಾಲಯಗಳು, ಜೇಡಿಮಣ್ಣಿನ ಪ್ರತಿಮೆಗಳು (ಟೆರ್ರಕೋಟ) ಮುಂತಾದವು ಮೌರ್ಯರ ಕಲಾಪರಂಪರೆಗೆ ಸಾಕ್ಷಿಯಾಗಿವೆ.

### ಇತರ ಶಾಸನಗಳು

ಐತಿಹಾಸಿಕ ದೃಷ್ಟಿಯಿಂದ ಉಪಯುಕ್ತವೆನಿಸುವ ಇತರ ಶಾಸನಗಳೆಂದರೆ ಅಶೋಕನ ಮೊಮ್ಮಗ ದಶರಥನ ನಾಗಾರ್ಜುನ ಬೆಟ್ಟದ ಗುಹೆ ಶಾಸನಗಳು ಮತ್ತು ಕ್ರಿ.ಶ.150ರ ರುದ್ರದಾಮನ ಜುನಾಗಡ ಶಾಸನ. ಈ ಶಾಸನಗಳು ಮೌರ್ಯರ ಬಗ್ಗೆ ಉಲ್ಲೇಖಗಳನ್ನು ಒಳಗೊಂಡಿವೆ.

### ಅಶೋಕನ ಶಾಸನಗಳ ಭಾಷೆ

ಭಾರತ ಮತ್ತು ನೇಪಾಳಗಳಲ್ಲಿ ದೊರೆತಿರುವ ಅಶೋಕನ ಶಾಸನಗಳನ್ನು ಪ್ರಾಕೃತದಲ್ಲಿ ರಚಿಸಲಾಗಿದ್ದು, ಬ್ರಾಹ್ಮಿ ಲಿಪಿಯಲ್ಲಿ ಬರೆಯಲಾಗಿದೆ. ಅಶೋಕನು ಪ್ರತಿಷ್ಠಿತರ ಭಾಷೆಯಾಗಿದ್ದ ಸಂಸ್ಕೃತವನ್ನು ತ್ಯಜಿಸಿ, ಜನಸಾಮಾನ್ಯರ ಆರು ಭಾಷೆಯಾಗಿದ್ದ ಪ್ರಾಕೃತವನ್ನು

ಈ ಶಾಸನಗಳಲ್ಲಿ ಬಳಸಿದ್ದಾನೆ. ಗಿರ್‌ನಾರ್ (ಗುಜರಾತ್ ಶಾಸನವು ಪಾಳಿ ಭಾಷೆಗೆ ಸಮೀಪವಾಗಿದೆ. ಪಾಕಿಸ್ಥಾನದಲ್ಲಿರುವ ಹಬಾಸ್‌ಘುರಿ ಮತ್ತು ಮಾನ್ಸೆಹರದ ಎರಡು ಶಾಸನಗಳನ್ನು ಕರೋಷ್ಠಿ ಲಿಪಿಯಲ್ಲಿ ಬರೆಯಲಾಗಿದ್ದು, ಆಫ್ಘಾನಿಸ್ಥಾನದ ಕಾಂದಹಾರದಲ್ಲಿ ಪತ್ತೆಯಾಗಿರುವ ಒಂದು ಶಾಸನವು ಗ್ರೀಕ್ ಹಾಗೂ ಅರಮೆಯಿಕ್ ದ್ವಿಭಾಷೆಯಲ್ಲಿದ್ದರೆ, ಜಲಾಲಾಬಾದ್‌ಗೆ ಸಮೀಪದ ಲಾಮ್‌ಘಾನ್‌ನ ಮತ್ತೊಂದು ಶಾಸವನು ಅರಮೇಯಿಕ್ ಭಾಷೆಯಲ್ಲಿದೆ. ಖರೋಷ್ಠಿಯಲ್ಲಿ ಬಲದಿಂದ ಎಡಕ್ಕೆ ಬರೆಯಲಾಗಿದೆ.

## 48.3 ಮೌರ್ಯರ ರಾಜಕೀಯ ಇತಿಹಾಸ

ಕ್ರಿ.ಪೂ.321ರಲ್ಲಿ ಚಂದ್ರಗುಪ್ತಮೌರ್ಯನಿಂದ ಮೌರ್ಯ ಸಾಮ್ರಾಜ್ಯ ಸ್ಥಾಪನೆ ವಿಶೇಷವಾಗಿ ಅಲೆಕ್ಸಾಂಡರನ ಕ್ರಿ.ಪೂ.325-325ರ ವಾಯುವ್ಯ ಭಾರತದ ವಂಶಸ್ಥೀ ದಿಗ್ವಿಜಯದ ನಂತರ ತಕ್ಷಣವೇ ಅದು ಸ್ಥಾಪಿತವಾಯಿತು ಎಂಬ ದೃಷ್ಠಿಯಿಂದ ಇತಿಹಾಸದ ಒಂದು ಅಸಾಮಾನ್ಯ ಘಟನೆಯಾಗಿದೆ.

ಮೌರ್ಯರ ಮೂಲ

ಪುರಣಗಳು ಮೌರ್ಯರನ್ನು ಶೂದ್ರರೆಂದು ವರ್ಣಿಸಿವೆ. ಆದರೆ ಇದು ಬಹುಶಃ ಮೌರ್ಯರು ಬಹುಮಟ್ಟಿಗೆ ಸಂಪ್ರದಾಯ ವಿರೋಧಿ ಬಣಗಳ ಆಶ್ರಯದಾತರೆಂಬ ಕಾರಣದಿಂದಿರಬುಹುದು.

ಯೂರೋಪಿನ ಸಾಂಪ್ರದಾಯಿಕ ಬರಹಗಾರರಾದ ಜಸ್ಟನ್ ಮುಂತಾದವರು ಚಂದ್ರಗುಪ್ತಮೌರ್ಯನನ್ನು ಸಾಮಾನ್ಯ ಮೂಲದವನೆಂದು ವರ್ಣಿಸಿದ್ದಾರೆ, ಆದರೆ ಅವನ ನಿರ್ದಿಷ್ಠ ಜಾತಿಯನ್ನು ಸೂಚಿಸುವುದಿಲ್ಲ.

ರುದ್ರಾಮನ್‌ನ ಜುನಾಘರ್ ಬಂಡೆಗಲ್ಲು ಶಾಸನವು ಕೆಲವು ಪರೋಕ್ಷ ಪುರಾವೆಯನ್ನು ಹೊಂದಿದ್ದು, ಅದು ಮೌರ್ಯರು ವೈಶ್ಯ ಮೂಲದವರಿಬಹುದೆಂದು ಸೂಚಿಸುತ್ತದೆ.

ಬೌದ್ಧಗ್ರಂಥಗಳು ಮೌರ್ಯರ ಮೂಲವನ್ನು ಗೌತಮ ಬುದ್ಧನ ಶಾಕ್ಯ ಕ್ಷತ್ರಿಯ ಬಣದೊಂದಿದೆ ಸಂಬಂಧ ಕಲ್ಪಿಸಲು ಪ್ರಯತ್ನಿಸುತ್ತನೆ. ಅವುಗಳಿಂದ ತಿಳಿದುಬರುವಂತೆ ಮೌರ್ಯರು ಬಂದ ಪ್ರದೇಶವು ಮಯೂರಗಳಿಂದ ತುಂಬಿಹೋಗಿದ್ದುದರಿಂದ ಅವರನ್ನು ಮೋರಿಯರೆಂದು ಕರೆಯಲಾಗಿದ್ದಿತು. ಇದರಿಂದ ಬೌದ್ಧರು ಅಶೋಕ ಮತ್ತು ಅವನ ಉತ್ತರಾಧಿಕಾರಿಗಳ ಸಾಮಾಜಿಕ ಅಂತಸ್ತನ್ನು (ಸ್ಥಾನಮಾನ) ಎತ್ತರಿಸಲು ಪ್ರಯತ್ಮಸಿದುದು ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ, ಮೌರ್ಯರು ಯಾವ ಜಾತಿಗೆ ಸೇರಿದವರೆಂಬುದು ಸ್ಪಷ್ಟವಲ್ಲದಿದ್ದರೂ ಅವರು ಮೊರಿಯ ಬುಡಕಟ್ಟಿಗೆ ಸೇರಿದ್ದು ಖಂಡಿತವಾಗಿಯೂ ಕೆಳಜಾತಿಯವರಾಗಿದ್ದರೆಂದು ನಾವು ಹೇಳಬಹುದು.

## 48.4 ಚಂದ್ರಗುಪ್ತ ಮೌರ್ಯ (ಕ್ರಿ. ಪೂ.321-297)

ಕ್ರಿ.ಪೂ.305ರಲ್ಲಿ ಚಂದ್ರಗುಪ್ತ ಮೌರ್ಯನು ಸೆಲ್ಯುಕಸ್ ನಿಕೇಟರನನ್ನು ಸೋಲಿಸಿದನು. ಸೆಲ್ಯುಕಸನು ಪರಪಣಿಸಡಕ್ (ಕಾಬೂಲ್), ಅರಕೋಸಿಯಾ (ಆಫ್ಘಾನಿಸ್ಥಾನ), ಗೆಡ್ರೋಸಿಯಾ(ಬಲೂಚಿಸ್ಥಾನ) ಮತ್ತು ಅರಿಯಾ(ಹೀರತ್) ಸೇರಿದಂತೆ ವಿಶಾಲ ಪ್ರದೇಶವನ್ನು 500 ಆನೆಗಳಿಗೆ ಬದಲಾಗಿ ಚಂದ್ರಗುಪ್ತಮೌರ್ಯನಿಗೆ ಬಿಟ್ಟುಕೊಟ್ಟನು.

ಮೆಗಾಸ್ತನೀಸನು ಚಂದ್ರಗುಪ್ತಮೌರ್ಯನ ಆಸ್ಥಾನಕ್ಕೆ ಸೆಲ್ಯುಕಸ್ ಕಳುಹಿಸಿಕೊಟ್ಟು ಗ್ರೀಕ್ ರಾಯಭಾರಿ

ಚಂದ್ರಗುಪ್ತಮೌರ್ಯನು ಜೈನನಾಗಿ ಬದ್ರಬಾಹುವಿನೊಂದಿಗೆ ಶ್ರವಣಬೆಳಗೊಳಕ್ಕೆ ಹೋಗಿ ಸಲ್ಲೇಖನವನ್ನಾಚರಿಸಿ ಮರಣ ಹೊಂದಿದನು.

ಚಂದ್ರಗುಪ್ತಮೌರ್ಯನ ನಾಯಕತ್ವದಲ್ಲಿ ಇಡೀ ಉತ್ತರ ಭಾರತವು ಮೊಟ್ಟಮೊದಲ ಬಾರಿಗೆ ಒಂದುಗೂಡಿತು.

ವ್ಯಾಪಾರ ಅಭಿವೃದ್ಧಿ ಹೊಂದಿದ್ದಿತು, ಕೃಷಿಯನ್ನು ನಿಯಂತ್ರಿಸಲಾಗಿತ್ತು. ತೂಕ ಮತ್ತು ಅಳತೆಗಳನ್ನು ಪ್ರಮಾಣಬದ್ಧಗೊಳಿಸಲಾಗಿತ್ತು ಮತ್ತು ಹಣದ ಬಳಕೆಯಿದ್ದಿತು.

ತೆರಿಗೆ ವ್ಯವಸ್ಥೆ, ನೈರ್ಮಲ್ಯ ಮತ್ತು ಬರ ಪರಿಹಾರಗಳು ಸರ್ಕಾರದ ಜವಾಬ್ದಾರಿಯಾಗಿದ್ದವು.

ಹೀಗೆ ಬ್ರಾಹ್ಮಣ ಅಮಾತ್ಯ (ಮಂತ್ರಿ) ಕೌಟಿಲ್ಯ ರಕ್ಷಣೆಯಲ್ಲಿ ಕಡೆಯ ನಂದ ದೊರೆಯನ್ನು (ಧನನಂದ) ಪದಚ್ಯುತಗೊಳಿಸಿ ಕ್ರಿ.ಪೂ.,321ರಲ್ಲಿ ತನ್ನ 25ನೇ ವಯಸ್ಸಿನಲ್ಲಿ ಅಧಿಕಾರಕ್ಕೆ ಬಂದ ಚಂದ್ರಗುಪ್ತಮೌರ್ಯನು ತನ್ನ ಅಧಿಕಾರವನ್ನು ಮತ್ತು ವಿಶಾಲ ಸಾಮ್ರಾಜ್ಯ ಹೊಸ ರಾಜ ಸಂತತಿಯಾದ ಮೌರ್ಯ ಸಂತತಿಯನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದನು.

### 48.4.1 ಬಿಂದುಸಾರ (ಕ್ರಿ.ಪೂ.297-272)

ಚಂದ್ರಗುಪ್ತಮೌರ್ಯನ ನಂತರ ಅವನ ಮಗ ಬಿಂದುಸಾರನು ಅಧಿಕಾರಕ್ಕೆ ಬಂದನು. ಗ್ರೀಕರು ಇವನನ್ನು ಅಮಿತ್ರೊಚೇಟ್ಸ್ ಎಂದು ಕರೆದಿದ್ದಾರೆ. (ಸಂಸ್ಕೃತದಲ್ಲಿ ಅಮಿತ್ರಘಾತ ಶತ್ರುನಾಶಕ)

ಬಿಂದುಸಾರನು ದಖನ್ನಿನಲ್ಲಿ ದಂಡಯಾತ್ರೆಯನ್ನು ಕೈಗೊಂಡು ದಕ್ಷಿಣದಲ್ಲಿ ಮೈಸೂರಿನವರೆಗಿನ ಪ್ರದೇಶದ ಮೇಲೆ ಮೌರ್ಯರ ಹತೋಟಿಯನ್ನು ವಿಸ್ತರಿಸಿದನು. ಅವನು ಅರಬ್ಬೀ ಸಮುದ್ರ ಮತ್ತು ಬಂಗಾಳಕೊಲ್ಲಿಯ ಎರಡು ಸಮುದ್ರಗಳ ನಡುವಿನ ಪ್ರದೇಶವನ್ನು ಗೆದ್ದನೆಂದು ಊಹಿಸಲಾಗಿದೆ.

ಆದಾಗ್ಯೂ ಪೂರ್ವ ಕರಾವಳಿಯಲ್ಲಿ ಕಳಿಂಗ (ಅಧುನಿಕ ಒರಿಸ್ಸಾ) ಮೌರ್ಯರಿಗೆ ಶತೃವಾಗಿಯೇ ಉಳಿಯಿತು ಮತ್ತು ಬಿಂದುಸಾರನ ಉತ್ತರಾಧಿಕಾರಿ.ಆದ ಅವನ ಮಗ ಅಶೋಕನ ಆಳ್ವಿಕೆಯ ಕಾಲದಲ್ಲಿ ಅದನ್ನು ಆಕ್ರಮಿಸಲಾಯಿತು.

ವಿದೇಶೀ ನೀತಿಯಲ್ಲಿ ಬಿಂದುಸಾರನು ಗ್ರೀಕರೊಂದಿಗೆ ತನ್ನ ತಂದೆಯು ಸ್ಥಾಪಿಸಿದ ಸ್ನೇಹ ಸಂಬಂಧಗಳನ್ನು ಮುಂದುವರಿಸಿದನು.

ಬಿಂದುಸಾರನು ಸಿರಿಯಾದ ದೊರೆ ಆಂಟಿಯೋಕಸನನ್ನು ದ್ರಾಕ್ಷಾರಸ, ಅಂಜುರ ಮತ್ತು ತತ್ವಜ್ಞಾನಿಯೊಬ್ಬನನ್ನು ತನಗೆ ಕಳುಹಿಸಿಕೊಡುವಂತೆ ಕೇಳಿಕೊಂಡನಿ. ಆಂಟಿಯೋಕ್‌ಸ್ಸನು ದ್ರಾಕ್ಷಾರಸ ಮತ್ತು ಅಂಜುರವನ್ನು ಕಳುಹಿಸಿಕೊಟ್ಟನಾದರೂ ತತ್ವಜ್ಞಾನಿಗಳು ಮಾರಾಟಕ್ಕಿಲ್ಲವೆಂದು ವಿನಿಯಪೂರ್ವಕವಾಗಿಯೇ ಉತ್ತರ ಕಳುಹಿಸಿದನು.

ಬಿಂದುಸಾರನು ಅಜೀವಿಕರ ಪೋಷಕವಾಗಿದ್ದನು.

## 48.5. ಅಶೋಕ (ಕ್ರಿ.ಪೂ.268-232)

ಕ್ರಿ.ಪೂ.272ರಲ್ಲಿ ಬಿಂದುಸಾರನ ಮರಣಾನಂತರ ಉತ್ತರಾಧಿಕಾರಕ್ಕಾಗಿ ಅವನ ಮಕ್ಕಳ ನಡುವೆ ಹೋರಾಟ ಏರ್ಪಟ್ಟಿತು. ಇದು ನಾಲ್ಕು ವರ್ಷಗಳಿ ಕಾಲ ನಡೆದು ಕ್ರಿ.ಪೂ. 268ರಲ್ಲಿ ಅಶೋಕನು ಅದರಲ್ಲಿ ಯಶಸ್ವಿಯಾಗಿ ಹೊರಬಂದನು.

### 48.5.1 ಅಶೋಕನ ಜನನ.

ಅಶೋಕನ ದಾನದಿಂದ ತಿಳಿದುಬರುವಂತೆ ಸುಬದ್ರಾಂಗಿ ಅಶೋಕನ ತಾಯಿ. ಅದು ಅವಳನ್ನು ಚಂಪಾದ ಬ್ರಾಹ್ಮಣನೊಬ್ಬನ ಮಗಳೆಂದು ವಿವರಿಸಿದೆ. ದಿವ್ಯವದಾನದ ಹೇಳಿಕೆಯು ಅಶೋಕವದಾನದ ಹೇಳಿಕೆಯೊಂದಿಗೆ ತಾಳೆಯಾಗುತ್ತದೆ. ಅವಳನ್ನು ಜನಪದ ಕಲ್ಯಾಣಿ ಎಂದು ಕರೆಯಲಾಗಿದ್ದು, ಅದು ಸುಬದ್ರಾಂಗಿಯ ಮತ್ತೊಂದು ರೂಪವಾಗಿದೆ. ಸಿಂಹಳದ ಆಧಾರ ಗ್ರಂಥವಾದ ವಂಸತ್ತ ಪಕಾಸಿನಿಯಲ್ಲಿ ರಾಜಮಾತೆಯನ್ನು ಧರ್ಮ ಎಂದು ಕರೆಯಲಾಗಿದೆ.

ದಂತಕಥೆಯಂತೆ .ಯುವರಾಜನಾಗಿದ್ದ ಅಶೋಕನನ್ನು ಉಜ್ಜಯಿನಿಯ ರಾಜ್ಯಪಾಲನನ್ನಾಗಿ ನೇಮಿಸಲಾಗಿತ್ತು. ಬೌದ್ಧ ಗ್ರಂಥಗಳಿಂದ ನಮಗೆ ತಿಳಿದು ಬರುವಂತೆ, ಬಿಂದುಸಾರನ ಆಳ್ವಿಕೆಯ ಕಾಲದಲ್ಲಿ ತಕ್ಷಶಿಲೆಯಲ್ಲಿ ದಂಗೆಯೊಂದು ಸಂಭವಿಸಿತು ಮತ್ತು ಅದನ್ನು ಅಡಗಿಸಲು ಅಶೋಕನನ್ನು ಕಳುಹಿಸಲಾಯಿತು. ಅಶೋಕನು ಅಲ್ಲಿನ ಜನರ ವಿರೋಧವನ್ನು ಕಟ್ಟಿಕೊಳ್ಳದೆ ದಂಗೆಯನ್ನು ಅಡಗಿಸಿದನು.

ಅಶೋಕನು ಉಜ್ಜಯಿನಿಯ ರಾಜ್ಯಪಾಲನಾಗಿದ್ದಾಗ, ವಿದಿರಾ ನಗರದ ವರ್ತಕನೊಬ್ಬನ ಮಗಳಾದ ದೇವಿ ಅಥವಾ ವಿದಿಶಾ ಮಹಾದೇವಿ ಅಥವಾ ಸಾಕ್ಯನಿ ಎಂಬುವವಳನ್ನು ಪ್ರೇಮಿಸಿದನು. ಕಾರುವಾಕಿ ಮತ್ತು ಅಸಂಘಿಮಿತ್ರ ಅಶೋಕನ ಇತರ ಇಬ್ಬರು ಚಿರಪರಿಚಿತ ರಾಣಿಯರು ಅಶೋಕನ ಎರಡನೇ ಪತ್ನಿ ಕಾರುವಾಕಿಯ ಹೆಸರನ್ನು ಅಲಹಾಬಾದಿನ ಸ್ಥಂಭವೊಂದರ ಅವಳ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಅವಳನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿರುವ ಅಶೋಕನ ಒಬ್ಬನೇ ಮಗ ರಾಜಕುಮಾರ ತಿವಾರನ ತಾಯಿಯೆಂದು ವಿವರಿಸಲಾಗಿದೆ.

### 48.5.2 ಸಿಂಹಾಸನಾರೋಹಣ

ಅಶೋಕನ ಸಿಂಹಾಸನಾರೋಹಣಕ್ಕೆ ಸಂಬಂಧಿಸಿದಂತೆ ಆಧಾರಗಳಲ್ಲಿ ಅಶೋಕನು ಯುವರಾಜನಾಗಿರಲಿಲ್ಲವೆಂಬ . ಆದರೆ ತನ್ನ ಸಹೋದರರನ್ನು ಕೊಂದು ನಂತರ ಅಧಿಕಾರಕ್ಕೆ ಬಂದನೆಂಬ ಸಾಮಾನ್ಯ ಅಭಿಪ್ರಾಯವಿದೆ . ಆದಾಗ್ಯೂ ಈ ಆಧಾರಗಳಲ್ಲಿ (ಗ್ರಂಥಗಳಲ್ಲಿ) ಹೋರಾಟದ ಸ್ವರೂಪದ ಬಗ್ಗೆ ಮತ್ತು ಅವನ ಸಹೋದರರ ಸಂಖ್ಯೆಯ ಬಗ್ಗೆ ಒಮ್ಮತದ ಅಭಿಪ್ರಾಯವಿಲ್ಲ. ಮಹಾವಂಶದಲ್ಲಿ ಒಂದು ಕಡೆ ಅಶೋಕನು ರಾಜನಾಗಲು ತನ್ನ ಅಣ್ಣನನ್ನು (ಹಿರಿಯ ಸಹೋದರ) ಕೊಂದನೆಂದು ಹೇಳಿದ್ದರೆ, ಅದೇ ಕೃತಿಯಲ್ಲಿ ಮತ್ತೊಂದು ಕಡೆ ಮತ್ತು ದೀಪವಂಶದಲ್ಲಿ ಅವನು ತನ್ನ 99ಮಂದಿ ಸಹೋದರರನ್ನು ಕೊಂದನೆಂದು ಹೇಳಲಾಗಿದೆ.

ಅಶೋಕನು ತನ್ನ 99 ಮಂದಿ ಸಹೋದರರನ್ನು ಕೊಂದನಾದರೂ ತನ್ನ ಅಣ್ಣನ ಕಿರಿಯ ಸಹೋದರ ತಿಷ್ಯನನ್ನು ಉಳಿಸಿ ಮುಂದೆ ಅವನನ್ನು ಉಪ ರಾಜಪ್ರತಿನಿಧಿಯನ್ನಾಗಿ ಮಾಡಿದನೆಂದು ಮಹಾವಂಶ ತಿಳಿಸುತ್ತದೆ.

ತಾರಾನಾಥನಿಂದ ತಿಳಿದುಬರುವಂತೆ ಸಿಂಹಾಸನವನ್ನೇರಿದ ನಂತರ ಅಶೋಕನು ಅನೇಕ ವರ್ಷಗಳನ್ನು ಸಂತೋಷಕರವಾಗಿ ಕಳೆದನು ಮತ್ತು ಅದರಿಂದಾಗಿಯೇ ಅವನನ್ನು ಕಾಮಾಶೋಕನೆಂದು ಕರೆಯಲಾಗಿದ್ದಿತು. ನಂತರದ ಕಾಲದಲ್ಲಿ ಅವನು ಅತ್ಯಂತ ಕ್ರೂರಿಯಾಗಿದ್ದು ಚಂಡಾಶೋಕನೆಂಬ ಹೆಸರನ್ನು ಪಡೆದನು. ಅಂತಿಮವಾಗಿ ಬೌದ್ಧಧರ್ಮಕ್ಕೆ ಅವನ ಮತಾಂತರ ಮತ್ತು ನಂತರದ ಧರ್ಮನಿಷ್ಠೆಗಳಿಂದ ಅವನನ್ನು ಧರ್ಮಾಶೋಕನೆಂದು ಕರೆಯಲಾಯಿತು.

### 48.5.3 ಕಳಿಂಗ ಯುದ್ಧ

ಕ್ರಿ.ಪೂ.260 ರಲ್ಲಿ ಕಳಿಂಗದೊಂದಿಗೆ ತನ್ನ ವಿಜಯಶಾಲಿ ಯುದ್ಧದ ನಂತರ ಬೌದ್ಧಧರ್ಮಕ್ಕೆ ಮತಾಂತರವು ಅಶೋಕನ ಆಳ್ವಿಕೆಯ ಅತ್ಯಂತ ಪ್ರಮುಖ ಘಟನೆಯೊಗಿದೆ. ಕಳಿಂಗವು ದಕ್ಷಿಣ ಭಾರತಕ್ಕೆ ಭೂ ಮಾರ್ಗ ಮತ್ತು ಸಮುದ್ರ ಮಾರ್ಗಗಳೆರಡರ ಮೇಲೂ ಹತೋಟಿಯನ್ನು ಹೊಂದಿದ್ದಿತು. ಆದ್ದರಿಂದ ಅದನ್ನು ಮೌರ್ಯ ಸಾಮ್ರಾಜ್ಯದ ಭಾಗವನ್ನಾಗಿ ಮಾಡಿಕೊಳ್ಳುವುದು ಅವಶ್ಯಕವಾಗಿತ್ತು.

13ನೇ ಬೃಹತ್ ಬಂಡೆಗಲ್ಲು ಶಾಸನವು ಈ ಯುದ್ಧದಲ್ಲಿ ನಡೆದ ಕ್ರೌರ್ಯ ಮತ್ತು ಸಂಕಟಗಳು ಹಾಗೂ ಇದರಿಂದ ಅಶೋಕನಿಗಾದ ಪಶ್ಚಾತ್ತಾಪಗಳನ್ನು ಕಣ್ಣಿಗೆ ಕಟ್ಟಿದಂತೆ ವರ್ಣಿಸುತ್ತದೆ. ಮೌರ್ಯರ ಸಾಮ್ರಾಟನ ಮಾತಿನಲ್ಲೇ ಹೇಳುವುದಾದರೆ, '150 ಸಹಸ್ರ ಜನರು ಸೆರೆಸಿಕ್ಕಿದರು. 100 ಸಹಸ್ರ ಜನರು ಹತರಾದರು ಮತ್ತು ಇದಕ್ಕೂ ಹೆಚ್ಚುಪಟ್ಟು ಜನರು ನಾಶವಾದರು ..............' ಕಳಿಂಗ ಯುದ್ಧದಿಂದುಂಟಾದ ಅಪಾರ ಹಾನಿ ಮತ್ತು ಸಾವುನೋವುಗಳಿಂದ ಬಹಳವಾಗಿ ನೊಂದ ಮೌರ್ಯ ಸಾಮ್ರಾಟನು ಯುದ್ಧದ ನಂತರ ತಕ್ಷಣವೇ ನಾಟಕೀಯವಾಗಿ ಬೌದ್ಧಧರ್ಮಕ್ಕೆ ಪರಿವರ್ತನೆಗೊಂಡನು. ಆದರೆ ಈ ಅಭಿಪ್ರಾಯ ಸರಿಯಲ್ಲ. ಅವನ ಒಂದು ಶಾಸನವಾದ ಬಾಬ್ರ ಶಾಸನದಿಂದ ತಿಳಿದುಬರುವಂತೆ ಎರಡು ವರ್ಷಗಳಿಗೂ ಹೆಚ್ಚು ಕಾಲದ ನಂತರವೇ ಅವನು ಬೌದ್ಧ ಸನ್ಯಾಸಿ ಬುದಗುಪ್ತನ ಪ್ರಭಾವದಿಂದ ಬೌದ್ಧಧರ್ಮದ ನಿಷ್ಠಾವಂತ ಬೆಂಬಲಿಗನಾದನು.

ಅಶೋಕನ ಆಳ್ವಿಕೆಯ ಕಾಲದಲ್ಲಿ ಮೊಗ್ಗಲೀಪುತ್ರ ತಿಷ್ಯನ ಅಧ್ಯಕ್ಷತೆಯಲ್ಲಿ ಬೌದ್ಧಧರ್ಮವನ್ನು ಪುನರ್‌ವ್ಯವಸ್ಥೆಗೊಳಿಸಲಾಯಿತು. ಆದರೆ ಸಾಮ್ರಾಟನೇ ತನ್ನ ಶಾಸನಗಳಲ್ಲಿ ಈ ವಿಷಯವನ್ನು ಉಲ್ಲೇಖಿಸಿರುವುದಿಲ್ಲ. ಅಲ್ಲದೆ ಈ ಸಮ್ಮೇಳನದಲ್ಲಿಯೇ ಭಾರತ ಉಪಖಂಡದ ವಿವಿಧ ಭಾಗಗಳಿಗೆ ಧರ್ಮಪ್ರಚಾರಕರನ್ನು ಕಳುಹಿಸಲು ಮತ್ತು ಬೌದ್ಧ ಧರ್ಮವನ್ನು ಸಕ್ರಿಯ ಬಹುಸಂಖ್ಯಾತ ಧರ್ಮವನ್ನಾಗಿ ಮಾಡಲು ತೀರ್ಮಾನಿಸಲಾಯಿತು.

ಈ ವೇಳೆಗೆ ಹೊರಪ್ರಪಂಚದೊಂದಿಗೆ ಸಂಪರ್ಕಗಳು ಅಭಿವೃದ್ಧಿ ಹೊಂದಿದ್ದವು. ಪ್ರಾಕ್ಚಾರಿತ್ರಿಕ ಮಾಹಿತಿಯ ಸಮರ್ಥನೆಯೊಂದಿರೆ ಅಶೋಕನ ಶಾಸನಗಳು ಮೌರ್ಯ ಸಾಮ್ರಾಜ್ಯದ ವಿಸ್ತಾರವನ್ನು ತಿಳಿಯಲು ಇರುವ ವಿಶ್ವಾಸಾರ್ಹ ಮಾರ್ಗದರ್ಶಿಯಾಗಿದೆ, ಮಗದವು ಮೌರ್ಯರ ಮೂಲ ಪ್ರಾಂತವಾಗಿದ್ದು, ಪಾಟಲೀಪುತ್ರ ಅದರ ರಾಜಧಾನಿಯಾಗಿತ್ತು. ಉಜ್ಜಯಿನಿ, ತಕ್ಷಶಿಲ, ಭುವನೇಶ್ವರಕ್ಕೆ ಸಮೀಪದ ತೋಸಾಲಿ, ಕೌಶಂಬಿ ಮತ್ತು ಆಂಧ್ರಪ್ರದೇಶದ ಸುವರ್ಣಗಿರಿ ಶಾಸನಗಳಲ್ಲಿ ಕಂಡುಬರುವ ಇತರ ಪ್ರಮುಖ ನಗರಗಳು.

ನೇಪಾಳದ ಪರ್ವತದ ತಪ್ಪಲುಗಳು ಮೌರ್ಯ ಸಾಮ್ರಾಜ್ಯದ ಭಾಗಗಳಾಗಿದ್ದುದರಿಂದ ಅಧುನಿಕ ನೇಪಾಳದ ಭಾಗಗಳೊಂದಿಗೆ ಮೌರ್ಯರ ನಿಕಟ ಸಂಬಂಧಗಳನ್ನು ಹೊಂದಿದ್ದರು. ಮೌರ್ಯರ ಪ್ರಭಾವವು ಗಂಗಾ ನದಿಯ ಮುಖಜ ಭೂಮಿ. ಬರ್ಮಾ, ಶ್ರೀಲಂಕಾ ಮತ್ತು ದಕ್ಷಿಣ ಭಾರತದವರೆಗೂ ವಿಸ್ತರಿಸುತ್ತು. ಪಶ್ಚಿಮ ಕರಾವಳಿಯಲಿ ನರ್ಮದಾ ನದಿಯ ಮುಖಭಾಗದ ಬ್ರೋಚ್ ಪ್ರಮುಖ ಬಂದರು ಪಟ್ಟಣವಾಗಿತ್ತು. ಕಾಂದಹಾರವು ಮೌರ್ಯ ಸಾಮ್ರಾಜ್ಯದ ಪಶ್ಚಿಮದ ಅತ್ಯಂತ ದೂರದ ಭಾಗವಾಗಿತ್ತು. ವಾಯುವ್ಯ

ಭಾಗದ ಮೂಲಕ ಮೌರ್ಯರು ನೆರೆ ಸೆಲ್ಯುಕಸನ ಸಾಮ್ರಾಜ್ಯ ಮತ್ತು ಗ್ರೀಕ್ ರಾಜ್ಯಗಳೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದರು. ಶ್ರೀಲಂಕಾದೊಂದಿಗೆ ಮೌರ್ಯರ ಸಂಬಂಧಗಳು ಅತ್ಯಂತ ಗಾಡವಾಗಿದ್ದು, ಅಶೋಕನು ತನ್ನ ಮಗ ಮಹೇಂದ್ರ ಮತ್ತು ಮಗಳಾದ ಸಂಘಮಿತ್ರರನ್ನು ಬೌದ್ಧಧರ್ಮ ಪ್ರಚಾರಕ್ಕಾಗಿ ಶ್ರೀಲಂಕಾಕ್ಕೆ ಕಳುಹಿಸಿಕೊಟ್ಟನು. ದಕ್ಷಿಣ ಭಾರತದಲ್ಲಿ ಅಶೋಕನು ಚೋಳರು, ಪಾಂಡ್ಯರು, ಸತಿಯಪುತ್ರರು ಮತ್ತು ಕೇರಳ ಪುತ್ರರೊಂದಿಗೆ ಸ್ನೇಹ ಒಪ್ಪಂದಗಳನ್ನು ಮಾಡಿಕೊಂಡಿದ್ದನು. (ಬೃಹತ್ ಬಂಡೆಗಲ್ಲು ಶಾಸನ11).

### 48.5.4 ಅಶೋಕನ ಧಾರ್ಮಿಕ ನೀತಿ(ಧರ್ಮ)

ಅಶೋಕನ ಧಾರ್ಮಿಕ ನೀತಿ (ಧಮ್ಮ)ಯನ್ನು ಬಹುಮಟ್ಟಿಗೆ ಬೌದ್ಧ ಧರ್ಮಕ್ಕೆ ಅವನ ಮತಾಂತರವೆಂದೇ ಪರಿಗಣಿಸಲಾಗಿದೆ (ಸಮೀಕರಿಸಲಾಗಿದೆ). ವಿಶಾಲ ಮೌರ್ಯ ಸಾಮ್ರಾಜ್ಯದಲ್ಲಿ ವಿವಿಧ ಧಾರ್ಮಿಕ ಭಾವನೆಗಳು ಮತ್ತು ಆಚರಣೆಗಳು ಅಸ್ತಿತ್ವದಲ್ಲಿದವು. ಆದರೆ ಬೌದ್ಧಧರ್ಮಸ ಜೈನಧರ್ಮ ಮತ್ತು ಅಜೀವಕರು ಮುಂತಾದ ಪಂಗಡಗಳು ಬ್ರಾಹ್ಮಣರ ತಿರಸ್ಕಾರಕ್ಕೆ ಗುರಿಯಾಗಿದ್ದು ಅವರ ಸ್ಥಾನಮಾನಗಳನ್ನು ನಿರ್ಲಕ್ಷಿಸಲಾಗಿತ್ತು. ವಾಯುವ್ಯ ಭಾಗದಲ್ಲಿ ಅಪಾರ ಸಂಖ್ಯೆಯಲ್ಲಿದ್ದ ವಿದೇಶಿಯರ ಮೌರ್ಯರ ಕಾಲದಲ್ಲಿದ್ದ ಸಂಪ್ರದಾಯ ವಿರೋಧಿಗಳ ಮತ್ತೊಂದು ಅಂಶವಾಗಿತ್ತು. ಸಾಮಾಜಿಕ ಉದ್ವಿಗ್ನತೆಯನ್ನು ಮತ್ತು ಮತಪಂಥಗಳ ಘರ್ಷಣೆಗಳನ್ನು ಕೊನೆಗೊಳಿಸಲು ಮತ್ತು ವಿಶಾಲ ಸಾಮ್ರಾಜ್ಯದ ವಿಭಿನ್ನ ಜನರ ನಡುವೆ ಸೌಹಾರ್ಧ ಸಂಬಂಧವನ್ನು ಬೆಳೆಸಲು ಅಶೋಕನು ತನ್ನ ಧಾರ್ಮಿಕ ನೀತಿಯನ್ನು (ಧಮ್ಮ) ಪ್ರತಿಪಾದಿಸಿದನು.

ಅಶೋಕನ ಧರ್ಮವು ಹೊಸ ಧರ್ಮವಾಗಿರಲಿಲ್ಲ. ಇಲ್ಲವೇ ಹೊಸ ರಾಜಕೀಯ ತತ್ವವಾಗಿರಲಿಲ್ಲ. ಬದಲಾಗಿ ಅದು ಒಂದು ಜೀವನ ಮಾರ್ಗವಾಗಿತ್ತು. ಒಂದು ನೀತಿ ಸಂಹಿತೆಯಾಗಿತ್ತು. ಮತ್ತು ಎಲ್ಲಾ ಜನರೂ ಅಳವಡಿಸಿಕೊಂಡು ಆಚರಿಸಬೇಕಾದ ನೀತಿ ನಿಯಮಗಳ ಒಂದು. ಅವನ ಬಂಡೆಗಲ್ಲು ಶಾಸನಗಳು ಅವನ ಧಾರ್ಮಿಕ ನೀತಿಗಳ ಬಗ್ಗೆ ತಳಿಸುತ್ತವೆ. ಅಶೋಕನು ಒಂದು ಧರ್ಮಯಾತ್ರೆಗಳ ಅಥವಾ ಯಾತ್ರೆಗಳ ವ್ಯವಸ್ಥೆಯನ್ನು ಭೋದಿಸಿದನು. ಅಶೋಕನು ಎಂದಿಗೂ ತನತನ ಧರ್ಮಪಂಥದ ನಂಬಿಕೆಗಳನ್ನು ತರರ ಮೇಲೆ ಹೇರಲು ಪ್ರಯತ್ನಿಸಲಿಲ್ಲ. ಸಂಬೋಧಿ ಅಥವಾ ನಿರ್ವಾಣ ಅವನ ನಿರೀಕ್ಷೆಯಾಗಿರಲಿಲ್ಲ. ಬದಲಾಗಿ ಸ್ವರ್ಗ ಮತ್ತು ದೇವತೆಗಳೊಂದಿಗೆ ಮಿಲನವಾಗಿತ್ತು.

### 48.5.5 (ಕಡೆಯ) ನಂತರದ ಮೌರ್ಯರು

ತನ್ನ ಆಳ್ವೀಕೆಯ ಕಡೆಯ ವೇಳೆಗೆ ಸಾಮ್ರಾಜ್ಯದ ವ್ಯವಸ್ಥೆಯ ಮೇಲೆ ಅಶೋಕನ ಹಡಿತ ದುರ್ಬಲಗೊಂಡಿತು. ಕ್ರಿ.ಪೂ. 232 ರಲ್ಲಿ ಅಶೋಕನ ಮರಣದೊಂದಿಗೆ ಮೌರ್ಯ ಸಾಮ್ರಾಜ್ಯ ಅವನತಿ ಹೊಂದಲು ಪ್ರಾರಂಭಿಸಿತು. ನಂತರ ಅದು ಒಡೆದುಹೋಯಿತು. ಕಡೆಯ ಮೌರ್ಯರ ಬಗ್ಗೆ ಆಧಾರಗಳು ಅತ್ಯಂತ ಕಡಿಮೆ. ಮೌರ್ಯ ಸಂತತಿ 137 ವರ್ಷಗಳ ಕಾಲ ಆಳಿತೆಂಬುದು ಎಲ್ಲಾ ಪ್ರಕರಣಗಳ ಒಂದೇ ಅಭಿಪ್ರಾಯವಾಗಿದೆ. ಅಶೋಕನ ಮರಣದ ನಂತರ ಮೌರ್ಯ ಸಾಮ್ರಾಜ್ಯವು ಪಶ್ಚಿಮ ಮತ್ತು ಕಾಶ್ಮೀರಗಳನ್ನೊಳಗೊಂಡ ಪಶ್ಚಿಮ ಭಾಗವನ್ನು ಕುಣ್ಣಾಲನು ಆಳುತ್ತಿದ್ದನು. (ಅಶೋಕನ ಮಕ್ಕಳಲ್ಲಿ ಒಬ್ಬನು) ಮತ್ತು ಸ್ವಲ್ಪಕಾಲ ಸಂಪ್ರಾತಿ ಆಳಿದನು. (ಅಶೋಕನ ಮೊಮ್ಮಗ ಮತ್ತು ಜೈನಧರ್ಮದ ಪೋಷಕ).

ದಕ್ಷಿಣದ ಕಡೆಯಿಂದ ಅನಂತರ ದಖನ್ನಿನಲ್ಲಿ ಅಧಿಕಾರಕ್ಕೆ ಬಂದ ಆಂದ್ರರು ಅಥವಾ ಶಾತವಾಹನರು ಮೌರ್ಯ ಸಾಮ್ರಾಜ್ಯಕ್ಕೆ ಬೆದರಿಕೆಯೊಡ್ಡಿದರು.

ಪಾಟಲೀಪುತ್ರ ರಾಜಧಾನಿಯಾಗಿದ್ದ ಮೌರ್ಯ ಸಾಮ್ರಾಜ್ಯದ ಪೂರ್ವದ ಭಾಗವನ್ನು ದಶರಥನು ಆಳುತ್ತಿದ್ದನು. (ಬಹುಶಃ ಅಶೋಕನ ಮೊಮ್ಮಕ್ಕಳಲ್ಲಿ ಒಬ್ಬನು ಮತ್ತು ಅಜೀವಿಕ ಪಂಥತ ಆಶ್ರಯದಾತ ).

ಪುರಾಣಗಳಂತೆ ದಶರಥನು 8 ವರ್ಷಗಳ ಕಾಲ ಆಳಿದನು. ಆದರೆ ಅವನಿಗೆ ತನ್ನ ಉತ್ತರಾಧಿಕಾರಿಯಾಗುವ ಪ್ರಾಪ್ತ ವಯಸ್ಸಿನ ಮಕ್ಕಳಿರಲಿಲ್ಲ. ಹೀಗೆ ಮೌರ್ಯ ಸಾಮ್ರಾಜ್ಯ ಅವನತಿ ಹೊಂದಲು ಪ್ರಾರಂಭಿಸಿತು. ಮೌರ್ಯ ಸಂತತಿಯ ಕಡೆಯ ರಾಜಕುಮಾರನನ್ನು ಅವನ ದಂಡನಾಯಕ ಪುಶ್ಯಮಿತ್ರ ಸುಂಗನು ಪದಚ್ಯತಗೊಳಿಸಿದನು. ಅವನು ಸುಂಗ ಸಂತತಿಯೆಂಬ ಹೊಸ ಸಂತತಿಯನ್ನು ಸ್ಥಾಪಿಸಿದನು.

## 48.6 ಮೌರ್ಯರ ಅವನತಿ

ಕಳಿಂಗ ಯುದ್ಧದಲ್ಲಿ ಪರ್ಯಾವಸಾನಗೊಂಡ ನಿರಂತರ ಯುದ್ಧಗಳಿಂದ ಜರ್ಝರಿತವಾದ ಮೌರ್ಯ ಸಾಮ್ರಾಜ್ಯವು ಕ್ರಿ.ಪೂ.232 ರಲ್ಲಿ ಅಶೋಕನ ಮರಣಾನಂತರ ಅವನತಿ ಹೊಂದಲು ಪ್ರಾರಂಭಿಸಿತು. ಇಂತ ತ್ವರಿತವಾದ ಅವನತಿಗೆ ಇತಿಹಾಸಕಾರರು ನೀಡಿರುವ ಕಾರಣಗಳು ಎಷ್ಟು ವಿರುದ್ಧವಾಗಿವೆಯೋ ಅಷ್ಟೇ ಗೊಂದಲಮಯವಾಗಿವೆ. ಮೌರ್ಯ ಸಾಮ್ರಾಜ್ಯದ ಅವನತಿಯ ಅತ್ಯಂತ ಸ್ಪಷ್ಟವಾದ ಮತ್ತು ವಿವಾದಾತ್ಮಕ ಕಾರಣಗಳನ್ನು ಮುಂದೆ ಚರ್ಚಿಸಲಾಗಿದೆ.

ಅಶೋಕನ ನಂತರ ಅಧಿಕಾರಕ್ಕೆ ಬಂದ ದುರ್ಬಲ ದೊರೆಗಳು ಮೌರ್ಯ ಸಾಮ್ರಾಜ್ಯ ಅವನತಿಗೆ ನಿಜವಾದ ಕಾರಣವಾದರು.

ಮತ್ತೊಂದು ಹಾಗೂ ತಕ್ಷಣಕದ ಕಾರಣವೆಂದರೆ ದಶರಥವ ಆಡಳಿತದಲ್ಲಿ ಪೂರ್ವದ ಭಾಗ ಮತ್ತು ಕುಣ್ಣಾಲನ ಆಡಳಿತದಲ್ಲಿ ಪಶ್ಚಿಮದ ಭಾಗವಾಗಿ ಸಾಮ್ರಾಜ್ಯವನ್ನು ಎರಡು ಭಾಗಗಳಾಗಿ ವಿಭಜಿಸಿದುದು.

ವಿದ್ವಾಂಸರು ಅಭಿಪ್ರಾಯಪಟ್ಟಿರುವಂತೆ ಅಶೋಕನ ಬೌದ್ಧಪರ ನೀತಿಗಳು ಮತ್ತು ಅವನ ಉತ್ತರಾಧಿಕಾರಿಗಳ ಜೈನಪರ ನೀತಿಗಳು ಬ್ರಾಹ್ಮಣರನ್ನು ದೂರವಾಗುವಂತೆ ಮಾಡಿ ಸುಂಗ ಸಂತತಿಯ ಸ್ಥಾಪಕನಾದ ಪ್ರುಶ್ಯಮಿತ್ರ ಸುಂಗನ ದಂಗೆಗೆ ಕಾರಣವಾಯಿತು.

ಅಶೋಕನು ಅಹಿಂಸಾ ನೀತಿಗೆ ನೀಡಿದ ಮಹತ್ವವು ಸಾಮ್ರಾಜ್ಯ ಮತ್ತು ಸೈನಿಕ ಶಕ್ತಿಗಳ ದುರ್ಬಲಗೊಳ್ಳುವಂತೆ ಮಾಡಿದವು.

ಈ ಎರಡು ವಾದಗಳು ಸರಳವಾಗಿವೆ.

ಡಿ-ಡಿ ಕೋಸಂಬಿ ಮುಂತಾದ ಕೆಲವು ಇತಿಹಾಸಕಾರರು ಮಂಡಿಸಿರುವ ಮತ್ತೊಂದು ಕಾರಣವೆಂದರೆ ಕಡೆಯ ದೊರೆಗಳ ಆಳ್ವಿಕೆಯ ಕಾಲದಲ್ಲಿ ಮೌರ್ಯರ ಆರ್ಥಿಕ ವ್ಯವಸ್ಥೆಯು ತೀವ್ರವಾದ ಒತ್ತಡಕ್ಕೊಳಗಾಗಿ ಅತಿಯಾದ ತೆರಿಗೆಯನ್ನು ವಿಧಿಸಲು ಕಾರಣವಾಯಿತು.

ಮೌರ್ಯರ ಸರ್ಕಾರವು ವಿವಿಧ ಆಧಾಯ ಮೂಲಗಳ ಮೇಲೆ ವಿಧಿಸುತ್ತಿದ್ದ ತೆರಿಗೆಗಳಿಂದ ಆಧಾಯವನ್ನು ಪಡೆಯುತ್ತಿದ್ದಿತು. ರಾಜ್ಯದ ಆಡಳಿತ ಯಂತ್ರವನ್ನು ನಿರ್ವಹಿಸಲು ಅದು ಆಧಾಯವನ್ನು ಬೆಳೆಸುವುದು ಮತ್ತು ವಿಸ್ತರಿಸಬೇಕಾಗಿದ್ದಿತು. ದುರದೃಷ್ಟವಶತ್ ಮೌರ್ಯರು ಆಧಾಯದ ಸಾಧ್ಯತೆ ( ಸಾಮರ್ಥ್ಯ)ಯನ್ನು ಹೆಚ್ಚಿಸಲು ಕಾರಣವಾಯಿತು.

ನೆರೆಯ ಪ್ರದೇಶಗಳಿಗೆ ಗಂಗಾ ಬಯಲಿನ ಭೌತಿಕ ಸಂತತಿಯ ವಿಸ್ತರಣೆಯು ಹೊಸ ರಾಜ್ಯಗಳ ರಚನೆಗೆ ಕಾರಣವಾಯಿತು.

ಮೌರ್ಯ ಸಾಮ್ರಾಜ್ಯದ ಸಹಜವಾದ ಆರ್ಥಿಕ ದೌರ್ಬಲ್ಯದ ಜೊತೆಗೆ ಇತರ ಅಂಶಗಳು ಮೌರ್ಯ ಸಾಮ್ರಾಜ್ಯದ ಪತನಕ್ಕೆ ಕಾರಣವಾದವು.

## 48.7 ಸಾರಾಂಶ- ಉಪಸಂಹಾರ

ಆ ಘಟಕದಲ್ಲಿ ನಾವು ಭಾರತದ ಮೊದಲ ಐತಿಹಾಸಿಕ ಸಾಮ್ರಾಜ್ಯವು ಅಸ್ಥಿತ್ವಕ್ಕೆ ಬಂದ ಬಗೆ ಮತ್ತು ಅದರ ರಚನೆಯನ್ನು ನಿಮಗೆ ಪರಿಚಯಿಸಲು ಪ್ರಯತ್ನಿಸಿದ್ದೇವೆ. ಈ ನಿರ್ದಿಷ್ಟ ಘಟಕದಲ್ಲಿ ನಾವು ಕೆಳಗೆ ಸೂಚಿಸಿರುವ ಅಂಶಗಳನ್ನು ತಿಳಿಯಲು ಸಾಧ್ಯವಾಗಬೇಕು.

ಮೌರ್ಯ ಸಾಮ್ರಾಜ್ಯದ ಆಯಕಟ್ಟಿನ ಸ್ಥಾನದ ಮಹತ್ವ ಮತ್ತು ಅದರ ಪ್ರಬಲ್ಯಕ್ಕೆ ಕಾರಣವಾದ ಅಂಶಗಳು.

ಮೌರ್ಯರ ರಾಜಕೀಯ ಇತಿಹಾಸವನ್ನು ರಚಿಸಲು ಬಳಸಿಕೊಳ್ಳಬಹುದಾದ ಆಧಾರಗಳು.

ಮೌರ್ಯರ ಪ್ರಾರಂಭದ ಇತಿಹಾಸಕದ ಪ್ರಮುಖ ಘಟನೆಗಳು.

* ಭಾರತದ ಪಾರಂಭದ ಇತಿಹಾಸದ ಸಂದರ್ಭದಲ್ಲಿ 'ಸಾಮ್ರಾಜ್ಯದ ಕಲ್ಪನೆ'ಯ ಬಗ್ಗೆ ವಿವರಣೆ,
* ಮೌರ್ಯ ಸಂತತಿಯ ಮೂಲಕ್ಕೆ ಸಂಬಂಧಪಟ್ಟ ವಿವರಣೆಗಳು

* ಚಂದ್ರಗುಪ್ತಮೌರ್ಯ, ಬಿಂದುಸಾರ ಮತ್ತು ಅಶೋಕನ ಮೌರ್ಯನ ಸಾಮ್ರಾಜ್ಯ ವಿಸ್ತರಣಾ ನೀತಿಗಳು.

* ಅಶೋಕನ ಜನನ, ಸಿಂಹಾಸನಾರೋಹಣದ ಸುತ್ತಲಿರುವ ತೊಡಕುಗಳು ಮತ್ತು ಕಳಿಂಗ ಯುದ್ಧದವರೆಗಿನ (ಧ[illegible]) ಮತ್ತು ಬೌದ್ಧ ಧರ್ಮಕ್ಕೆ ಅವನ ಆಶ್ರಯ.

* ಅಶೋಕನ ಮರಣ ಮತ್ತು ಕಡೆಯದಾಗಿ ಮೌರ್ಯ ಸಾಮ್ರಾಜ್ಯದ ಅವನತಿಗೆ ಮುಖ್ಯ ಕಾರಣಗಳು.

# ಘಟಕ - 49

## ಮೌರ್ಯ ಕಾಲದ ಆಡಳಿತ, ಆರ್ಥಿಕ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆ

### ರಚನೆ


49.0 ಉದ್ದೇಶಗಳು

49.1 ಪೀಠಿಕೆ

49.2 ಹಿನ್ನೆಲೆ

49.3 ಕೇಂದ್ರಾಡಳಿತ- I

- 49.3.1. ರಾಜ (ಸಾಮ್ರಾಟ)
- 49.3.2. ಮಂತ್ರಿಮಂಡಲ
- 49.3.3 ನಗರಾಡಳಿತ

49.4 ಕೇಂದ್ರಾಡಳಿತ -II

- 49.4.1. ಸೈನ್ಯ
- 49.4.2. ಗೂಢಚಾರ ವ್ಯವಸ್ಥೆ
- 49.4.3. ಕಂದಾಯ ಆಡಳತ -ಇಲಾಖೆ
- 49.4.4. ನ್ಯಾಯಾಡಳಿತ ಮತ್ತು ಆರಕ್ಷರ ಇಲಾಖೆ
- 49.4.5. ಲೋಕೋಪಯೋಗಿ ಕಾರ್ಯಗಳು

49.5 ಪ್ರಾದೇಶಿಕ ಮತ್ತು ಸ್ಥಳೀಯ ಆಡಳಿತ ಘಟಕಗಳು

- 49.5.1. ಪ್ರಾಂತಾಡಳಿತ
- 49.5.2. ನಗರಾಡಳಿತ - ಜಿಲ್ಲಾ ಮತ್ತು ಗ್ರಾಮಾಡಳಿತ

49.6 ಸಾಮಾಜಿಕ ಪರಿಸ್ಥಿತಿ

- 49.6.1. ಜಾತಿಪದ್ಧತಿ
- 49.6.2. ಸ್ತ್ರೀಯರ ಸ್ಥಾನಮಾನ
- 49.6.3 ಸಾಮಾಜಿಕ ವ್ಯವಸ್ಥೆಯ ಇತರ ಪ್ರಮುಖ ಅಂಶಗಳು

49.7 ಆರ್ಥಿಕ ಪರಿಸ್ಥಿತಿ - ಆರ್ಥಿಕ ವ್ಯವಸ್ಥೆ

- 49.7.1 ವ್ಯವಸಾಯ
- 49.7.2 ಆಧಾಯ ಮೂಲಗಳು.
- 49.7.3 ವ್ಯಾಪಾರ ಮತ್ತು ನೌಕಾಯಾನ
- 49.7.4 ಕುಶಲಕಲೆಗಳು ಮತ್ತು ಕೈಗಾರಿಕೆಗಳು
- 49.7.5 ಹಣಕಾಸಿನ ವ್ಯವಸ್ಥೆ ಮತ್ತು ನಾಣ್ಯಪದ್ಧತಿ

49.8 ಇತರ ದೇಶಗಳೊಂದಿಗೆ ಸಂಬಂಧಗಳು

49.9 ಉಪಸಂಹಾರ -ಸಾರಾಂಶ

## 49.0 ಉದ್ದೇಶಗಳು

ಈ ಘಟಕದನ್ನು ಓದಿದ ನಂತರ ನಾವು ಇವುಗಳ ಬಗ್ಗೆ ತಿಳಿಯಲು ಸಾಧ್ಯವಾಗಬೇಕು.

* ಮೌರ್ಯ ಸಾಮ್ರಾಜ್ಯವು ನಿರ್ಮಿಸಿದ್ದ ವಿಶಾಲ ಆಡಳಿತಯಂತ್ರದ ಬಗ್ಗೆ ತಿಳಿಯುವುದು.

* ಅದರ ಅನೇಕ ಶಾಖೆಗಳು ಮತ್ತು ಹುದ್ದೆಗಳು ಅವರ ಅಧಿಕಾರಗಳು ಹಾಗೂ ಕರ್ತವ್ಯಗಳನ್ನು ಪರಿಚಯ ಮಾಡಿಕೊಳ್ಳುವುದು.

* ವಿವಿಧ ಹಂತಗಳ ಆಡಳಿತ ವ್ಯವಸ್ಥೆಗಳ ನಡುವೆ ವ್ಯಾತ್ಯಾಸವನ್ನು ಗುರುತಿಸುವುದು.

* ಸೈನ್ಯದ ಪಾತ್ರ, ಗೂಡಚಾರ ವ್ಯವಸ್ಥೆ ಮತ್ತು ಕಾನೂನಿನ ವ್ಯವಸ್ಥೆಯ ಮಹತ್ವದ ಬಗ್ಗೆ ತಿಳಿದುಕೊಳ್ಳುವುದು.

* ಪ್ರಾದೇಶಿಕ ಮತ್ತು ಸ್ಥಳೀಯ ಆಡಳಿತ ಘಟಕಗಳ ಕಾರ್ಯಗಳ ಬಗ್ಗೆ ತಿಳಿಯುವುದು.

* ಸಮಾಜದ ಬಗ್ಗೆ ಅಥವಾ ಸಾಮಾಜಿಕ ಸ್ಥಿತಿಗಳ ಪರಿಚಯ ಮಾಡಿಕೊಳ್ಳುವುದು .

* ವ್ಯವಸಾಯ, ವ್ಯಾಪಾರ, ಕುಶಲಕಲೆಗಳು ಮತ್ತು ಹಣಕಾಸಿನ ವ್ಯವಸ್ಥೆಗಳ ಬಗ್ಗೆ ತಿಳಿದುಕೊಳ್ಳುವುದು.

ಇತರ ದೇಶಗಳೊಂದಿಗೆ ಮೌರ್ಯರ ಸಂಬಂಧಗಳು ಮತ್ತು ಅವುಗಳ ಬಗ್ಗೆ ಬದಲಾದ ನೀತಿಗಳನ್ನು ತಿಳಿದುಕೊಳ್ಳವುದು.

## 49.1 ಪೀಠಿಕೆ

ಕ್ರಿ.ಪೂ.3ನೇ ಶತಮಾನದ ವೇಳೆಗೆ ಮಗದವನ್ನು ಕೇಂದ್ರವನ್ನಾಗಿ ಹೊಂದಿ ಮೌರ್ಯ ರಾಜ್ಯವು ಭದ್ರವಾಗಿ ಸ್ಥಾಪಿಸಲ್ಪಟ್ಟಿದ್ದಿತು. ವಿಶಾಲ ಪ್ರದೇಶಗಳು ಅದರ ಹತೋಟಿಹಗೊಳಪಟ್ಟಿದ್ದು ಅದಕ್ಕಾಗಿ ಒಂದು ಆಡಳಿತ ಯಂತ್ರವನ್ನು ಹೊಂದಿದ್ದಿತು.

ಈ ಆಡಳಿತ ಯಂತ್ರವು ತನ್ನ ವ್ಯಾಪ್ತಿಯಲ್ಲಿ ಅನೇಕ ಹಂತದ ಆಡಳಿತಗಳಾದ ಸಾಮ್ರಾಜ್ಯದ ಕೇಂದ್ರ ಭಾಗದ (ಮಗದ) ಪ್ರಾದೇಶಿಕ ಕೇಂದ್ರಗಳುಸ, ಗಡಿಭಾಗಗಳು, ಪಟ್ಟಣಗಳು, ಗ್ರಾಮಗಳು, ಮುಂತಾದವುಗಳ ಆಡಳಿತವನ್ನು ಒಳಗೊಂಡಿದ್ದಿತು. ಅಲ್ಲದೆ ರಾಜನ ಅಧಿಕಾರ ಮತ್ತು ಆಜ್ಞೆಗಳನ್ನು ಸಹಿಸಿಕೊಳ್ಳುವ ಜೊತೆಗೆ ಆಡಳಿತವು ನ್ಯಾಯಾಡಳಿತ, ಸೈನ್ಯ, ಗೂಡಚಾರ. ಕಂದಾಯ ಸಂಗ್ರಹಣೆ. ಕರಕುಶಲಕಲೆಗಳು ಮುಂತಾದ ಅನೇಕ ಚಟುವಟಿಕೆಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡಿದ್ದಿತು. ಈ ಘಟಕದಲ್ಲಿ ಕೇಂದ್ರ ವಿಷಯಗಳನ್ನು ಚರ್ಚಿಸಲಾಗಿದೆ. ಅರ್ಥಶಾಸ್ತ್ರ, ಗ್ರೀಕರ ಬರವಣಿಗೆಗಳು ಮತ್ತು ಅಶೋಕನ ಶಾಸನಗಳ ಮುಂತಾದ ಅನೇಕ ಬಗೆಯ ಅಧಾರಗಳಿಂದ ನಾವು ಮೌರ್ಯರ ಡಳಿತ ವ್ಯವಸ್ಥೆಯ ಬಗ್ಗೆ ಉತ್ತಮ ಚಿತ್ರವನ್ನು ಪಡೆಯಬಹುದಾಗಿದೆ.

ಈ ಘಟಕದಲ್ಲಿ ನಾವು ಮೌರ್ಯ ಸಾಮ್ರಾಟರು ಇತರ ಸಮಕಾಲೀನ ಭಾರತ ಮತ್ತು ವಿದೇಶಿ ರಾಷ್ಟ್ರಗಳೊಂದಿಗೆ ಹೊಂದಿದ್ದ ಸಂಬಂಧಗಳ ಬಗ್ಗೆಯೂ ಚರ್ಚಿಸುತ್ತೇವೆ. ಆದರೆ ವಿಷಯಗಳನ್ನು ವಿಶ್ಲೇಷಿಸುವ ಮೊದಲು ನಾವು ಮೌರ್ಯರ ಆಡಳಿತ ವ್ಯವಸ್ಥೆಯ ಏಳಿಗೆಯ ಹಿನ್ನೆಲೆಯನ್ನು ಚರ್ಚಿಸಬೇಕಾಗಿದೆ.

## 49.2 ಹಿನ್ನೆಲೆ

ಮಗದ ಮಹಾಜನಪದವು ಚಂದ್ರಗುಪ್ತಮೌರ್ಯನ ಕಾಲಕ್ಕೆ ಒಂದು ಬಲಿಷ್ಠ ಸಾಮ್ರಾಜ್ಯದ ಕೇಂದ್ರವಾಯಿತು. ಕ್ರಿ.ಪೂ. 6ನೇ ಶತಮಾನದಲ್ಲಿದ್ದಂತೆ ಅದರ ಪ್ರದೇಶಗಳು ಗಂಗಾ ಬಯಲಿಗೆ ಮಾತ್ರವಷ್ಟೇ ಸೀಮಿತವಾಗಿರಲಿಲ್ಲ. ಅಶೋಕನ ಕಾಲದ ಹೊತ್ತಿಗೆ ದಕ್ಷಿಣದ ತುತ್ತತುದಿ ಮತ್ತು ಪೂರ್ವ ಹಾಗೂ ಈಶಾನ್ಯ ಭಾರತದ ದೂರದ ಭಾಗಗಳನ್ನು ಬಿಟ್ಟು ಇಡೀ ಭಾರತದ ಉಪಖಂಡವು ನಿಜವಾಗಿಯೂ ಮೌರ್ಯರ ಹತೋಟಿಗೊಳಪಟ್ಟಿದ್ದಿತು.

ಆದಾಗ್ಯೂ ಈ ಕಾಲದಲ್ಲಿ ಕೆಲವು ಅಂಕಗಳನ್ನು ಗಮನಿಸಬೇಕು.

* ಬೇಟೆಗಾರರು - ಸಂಗ್ರಹಗಾರರು ವಾಸಿಸುತ್ತಿದ್ದ ವ್ಯಾಪಕವಾದ ಇನ್ನೂ ಕೆಲವು ಅರಣ್ಯಗಳು ಮತ್ತು ಪ್ರದೇಶಗಳು ಇದ್ದವು.

* ಮುಖ್ಯವಾಗಿ ಗಂಗಾ ಬಯಲಿನಂತಹ ಅಗತ್ಯಕ್ಕಿಂದಲೂ ಹೆಚ್ಚಾದ ಹೆಚ್ಚಗಿ ಉಳಿದ ಕೃಷಿ ಉತ್ಪನ್ನಗಳನ್ನೊಳಗೊಂಡ ಪ್ರದೇಶಗಳೂ ಇದ್ದವು.

* ನಗರ ಪ್ರದೇಶಗಳು ವ್ಯಾಪಾರ ಮತ್ತು ಕರಕುಶಲವಸ್ತುಗಳ ಉತ್ಪಾಧನೆಯ ಚಟುವಟಿಗೆಯ ಕೇಂದ್ರಗಳಾಗಿ ಹೊರಹೊಮ್ಮಿದವು.

* ಸರ್ಕಾರವು ಹೆಚ್ಚುವರಿ ಉತ್ಪಾದನೆಯನ್ನು ಪಡೆದು ಆದಾಯವನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದ್ದಿತು.

ಮೌರ್ಯರ ಆಡಳಿತವು ವ್ಯವಸ್ಥಿತ ರೀತಿಯಲ್ಲಿ ತನ್ನ ಕೆಲಸಕಾರ್ಯಗಳನ್ನು ನಡೆಸುತ್ತಿದ್ದಿತು. ಮತ್ತು ಅವುಗಳಿಗೆ ಸಂಬಂಧಿಸಿದ ಅಎಕ ವಿಷಯಗಳನ್ನು ನಾವು ಚರ್ಚಿಸೋಣ. ಪ್ರಮುಖವಾಗಿ ನಾವು ಕೇಂದ್ರೀಯ ಪ್ರಾಂತೀಯ ಮತ್ತು ಸ್ಥಳೀಯ ಆಡಳಿತ ಘಟಕಗಳು ಮತ್ತು ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸೋಣ.

## 49.3. ಕೇಂದ್ರಾಡಳಿತ - I

ಮೌರ್ಯ ಸಾಮ್ರಾಜ್ಯವು ಕೇಂದ್ರ ಮತ್ತು ಪ್ರಾದೇಶಿಕ ವೆಂಬ ಪ್ರಮುಖ ಆಡಳಿತ ಘಟಕಗಳನ್ನು ಹೊಂದಿತ್ತು. ಈ ಎಲ್ಲಾ ಘಟಕಗಳು ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು. ಆದರೆ ಅವು ಕೇಂದ್ರದ ಅಧಿಕಾರದ ಹತೋಟಿಯಲ್ಲಿದ್ದವು. ಕೇಂದ್ರಾಡಾಳಿತವನ್ನು ಈ ಕೆಲವು ಭಾಗಗಳಾಗಿ ವಿಂಗಡಿಸಬಹುದು.

### *49.3.1.* ರಾಜ


ಪ್ರಾರಂಭದ ಸಣ್ಣಪುಟ್ಟ ರಾಜ್ಯಗಳಿಗೆ ವ್ಯತಿರಿಕ್ತವಾಗಿ ಮೌರ್ಯ ಸಾಮ್ರಾಜ್ಯದ ಸ್ಥಾಪನೆಯು ಹೊಸದಾದ ಕೇಂದ್ರೀಕೃತ ಸಾಮ್ರಾಜ್ಯ ಮಾದರಿಯ ಸರ್ಕಾರ ಸ್ಥಾಪನೆಗೆ ಕಾರಣವಾಯಿತು. ಮೌರ್ಯ ಸಾಮ್ರಾಜ್ಯವು ಒಂದು ರಾಜಕೀಯ ವ್ಯವಸ್ಥೆಯಾಗಿ ಬಣರಾಜ್ಯಗಳ ಮೇಲೆ ರಾಜಪ್ರಭುತ್ವದ ವಿಜಯವನ್ನು ಸೂಚಿಸುತ್ತದೆ. ರಾಜನು ಈ ವ್ಯವಸ್ಥೆಯ ಕೇಂದ್ರವಾಗಿದ್ದು ಕಾನೂನುಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಹೊಂದಿದ್ದನು. ಕೌಟಿಲ್ಯನು ವರ್ಣ (ಜಾತಿ) ಮತ್ತು ಆಶ್ರಮಗಳನ್ನು (ಜೀವನದ ಹಂತಗಳು ) ಆದರಿಸಿದ ಸಾಮಾಜಿಕ ವ್ಯವಸ್ಥೆಯು ನಾಶವಾದಾಗ ಧರ್ಮವನ್ನು ಸಾರುವಂತೆ ರಾಜನಿಗೆ ಉಪದೇಶಿಸಿದ್ದಾನೆ. ಕೌಟಿಲ್ಯನು ರಾಜನನ್ನು ಧರ್ಮಪ್ರವರ್ಧಕ ಅಥವಾ ಸಾಮಾಜಿಕ ವ್ಯವಸ್ಥೆಯ ಪ್ರೇರಕನೆಂದು ಕರೆದಿದ್ದಾನೆ. ರಾಜನಿಗೆ ಸಲಹೆಯನ್ನು ನೀಡಲು ಮಂತ್ರಿಪರಿಷತ್ ಎಂಬ ಸಚಿವರ ಸಭೆಯಿದ್ದು ಸಂದರ್ಭಗಳಲ್ಲಿ ಅದು ರಾಜಕೀಯ ತಡೆಯಂತೆ ಕಾರ್ಯ ನಿರ್ವಹಿಸುತ್ತಿದ್ದಿತು.

ಅಶೋಕನ ಕಾಲದಲ್ಲಿ ಮೌರ್ಯರ ಕೇಂದ್ರೀಕೃತ ರಾಜಪ್ರಭುತ್ವವು ಪಿತೃಸದೃಶ ಪ್ರಭುತ್ವವಾಯಿತು. ಅಶೋಕನ ತನ್ನ ಮೊದಲ ಪತ್ಯೇಕ ಶಾಸನದಲ್ಲಿ (ದೌಲಿ ಮತ್ತು ಜೌಗುಡ) "ಸಾವ್ವೆ ಮುನಿಸ್ಸೆ ಪಾಜಮಾಮ" (ಎಲ್ಲಾ ಮನುಷ್ಯರೂ ನನ್ನ ಮಕ್ಕಳು) ಎಂದು ಹೇಳಿದ್ದಾನೆ.

ಮೌರ್ಯ ದೊರೆಗಳು ರಾಜಪದವಿ ಮತ್ತು ದೈವದತ್ತಾಧಿಕಾರಗಳ ನಡುವೆ ಸಂಬಂಧವನ್ನು ಪ್ರಯತ್ನಿಸಿದ್ದರೂ ಯಾವುದೇ ದೈವ ಮೂಲವನ್ನು ಪ್ರತಿಪಾದಿಸಿಲ್ಲ. ರಾಜನು ಎಲ್ಲಾ ಸರ್ಕಾರಿ ಚಟುವಟಿಕೆಗಳ ಮೂಲ ಚಿಲುಮೆಯಾಗಿದ್ದವು.

ರಾಜನು ರಾಜ್ಯದ ಸರ್ವಶ್ರೇಷ್ಠ ಅಧಿಕಾರಿಯಾಗಿದ್ದನು. ಅರ್ಥಶಾಸ್ತ್ರವು ಆಡಳಿತದ ಎಲ್ಲಾ ವಿಷಯಗಳಲೂ ರಾಜನಿಗೆ ಪರಮಾಧಿಕಾರವನ್ನು ನೀಡುತ್ತದೆ. ಅನೇಕ ಗ್ರಂಥಗಳಲ್ಲಿ (ಸಪ್ತಾಂಗ) ಏಳು ಎಲುಬುಗಳೆಂದು ಉಲ್ಲೇಖಿಸಿರುವ ರಾಜ್ಯದ ಏಳು ಅಂಗಗಳಲ್ಲಿ ರಾಜನಿಗೆ ಅದು ಪ್ರಮುಖ ಸ್ಥಾನವನ್ನು ನೀಡುತ್ತದೆ.

ಸಪ್ತಾಂಗಗಳು - ಭಾಗಗಳು



## 49.3.2 *ಸಚಿವ ಸಂಪುಟ*

ಸಚಿವ ಸಂಪುಟ ಅಥವಾ ಮಂತ್ರಿಪರಿಷದ್ ರಾಜನಿಗೆ ಸಲಹೆ ನೀಡುತ್ತಿದ್ದಿತು ಮತ್ತು ಸಂದರ್ಭಗಳಲ್ಲಿ ರಾಜನ ಅಧಿಕಾರದ ಮೇಲೆ ಅಂಕುಶವನ್ನು ಹೇರುತ್ತಿದ್ದಿತು. ಮಂತ್ರಿಗಳನ್ನು ರಾಜನೇ ನೇಮಕ ಮಾಡುತ್ತಿದ್ದುದರಿಂದ ಸಚಿವ ಸಂಪುಟದ ಅಧಿಕಾರಗಳು ಸೀಮಿತವಾಗಿದ್ದವು. ಅರ್ಥಶಾಸ್ತ್ರವು ಮಂತ್ರಿಗಳಿಗೆ ಹುಟ್ಟು, ಪಾವಿತ್ರ್ಯತೆ ಮತ್ತು ಚಾಣಾಕ್ಷತನವೆಂಬ ಮೂರು ಮುಖ್ಯ ಯೋಗ್ಯತೆಗಳ ಬಗ್ಗೆ ಒತ್ತಿ ಹೇಳುತ್ತದೆ. ಮಂತ್ರಿಗಳ ಸಂಖ್ಯೆ ನಿಗದಿಪಡಿಸಲ್ಪಟ್ಟಿರಲಿಲ್ಲ ಮತ್ತು ಅದು ಅಗತ್ಯಕ್ಕೆ ತಕ್ಕಂತೆ ಬದಲಾಗುತ್ತಿದ್ದಿತು.

ಸಚಿವ ಸಂಪುಟ ಅಥವಾ ಮಂತ್ರಪರಿಶದ್ ಮುಖ್ಯಮಂತ್ರಿ ಹಾಗೂ ಇತರ ಮೂರು ಅಥವಾ ನಾಲ್ಕು ಮಂತ್ರಿಗಳನ್ನೊಳಗೊಂಡ ಒಂದು ಸಣ್ಣ ಗುಂಪಾಗಿದ್ದು, ಆಂತರಿಕ ಸಭೆ ಅಥವಾ ನಿಕಟ ಸಲಹಾ ಸಮಿತಿಯಂತೆ ಕಾರ್ಯ ನಿರ್ವಹಿಸಲು ಆಯ್ಕೆ ಮಾಡಲಾಗಿದ್ದಿತು. ಪುರೋಹಿತ, ಸೇನಾಪತಿ (ದಂಡನಾಯಕ), ಮಹಾಮಂತ್ರಿ ಮತ್ತು ಯುವರಾಜ ಮಂತ್ರಿಪರಿಷದ್ದಿನ ಪ್ರಮುಖ ಸದಸ್ಯರಾಗಿದ್ದರು.

### ಅಮಾತ್ಯರು

ಅಮಾತ್ಯರು ಒಂದು ಬಗೆಯ ಆಡಳಿತ ಸಿಬ್ಬಂದಿ ಅಥವಾ ನೌಕರಾಗಿದ್ದು ಉನ್ನತ ಆಡಳಿತ ಹಾಗೂ ನ್ಯಾಯಾಂಗ ಹುದ್ದೆಗಳನ್ನು ಅಲಂಕರಿಸಿದ್ದರು.

ಅವರ ಪಾತ್ರ ಮತ್ತು ಕರ್ತವ್ಯಗಳು ಅತ್ಯಂತ ಮುಖ್ಯವಾಗಿದ್ದು ಎಲ್ಲಾ ಸರ್ಕಾರಿ ಕಾರ್ಯಗಳು ಅವರಿಂದ ಪಾರಂಭವಾಗುತ್ತಿದ್ದವು(ಮುಂದುವರಿಯುತ್ತಿದ್ದವು).

### ಅಧೀಕ್ಷಕರು- ಅಧ್ಯಕ್ಷರು.

ಕೇಂದ್ರಾಡಳಿತನ್ನು ಅತ್ಯಂತ ನುರಿತ ಅಧೀಕ್ಷಕರು ಅಥವಾ ಅಧ್ಯಕ್ಷರು ನಿರ್ವಹಿಸುತ್ತಿದ್ದರು. ಅವರು ವಿವಿಧ ಇಲಾಖೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು. ಕೌಟಿಲ್ಯನು ತನ್ನ ಅರ್ಥಶಾಸ್ತ್ರದ ಎರಡನೇ ಅಧ್ಯಾಯದಲ್ಲಿದ್ದ ಅಧ್ಯಕ್ಷ ಪ್ರಚಾರಾದಲ್ಲಿ ಸುಮಾರು 27 ಅಧ್ಯಕ್ಷರ ಕಾರ್ಯದ ವಿವರಣೆಯನ್ನು ನೀಡಿದ್ದಾನೆ. ಕೆಲವು ಪ್ರಮುಖ ಅಧಿಕಾರಿಗಳನ್ನು ಕೆಳಗೆ ಉಲ್ಲೇಖಿಸಲಾಗೆದೆ.

| | | | |
|---|---|---|---|
| 1 | ಅಕ್ಷಪಟಲಾಧ್ಯಕ್ಷ | - | ಮುಖ್ಯ ಲೆಕ್ಕಾಧಿಕಾರಿ |
| 2 | ಸಿತಾಧ್ಯಕ್ಷ | - | ಕೃಷಿ ಅಧೀಕ್ಷಕ |
| 3 | ಅಕರಾಧ್ಯಕ್ಷ | - | ಗಣಿ, ಹವಳ, ಅಮೂಲ್ಯ ಹರಳುಗಳು ಮತ್ತು ಲೋಹ ಅಧೀಕ್ಷಕ |
| 4 | ಲವಣಾಣ್ಯ ಅಧ್ಯಕ್ಷ | - | ಉಪ್ಪಿನ ಅಧೀಕ್ಷಕ |
| 5 | ನವಾಧ್ಯಕ್ಷ | - | ಬಂದರುಗಳ ಅಧೀಕ್ಷಕ |
| 6 | ಪನ್ಯಾಧ್ಯಕ್ಷ | - | ವಾಣಿಜ್ಯ ನಿಯಂತ್ರಣ |
| 7 | ಶುಲ್ಕಾಧ್ಯಕ್ಷ | - | ತೆರಿಗೆ ಮತ್ತು ಸುಂಕಗಳ ಸಂಗ್ರಹಕಾರ. |
| 8 | ಸುರಾಧ್ಯಕ್ಷ | - | ಅಭಿಕಾರಿ ಅಧೀಕ್ಷಕ |
| 9 | ಪೌತವಾಧ್ಯಕ್ಷ | - | ತೂಕ ಮತ್ತು ಅಳತೆಯ ಅಧೀಕ್ಷಕ |
| 10 | ಲಕ್ಷಣಾಧ್ಯಕ್ಷ | - | ಟಂಕಸಾಲೆಯ ಅಧೀಕ್ಷಕ |

## 49.3.3 *ನಗರಾಡಳಿತ*

ಮೆಗಾಸ್ತನೀಸನು ಪಲಿಬೋತ್ರ(ಪಾಟಲಿಪುತ್ರದ) ಸ್ಪಷ್ಟವಾದ ವಿವರಣೆಯನ್ನು ನೀಡಿದ್ದಾನೆ. ಈ ವಿವರಣೆಯು ಅರ್ಥಶಾಸ್ತ್ರಕ್ಕಿಂತ ಭಿನ್ನವಾಗಿದ್ದರೂ ಈ ಕಾಲದ ನಗರಾಡಳಿತಗದ ಬಗ್ಗೆ ತಿಳಿದುಕೊಳ್ಳಲು ನಮಗೆ ಸಹಾಯಕವಾಗಿದೆ. ಈ ವರದಿಯಂತೆ ನಗರ ಸಭೆಯನ್ನು 6 ಉಪಸಮಿತಗಳು ಅಥವಾ ಉಪಮಂಡಳಿಗಳನ್ನಾಗಿ ವಿಂಗಡಿಸಲಾಗಿತ್ತು ಮತ್ತು ಪ್ರತಿಯೊಂದು ಸಮಿತಿಯಲ್ಲೂ ಐವರು ಸದಸ್ಯರಿದ್ದರು.

1 ಮೊದಲನೆ ಸಮಿತಿಯು ಕೈಗಾರಿಕೆ ಮತ್ತು ಕುಶಲಕಲೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಿತು. ಅಂತಹ ಕೇಂದ್ರಗಳ ತಪಾಸಣೆ, ಕೂಲಿಯ ನಿಗದಿ ಮುಂತಾದ ಕೆಲಸಗಳು ಅದರಲ್ಲಿ ಸೇರಿದ್ದವು.

2 ಎರಡನೇ ಸಮಿತಿಯು ವಿದೇಶಿಯರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದಿತು. ತಪಾಸಣೆ, ಆಪಾರ, ವಸತಿ ಮತ್ತು ಸೌಕಾರ್ಯಗಳನ್ನು ಒದಗಿಸುವ ಕಾರ್ಯಗಳ ಅದರಲ್ಲಿ ಸೇರಿದ್ದವು.

3 ಮೂರನೇ ಸಮಿತಿಯು ಜನನ ಮತ್ತು ಮರಣಗಳ ನೋಂದಣಿಯ ಕಾರ್ಯವನ್ನು ನೋಡಿಕೊಳ್ಳುತ್ತಿದ್ದತು.

4 ವ್ಯಾಪಾರ ಮತ್ತು ವಾಣಿಜ್ಯಗಳ ಮೇಲ್ವಿಚಾರಣೆ ನಾಲ್ಕನೇ ಸಮಿತಿಯ ಕೆಲಸವಾಗಿದ್ದಿತು. ತೂಕ ಮತ್ತುಅಳತೆಯ ತಪಾಸಣೆ, ಮಾರುಕಟ್ಟೆ ನಿಯಂತ್ರಣ ಮುಂತಾದವು ಅದರ ಕರ್ತವ್ಯಗಳಲ್ಲಿ ಸೇರದ್ದವು.

5 ಐದನೇ ಸಮಿತಿಯು ಸಿದ್ಧಾವಸ್ತುಗಳ (ಉತ್ಪಾಧಿಸಲ್ಪಟ್ಟ) ತನಿಖೆ ಮಾಡುತ್ತಿದ್ದಿತು, ಅವುಗಳ ಮಾರಾಟಕ್ಕೆ ವ್ಯವಸ್ಥೆ ಮಾಡುತ್ತಿದ್ದಿತು ಮತ್ತು ಹೊಸ ಹಾಗೂ ಬಳಸಲಾಗಿರುವ ವಸ್ತುಗಳ ನಡುವೆ ವ್ಯತ್ಯಾಸವನ್ನು ಗುರುತಸಿಲು ಕಟ್ಟುನಿಟ್ಟಿನ ನಿಗಾ ವಹಿಸುತ್ತಿದ್ದಿತು.

6 ಆರನೇ ಸಮಿತಿಯು ವಿಕ್ರಮವಾದ ವಸ್ತುಗಳ ಮೇಲೆ 1-10ರ ಪ್ರಮಾಣದಲ್ಲಿ ತೆರಿಗೆಗಳನ್ನು ವಸೂಲು ಮಾಡುತ್ತಿದ್ದಿತು.

## 49.4. ಕೇಂದ್ರಾಡಳಿತ - II

ಆಡಳಿತದ ಇತರ ಕೆಲವು ವಿಷಯಗಳೂ ಕೇಂದ್ರಾಡಳಿತದ ವ್ಯಾಪ್ತಿಗೊಳಪಟ್ಟಿದ್ದವು. ಆದಾಗ್ಯೂ, ಸಾರ್ವಜನಿಕ ಕಲ್ಯಾಣದ ಕೆಲಸ ಮುಂತಾದ ಕೆಲವು ವಿಷಯಿಗಳಲ್ಲಿ ಅನುಷ್ಠಾನವು ಅನೇಕ ಸ್ಥಳೀಯ ಆಡಳಿತ ಘಟಕಗಳನ್ನು ಅವಲಂಭಿಸಿತು.

### *49.4.1 ಸೈನ್ಯ*

ಸಾಮಾನ್ಯವಾಗಿ ರಾಜನೇ ಸೈನ್ಯದ ನಾಯಕತ್ವ ವಹಿಸುತ್ತಿದ್ದನು. ಮೌರ್ಯ ಸಂತತಿಯ ಕಡೆಯ ದೊರೆಯ ಕಾಲದಲ್ಲಿ ಮಾತ್ರವೇ ಸೇನಾಪತಿಯು ರಾಜನನ್ನು ಕಡೆಗಣಿಸಿ ಸೇನಾಪಡೆಗಳ ನಿಷ್ಠೆಯನ್ನು ತನ್ನ ಕಡೆಗೆ ಬದಲಾಯಿಸಿಕೊಂಡುವುದನ್ನು ನಾವು ಕಾಣಹುವುದು. ಪ್ಲಿನಿ ತಿಳಿಸಿರುವಂತೆ ಚಂದ್ರಗುಪ್ತ ಮೌರ್ಯನ ಸೈನ್ಯವು 6,00,000 ಕಾಲಾಳುಗಳು, 30,000 ಅಶ್ವಸೈನಿಕರು, ಮತ್ತು 9,000 ಆನೆಗಳಲ್ಲದೆ ಅನೇಕ ರಥಗಳನ್ನು ಒಳಗೊಂಡಿದ್ದತು. ಸೈನ್ಯವು ಸೇನಾಪತಿಯ ಹತೋಟಿಯಲ್ಲಿದ್ದು ಸೈನ್ಯದ ವಿವಿಧ ಶಾಖೆಗಳು ಮತ್ತು ಘಟಕಗಳು ಅಧ್ಯಕ್ಷರು ಸೇನಾಪತಿಯ ಅಧೀನಕ್ಕೊಳಪಟ್ಟಿದ್ದರು.

**ಕೌಟಿಲ್ಯನು ಸೇನಾಪಡೆಗಳನ್ನು ಅನೇಕ ವರ್ಗಗಳಾಗಿ ವಿಂಗಡಿಸಿದ್ದನು.**

| | | | |
|---|---|---|---|
| 1 | ವಂಶಪಾರಂಪರ್ಯವಾದುದು | - | ಮೌಲ |
| 2 | ಬಾಡಿಗೆ ಸೈನಿಕರು | - | ಭ್ರಿತಕರು |
| 3 | ಕಾಡಿನ ಜನಾಂಗಗಳು ಒದಗಿಸಿದ ಪಡೆಗಳು | - | ಅಟವಿವಲ |
| 4 | ಮಿತ್ರರಾಜ್ಯಗಳ ಒದಗಿಸಿದ ಸೈನ್ಯ | - | ಮಿತ್ರವಲ |

ಕೌಟಿಲ್ಯವು ವೇತನಗಳ ಬಗ್ಗೆಯೂ ಹೇಳಿದ್ದಾನೆ. ಉದಾಹರಣೆಗೆ ಸೇನಾಪತಿಯು ವಾರ್ಷಿಕವಾಗಿ 48,000 ಪಣಗಳ ವೇತನ ಪಡೆಯುತ್ತಿದ್ದನು.

### *49.4.2 ಗೂಡಚಾರ ವ್ಯವಸ್ಥೆ - ಗೂಡಚಾರ ಇಲಾಖೆ.*

ಮೌರ್ಯರ ಆಡಳಿತವು ವ್ಯವಸ್ಥಿತವಾದ ಗೂಡಚಾರ ಜಾಲವನ್ನು ಹೊಂದಿದ್ದಿತು: ಎಲ್ಲಾ ಪ್ರಮುಖ ಅಧಿಕಾರಿಗಳು ಮತ್ತು ಸಾರ್ವಜನಿಕ ಮೇಲೆ ಕಣ್ಣಿಡಲಾಗಿತ್ತು. (ನಿಗಾ ಇಜಲಾಗಿತ್ತು) ಗೂಡಚಾರರಾಗಿ ನೇಮಕ ಮಾಡಲಾಗಿದ್ದವರು ಪ್ರಮುಖ ಕರ್ತವ್ಯಗಳಲ್ಲಿ ಇವುಗಳು ಸೇರಿದ್ದವು.

* ಮಂತ್ರಿಗಳ ಮೇಲೆ ಕಣ್ಣಿಡುವುದು.

* ಸರ್ಕಾರಿ ಅಧಿಕಾರಿಗಳ ಬಗ್ಗೆ ವರದಿ ನೀಡುವುದು.

* ಪ್ರಜೆಗಳ ಅನಿಸಿಕೆಯ ಬಗ್ಗೆ ಅಭಿಪ್ರಾಯಗಳನ್ನು ಸಂಗ್ರಹಿಸುವುದು.

* ವಿದೇಶಿ ದೊರೆಗಳ ರಹಸ್ಯಗಳನ್ನು ತಿಳಿದುಕೊಳ್ಳುವುದು.

ಈ ಚಟುವಟಿಕೆಗಳಿಗೆ ಅವರು ಅಡಿಗೆ ಮಾಡುವವರು, ಕ್ಷೌರಿಕರು ಮುಂತಾದವರ ಸಹಾಯವನ್ನು ಪಡೆಯಬೇಕಾಗಿತ್ತು. ಸುದ್ಧಿಯನ್ನು ಪಡೆಯಲು ಸ್ವತಃ ಗೂಡಚಾರರೇ ವಿದ್ಯಾರ್ಥಿಗಳು, ಸನ್ಯಾಸಿಗಳು ಮುಂತಾದ ಮಾರುವೇಷಗಳನ್ನು ಹಾಕುತ್ತಿದ್ದರು.

ಗುಡ್ಡ ಪುರುಷರು (ರಹಸ್ಯ ಪ್ರತಿನಿಧಿಗಳು) ಗೂಡಚಾರ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದರು. ವಿಷಕನ್ಯೆಯರನ್ನು ಗೂಡಚಾರರನ್ನಾಗಿ ನೇಮಿಸಿಲಾಗಿತ್ತು. ಅವರು ಮೆಗಾಸ್ತನೀಸನ 'ಮೇಲ್ವಿಚಾರಕರು' ಮತ್ತು ಪತಿವೇದಕರು ಅಥವಾ ವಿಶೇಷ ವರದಿಗಾರರು ಮತ್ತು ಅಶೋಕನ ಶಾಸನಗಳ ಪುಲಸಿನಿಗಳು ಅಥವಾ ರಾಜ್ಯದ ಕಾರ್ಯಕರ್ತನ್ನು ಹೋಲುತ್ತಿದ್ದರು.

### *49.4.3 ಕಂದಾಯ ಆಡಳಿತ*

ಕೇಂದ್ರಾಡಳಿತವನ್ನು ಬಹುಮಟ್ಟಿಗೆ ಕಂದಾಯ ಇಲಾಖೆಯ ಹತೋಟಿಗೊಳಪಟ್ಟ, ಅನೇಕ ಇಲಾಖೆ(ಕಚೇರಿ)ಗಳ ಮೂಲಕ ನಡೆಸಲಾಗುತ್ತಿದ್ದಿತು. ಮತ್ತು ಪ್ರತಿಯೊಂದು ಇಲಾಖೆಗೂ ಒಬ್ಬ ಅಧಿಕಾರಿಯಿದ್ದನು.

**ಸನ್ನಿಧಾತ-** ಸನ್ನಿಧಾತ ಅಥವಾ ಖಜಾಂಚಿಯು ಸಾಮ್ರಾಜ್ಯದ ರಾಜನ ಖಜಾನೆ ಮತ್ತು ನಗದು ಹಾಗೂ ವಸ್ತುರೂಪದಲ್ಲಿ ರಾಜ್ಯದ ಆಧಾಯವನ್ನು ಶೇಖರಿಸಿಡುವ ಜವಾಬ್ದಾರಿಯನ್ನು ಹೊಂದಿದ್ದನು.


**ಸಮಹರ್ತ-** ಈ ಅಧಿಕಾರಿಯು ಸಾಮ್ರಾಜ್ಯದ ಅನೇಕ ಭಾಗಗಳಿದಂ ಕಂದಾಯವನ್ನು ವಸೂಲು ಮಾಡುವ ಜವಾಬ್ದಾರಿಯನ್ನು ಹೊಂದಿದ್ದನು. ಮತ್ತು ಅಕ್ಷಪಟಲಾಧ್ಯಖನ (ಲೆಕ್ಕಮಹಾಧೀಕ್ಷಕ) ಕೆಲಸದ ಉಸ್ತುವಾರಿಯನ್ನು ನೋಡಿಕೊಳ್ಳುವ ಮೂಲಕ ಆದಾಯ ಮತ್ತು ಖರ್ಚುಗಳನ್ನು ನೋಡಿಕೊಳ್ಳುತ್ತಿದ್ದನು.

ಅರ್ಥಶಾಸ್ತ್ರದಲ್ಲಿ ಪಟ್ಟಿಮಾಡಿರುವಂತೆ , ಪಟ್ಟಣಗಳು. ಭೂಮಿ, ಗಣಿಗಳು, ಅರಣ್ಯಗಳು, ರಸ್ತೆಗಳು, ಸುಂಕಗಳು, ದಂಡಗಳು, ಪರವಾನಗಿಗಳು, ಉತ್ಪಾಗಿಸಲ್ಪಟ್ಟ ವಸ್ತುಗಳು, ಅನೇಕ ಬಗೆ. ವ್ಯಾಪಾರದ ಸರಕುಗಳು ಮತ್ತು ಬೆಲೆ ಬಾಳುವ ಪರಳುಗಳು ಕಂದಾಯ ಮೂಲಗಳಲ್ಲಿ ಸೇರಿದ್ದವು. ಭೂಕಂದಾಯ ಪ್ರಮುಖ ಆಧಾಯ ಮೂಲವಾಗಿದ್ದು ಉತ್ಪಾದನೆಯ 1-6ರಿಂದ 1-4ನೇ ಭಾಗವಾಗಿತ್ತು ಮತ್ತು ಅದನ್ನು ಇಕಂದಾಯದ ಅಧಿಕಾರಿಗಳು ಸಂಗ್ರಹಿಸುತ್ತಿದ್ದರು. ಎಲ್ಲಾ ವಸ್ತುಗಳ (ದವಸ, ದನಕರು ಮತ್ತು ಇತರ ಕೆಲವು ವಸ್ತುಗಳನ್ನು ಬಿಟ್ಟು) ಮೇಲೆ ವಿಧಿಸುತ್ತಿದ್ದ ಸುಂಕ ತೆರಿಗೆ ಎರಡನೇ ಕಂದಾಯ ಅಥವಾ ಆದಾಯ ಮೂಲವಾಗಿತ್ತು.


ದೈಹಿಕ ಶ್ರಮದಿಂದ ಬದುಕುತ್ತಿದ್ದ ಶೂದ್ರರು, ಕುಶಲ ಕರ್ಮಿಗಳು ಮತ್ತು ಇತರರು ಪ್ರತಿಯೊಂದು ತಿಂಗಳಿನಲ್ಲೂ ಒಂದು ದಿವಸ ಉಚಿತ ಕೆಲಸ ಮಾಡಬೇಕಾಗಿತ್ತು. ರಾಜನ ಸ್ವತಃ ತೋಟ ಅಥವಾ ರಾಜನ ಭೂಮಿಯಿಂದ ಸಿತ ಎಂಬ ಆದಾಯ ಬರುತ್ತಿದ್ದಿತು. ಅಶೋಕನ ಶಾಸನಗಳಲ್ಲಿ ಬಲಿ ಮತ್ತು ಭಾಗ ಎಂಬ ಎರಡು ವಿಧವಾದ ತೆರಿಗೆಗಳ ಉಲ್ಲೇಖವಿದೆ. (ರುಮ್ಮಿಯಾದಿ ಶಾಸನ). ಭಾಗವನ್ನು ಕೃಷಿ ಉತ್ಪನ್ನ ಮತ್ತು ಧನಕರುಗಳ ಮೇಲೆ 1-6 ಪ್ರಾಮಾಣದಲ್ಲಿ ವಿಧಿಸಲಾಗಿತ್ತು. (ಷಡಭಾಗ). ಆದರೆ ಬಲಿ ಒಂದು ಧಾರ್ಮಿಕ ಕಾಣಿಕೆಯಾಗಿತ್ತು.

ಅರ್ಥಶಾಸ್ತ್ರದ ಪ್ರಕಾರ ಬ್ರಾಹ್ಮಣರು, ಸ್ತ್ರೀಯರು, ಮಕ್ಕಳು, ಶಸ್ತ್ರಾಗ್ರದ ಅಧಿಕಾರಿಗಳು ಮತ್ತು ರಾಜನ ಅಂಗರಕ್ಷಕರು ತೆರಿಗೆಯಿಂದ ವಿನಾಯಿತಿ ಪಡೆದಿದ್ದರು.

**ಕಂದಾಯದ ಒಳ ಪರಿವು (ಆಧಾಯ)**




**ಕಂದಾಯದ ಹೊರಪರಿವು (ಖರ್ಚು)**




### *49.4.4 ನ್ಯಾಯಾಂಗ ಮತ್ತು ಆರಕ್ಷಕ ಇಲಾಖೆ*

ರಾಜನು ಸಾಮ್ರಾಜ್ಯದ ನ್ಯಾಯಾಂಗದ ಮುಖ್ಯಸ್ಥನಾಗಿದ್ದನು. ಕಾನೂನಿನ ಚಿಲುಮೆಯಾಗಿದ್ದನು ಮತ್ತು ಗಂಬೀರ ಪರಿಣಾಮಗಳ ವಿಷಯಗಳನ್ನು ಅವನೇ ಇತ್ಯರ್ಥ ಮಾಡುತ್ತಿದ್ದನು. ಕೌಟಿಲ್ಯನ ಎರಡು ಬಗೆಯ ನ್ಯಾಯಾಲಯಗಳು ಅಸ್ಥಿತ್ವದಲ್ಲಿದ್ದುದನ್ನು ಉಲ್ಲೇಖಿಸಿದ್ದಾನೆ.

1 ಧರ್ಮಸ್ಥಿಯಾಗಳು (ನಾಗರಿಕ ವಿಷಯಗಳಿಗೆ ಸಂಬಂಧಿಸಿದ)

2 ಕಂಠಕಶೋಧನಗಳು (ಅಪರಾ ಮೊಕದ್ದಮ್ಮೆಗಳಿಗೆ ಸಂಬಂಧಿಸಿದ)

ನಗರಗಳು ಮತ್ತು ಗ್ರಾಮಗಳಲ್ಲಿ ಪ್ರಾದೇಶಿಕರು, ಮಹಾಮಾತ್ರರು ಮತ್ತು ರಾಜುಕರು ಅಧ್ಯಕ್ಷತೆಯ ವಿಶೇಷ ನ್ಯಾಯಾಲಯಗಳಿದ್ದವು. ಕೌಟಿಲ್ಯನು ನಾಲ್ಕು ಕಾನೂನುಗಳ ಮೂಲಗಳನ್ನು ಉಲ್ಲೇಖಿಸಿದ್ದಾನೆ. ಅವುಗಳೆಂದರೆ

1 ಧರ್ಮ (ಪವಿತ್ರ ಕಾನೂನು)

2 ವ್ಯವಹಾರ (ಬಳಕೆ)

3 ಚರಿತಂ(ರೂಡಿಗಳು ಮತ್ತು ನಿದರ್ಶನಗಳು)

4 ರಾಜಶಾಸನ (ರಾಜನ ಘೋಷಣೆಗಳು)

ಪ್ರಾದೇಶಿಕರು, ಪ್ರಮುಖ ಆರಕ್ಷಕ ಅಧಿಕಾರಿಯಾಗಿದ್ದು, ತನ್ನ ವ್ಯಾಪ್ತಿಯ ಪ್ರದೇಶದಲ್ಲಿ ನಡೆಯುವ ಅಪರಾಧಗಳನ್ನು ತನಿಖೆ ಮಾಡುವುದು ಅವರ ಕರ್ತವ್ಯವಾಗಿತ್ತು. ಆರಕ್ಷರ ಮುಖ್ಯ ಕಚೇರಿಗಳು ಎಲ್ಲಾ ಪ್ರಮುಖ ಕೇಂದ್ರಗಳಲ್ಲಿ ಇದ್ದವು. ಬಂಧನಗಾರ ಅಥವಾ ನಿಜವಾದ ಬಂಧಿಖಾನೆಯು ಚರಕವೆಂದು ಕರೆಯಲಾದ ಆರಕ್ಷಕ ಕೈದಿಯ ಕೋಣೆಯಿಂದ ಭಿನ್ನವಾಗಿತ್ತು.

## 49.5. ಪ್ರಾದೇಶಿಕ ಮತ್ತು ಸ್ಥಳೀಯ ಆಡಳಿತ ಘಟಕಗಳು

### *49.5.1 ಪ್ರಾಂತೀಯ ಮತ್ತು ಸ್ಥಳೀಯ ಆಡಳಿತ*

ನೇರ ಆಳ್ವಿಕೆಯ ನಗರ ಪ್ರದೇಶಗಳಲ್ಲದೆ ಸಾಮ್ರಾಜ್ಯವನ್ನು ನಾಲ್ಕು ಪ್ರಾಂತಗಳನ್ನಾಗಿ ವಿಂಗಡಿಸಲಾಗಿದ್ದಿತು. ಪ್ರತಿಯೊಂದು ಪ್ರಾಂತವು ಒಬ್ಬ ರಾಜಕುಮಾರ ಅಥವಾ ರಾಜಕುಟುಂಬದ ಸದಸ್ಯನ ಆಡಳಿತಕ್ಕೊಳಪಟ್ಟಿತು.(ಕುಮಾರ ಮತ್ತು ಆರ್ಯಪುತ್ರ). ಅಶೋಕನ ಕಾಲದಲ್ಲಿ ನಾಲ್ಕು ಪ್ರಾಂತಗಳಿದ್ದವು; ಉತ್ತರ ಪ್ರಾಂತ (ಉತ್ತರಾಪಥ), ಪೂರ್ವಪ್ರಾಂತ (ಪ್ರಾಚ್ಯಪಥ), ದಕ್ಷಿಣಪಥ(ದಕ್ಷಿಣಾಪಥ), ಪಶ್ಚಿಮ ಪ್ರಾಂತ(.............), ಮಹಾಮತ್ತರ ಅತ್ಯಂತ ಪ್ರಮುಖ ಅಧಿಕಾರಿಗಳಲ್ಲಿ ಒಬ್ಬವಾಗಿದ್ದನು. ಅವನು ಒಬ್ಬ ಹಿರಿಯಅಧಿಕಾರಿಯಾಗಿದ್ದನು.

ಪ್ರಾಂತಗಳನ್ನು ಜಿಲ್ಲೆಗಳಾಗಿ ಉಪವಿಭಾಗಿಸಲಾಗಿತ್ತು ಮತ್ತು ಜಿಲ್ಲಾಡಳಿತವನ್ನು ನೋಡಿಕೊಳ್ಳಲು ಅನೇಕ ಅಧಿಕಾರಿಗಳಿದ್ದರು. ಜಿಲ್ಲಾಡಳಿತದ ಮೂರು ಪ್ರಮುಖ ಅಧಿಕಾರಿಗಳೆಂದರೆ, ಪ್ರಾದೇಶಿಕಸ ರಾಜುಕ ಮತ್ತು ಯುಕ್ತ. ಪ್ರಾದೇಶಿಕರು ಜಿಲ್ಲೆಯ ಸಮಗ್ರ ಆಡಳಿತದ ಜವಬ್ದಾರಿಯನ್ನು ಹೊಂದಿದ್ದರು. ರಾಜುಕರು ಭೂಮಿಯ ಸರ್ವೇಕ್ಷಣೆ ಮತ್ತು ಕಂದಾಯ ನಿಗದಿಯ ಜವಬ್ದಾರಿಯನ್ನು ಹೊಂದಿದ್ದರು. ಯುಕ್ತರು ಅಧೀನ ಅಧಿಕಾರಿಗಳಾಗಿದ್ದು ಮುಖ್ಯವಾಗಿ ಕಚೇರಿಯ ಕೆಲಸ ಮತ್ತು ಲೆಕ್ಕ ತಪಾಸಣೆಯ ಜವಾಬ್ದಾರಿಯನ್ನು ಹೊಂದಿದ್ದರು.

ಜಿಲ್ಲಾ ಮಟ್ಟದ ಆಡಳಿತ ಮತ್ತು ಗ್ರಾಮ ಮಟ್ಟದ ಆಡಳಿತಗಳ ನಡುವೆ ಒಂದು ಮಧ್ಯವರ್ತಿ ಮಟ್ಟದ ಆಡಳಿತವಿದ್ದಿತು. ಈ ಆಡಳಿತ ಘಟಕವನ್ನು 5-10 ಗ್ರಾಮಗಳಿಂದ ರಚಿಸಲಾಗಿತ್ತು. ಗೋಪ ಮತ್ತು ಸ್ಥಾನಿಕ ಗ್ರಾಮಾಡಳಿತದ ಇಬ್ಬರು ಪ್ರಮುಖ ಅಧಿಕಾರಿಗಳಾಗಿದ್ದರು. ಗ್ರಾಮವು ಆಡಳಿತವು ಅತ್ಯಂತ ಸಣ್ಣ ಘಟಕವಾಗಿದ್ದಿತು. ಮತ್ತು ಬಹುಮಟ್ಟಿಗೆ ಸ್ವಾಯತ್ತತೆಯನ್ನು ಹೊಂದಿದ್ದಿತು. ಗ್ರಾಮಿಕ ಗ್ರಾಮದ ಮುಖ್ಯಸ್ಥವಾಗಿದ್ದನು.

### *49.5.2 ನಗರಾಡಳಿತ*

ಅರ್ಥಶಾಸ್ತ್ರವು ನಗರಿಕ ಅಥವಾ ನಗರ ಅಧೀಕ್ಷಕವ ಬಗ್ಗೆ ಉಲ್ಲೇಖಿಸಿದ್ದು ಅವನು ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿದ್ದನು. ಅವನು ಗೋಪ ಮತ್ತು ಸ್ಥಾನಿಕ ಎಂಬ ಇಬ್ಬರು ಅಧೀನ ಅಧಿಕಾರಿಗಳು ನೆರವನ್ನು ಪಡೆಯುತ್ತಿದ್ದನು.

ಮೆಗಾಸ್ತನೀಸನ ಅಭಿಪ್ರಾಯದಂತೆ, ಅಧಿಕಾರಿಗಳನ್ನು ಐವರು ಸದಸ್ಯಕನ್ನೊಳಗೊಂಡ ಆರು ಸಮಿತಿಗಳನ್ನಾಗಿ ವಿಂಗಡಿಸಲಾಗಿತು. ಮೊದಲನೆ ಸಮಿತಿಯು ಕೈಗಾರಿಕಾ ಕಲೆಗಳಿಗೆ ಸಂಬಂಧಿಸಿದ ವಿಷಯಗಳನ್ನು ನೋಡಿಕೊಳ್ಳುತ್ತಿದ್ದಿತು.

ಎರಡನೇ ಸಮಿತಿಯು ವಿದೇಶಿಯರ ಸೌಕರ್ಯಗಳಲ್ಲಿ ತೊಡಗಿತ್ತು. ಮೂರನೇ ಸಮಿತಿಯು ಜನಗಣತಿ ಮತ್ತು ತೆರಿಗೆ ಉದ್ದೇಶಗಳಿಗಾಗಿ ಜನನ ಮತ್ತು ಮರಣಗಳ ದಾಖಲೆಗಳನ್ನು ಇಡುತ್ತಿದ್ದಿತು. ನಾಲ್ಕನೇ ಸಮಿತಿಯು ವ್ಯಾಪಾರ ಮತ್ತು ವಾಣಿಜ್ಯ ವಿಷಯಗಳ ಜವಾಬ್ದಾರಿಯನ್ನು ಹೊಂದಿದ್ದಿತು. ಐದನೇ ಸಮಿತಿಯು ಉತ್ಪಾದಿಸಲ್ಪಟ್ಟ ವಸ್ತುಗಳ ಬಹಿರಂಗ ಮಾರಾಟದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಿತು. ಆರನೇ ಸಮಿತಿಯು ವಿಕ್ರಮವಾದ ವಸ್ತುಗಳ ಮೇಲೆ ತೆರಿಗೆಯನ್ನು ಸಂಗ್ರಹಿಸುತ್ತಿದ್ದಿತು. ಈ ತೆರಿಗೆಯು ಕೊಳ್ಳುವ ಬೆಲೆಯ 1-10 ಭಾಗವಾಗಿತ್ತು.

## 49.6 ಸಾಮಾಜಿಕ ಪರಿಸ್ಥಿತಿಗಳು ಅಥವಾ ಸಮಾಜ

### *49.6.1 ಜಾತಿ ಪದ್ಧತಿ*

ವರ್ಣ(ಜಾತಿ) ಮತ್ತು ಆಶ್ರಮ (ಧಾರ್ಮಿಕ ಶಿಸ್ತಿನ ಹಂತಗಳು ಅಥವಾ ಕಾಲ), ಹಿಂದೂ ಸಾಮಾಜಿಕ ರಾಜಕೀಯ ಎರಡು ವಿಶಿಷ್ಟ ಸಂಸ್ಥೆಗಳು ಮೌರ್ಯರ ಕಾಲದಲ್ಲಿ ಒಂದು ನಿರ್ದಿಷ್ಟ ಹಂತವನ್ನು ತಲುಪಿದವು. ಸಂಪ್ರದಾಯ ವಿರುದ್ಧ ಅಭಿಪ್ರಾಯದ

ಏಳಿಗೆ, ವಿದೇಶಿಯರ ಪ್ರವಾಹ ಮತ್ತು ಇತರ ಕಾರಣಗಳು ಕೆಲಮಟ್ಟಿಗೆ ಜಾತಿ ಕಟ್ಟಳೆಯ ಜಟಿಲತೆಯ ಮೇಲೆ ಪರಿಣಾಮ ಬೀರಿತು. ಮೆಗಾಸ್ತನೀಸನು ಬ್ರಾಹ್ಮಣರು ಅಥವಾ ತತ್ವಜ್ಞಾನಿಗಳು, ಕೃಷಿಕರು, ಧನಕಾಯುವವರು, ಕುಶಲಕರ್ಮಿಗಳು ಮತ್ತು ವ್ಯಾಪಾರಿಗಳು, ಸೈನಿಕರು, ಮೇಲ್ವಿಚಾರಕರು ಮತ್ತು ಸಮಾಲೋಚಕರು ಎಂಬ 7 ಜಾತಿಗಳಿದ್ದುದನ್ನು ಗಮನಿಸಿದ್ದನು.

ವ್ಯವಸಾಯ, ಪಶುಪಾಲನೆ ಮತ್ತು ವ್ಯಾಪಾರಗಳು ವೈಶ್ಯರು ಮತ್ತು ಶೂದ್ರ ಸಾಮಾನ್ಯ ಕಸುಬುಗಳಾಗಿದ್ದವೆಂದು ಕೌಟಿಲ್ಯ ತಿಳಿಸಿದ್ದಾನೆ. ಶೂದ್ರಕ ಕೆಳಗೆ ಚಂಡಾಲರು ಮತ್ತು ಮೆಲೆಚ್ಚರು ಇದ್ದು ಅವರು ಅಸ್ಪೃಶ್ಯರಾಗಿದ್ದರು. ದುರದೃಷ್ಟದಿಂದಾಗಿ ಅಥವಾ ದುಡಿಮೆಯ ಅಗತ್ಯದಿಂದಾಗಿ ಒಬ್ಬ ಆರ್ಯನೂ ತಾತ್ಕಾಲಿಕವಾಗಿ ದಾ,ರಾಗಿ ಕೆಲಸ ಮಾಡಬೇಕಾಗುತ್ತಿದ್ದಿತು. ಇನ್ನೊಂದೆಡೆ ಬೌದ್ಧ ಸಾಹಿತ್ಯದಲ್ಲಿ ಮೂರು ಬಗೆಯ ದಾಸರ ಬಗ್ಗೆ ಉಲ್ಲೇಖಿಸುತ್ತದೆ. 1. ತಮ್ಮ ತಂದೆಯಿಂದ ವಂಶಪಾರಂಪರ್ಯವಾಗಿ ಪಡೆದವರು 2. ಉಡುಗೊರೆಯಾಗಿ ನೀಡಲಾದುದು ಅಥವಾ ಕೊಡುಕೊಂಡುದುದು 3. ದಾಸರ ಮನೆಯಲ್ಲಿ ಪುಟ್ಟಿದವರು.

ಮೌರ್ಯರ ಕಾಲದಲ್ಲಿ ಆಂತರಿಕ ಜೀತಪದ್ಧತಿ (ದಾಸ್ಯ) ರೂಡಿಯಲ್ಲಿದ್ದರೂ ಖಂಡಿತವಾಗಿಯೂ , ಜೀತಪದ್ಧತಿ ಮೌರ್ಯರ ಆರ್ಥಿಕ ವ್ಯವಸ್ಥೆಗೆ ಮೂಲವಾಗಿರಲಿಲ್ಲ.

### *49.6.2 ಸ್ತ್ರೀಯರ ಸ್ಥಾನಮಾನ*

ಮೌರ್ಯರ ಸಮಾಜದಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನಮಾನ ಮತ್ತು ಸ್ವಾತಂತ್ರವಿತ್ತು. ಉದಾಹರಣೆಗೆ ಸ್ಮೃತಿಗಳಲ್ಲಿ ವಿಚ್ಛೇಧನವನ್ನು ಆಲೋಚಿಸಲೂ ಅವಕಾಶವಿರಲಿಲ್ಲ. ಆದರೆ ಕೌಟಿಲ್ಯ ಅದಕ್ಕೆ ಅನುಮತಿ ನೀಡದ್ದನು. ವಿಶೇಷವಾಗಿ ದೊರೆಗಳು ಮತ್ತು ಶ್ರೀಮಂತರಲ್ಲಿ ಬಹುಪತ್ನತ್ವಿ ಆಚರಣೆಯಲ್ಲಿತು. ಶಾಸ್ತ್ರೀಯ ತಡೆಗಳಿದ್ದರೂ ಅಂತರ ಜಾತಿ ವಿವಾಹಗಳು ಸರ್ವಸಾಮಾನ್ಯವಾಗಿದ್ದವು ಮತ್ತು ಈ ವಿರೋಧಾತ್ಮಕ ಆಚರಣೆಗೆ ಮೆಗಾಸ್ತನೀಸನು ಸಾಕ್ಷಿಯಾಗಿದ್ದನು. ಅರ್ಥಶಾಸ್ತ್ರದಲ್ಲಿ ಎಂಟು ಬಗೆಯ ವಿವಾಹಗಳನ್ನು ಸೂಚಿಸಲಾಗಿದೆ.

| ನಾಲ್ಕು ಸಾಂಪ್ರದಾಯಿಕ | | ನಾಲ್ಕು ನಂತರದ ಸೇರ್ಪಡೆಗಳು | |
|---|---|---|---|
| 1 | ಅರ್ಸ | 1 | ಅಸುರ(ಮಾರಾಟ) |
| 2 | ದೈವ | 2 | ಗಾಂಧಾರ (ಪರಸ್ಪರ ಆಯ್ಕೆ) |
| 3. | ಬ್ರಹ್ಮ | 3 | ರಾಕ್ಷಸ (ಅಪಹರಣ. |
| 4 | ಪ್ರಜಾಪತ್ಯ | 4 | ಪೈಶಾಚ(ಅತ್ಯಾಚಾರ) |

ಮೆಗಾಸ್ತನೀಸನು ಬಹುಪತ್ನಿತ್ವ ಅರಮನೆಯ ಕಾವಲುಗಾರರಾಗಿ ರಾಜನ ಅಂಗರಕ್ಷಕರಾಗಿ, ಗೂಡಚಾರರಾಗಿ, ಸ್ತ್ರೀಯರ ನೇಮಕಕ್ಕೆ ಪುರಾವೆ ನೀಡಿದ್ದಾರೆ. ಅಶೋಕನು ಸ್ತ್ರೀಯರ ಕಲ್ಯಾಣಕ್ಕಾಗಿ ಅಧೀಕ್ಷಕರಾದ ಇತಿಜಖಮಹಾಮತ್ತರೆಂಬ ಮಹಾಮತ್ತರೆಂಬ ಅಧಿಕಾರಿಗಳ ಒಂದು ಗುಂಪನ್ನು ನೇಮಕಮಾಡಿದ್ದನಿ.

ಹೀಗೆ ಸ್ತ್ರೀಯರ ಸ್ಥಾನಮಾನಗಳು ಪುರಷರಿಗಿಂತ ಕೀಳಾಗಿದ್ದರೂ ಮತ್ತು ಇಳಿಮುಖವಾಗುತ್ತಿದ್ದರೂ ನಂತರದ ಕಾಲಗಳಷ್ಟು ಕೊಟ್ಟದ್ದಾಗಿರಲಿಲ್ಲ.

### *49.6.3. ಸಮಾಜದ ಮಹತ್ವದ ಅಂಶಗಳು*

ಬ್ರಾಹ್ಮಣರಲ್ಲಿ ಎರಡು ಗುಂಪುಗಳಿದ್ದವು. (ಬ್ರಾಹ್ಮಣರು ಎರಡು ಗುಂಪುಗಳಾಗಿ ಒಡೆದಿದ್ದರು.), ಉದಿಕ್ಕ ಬ್ರಾಗ್ಮಣರು - ಅಧ್ಯಾಪಕರು ಮತ್ತು ಪುರೋಹಿತರಾಗಿದ್ದ ಅತ್ಯಂತ ಸಂಪ್ರದಾಯಸ್ಥರು ಮತ್ತು ಶತಕಲಾಕ್ಕಾನ ಬ್ರಾಹ್ಮಣರು - ಪ್ರಾಪಂಚಿಕ ಸುಖ ಹಾಗೂ ಮೂಡನಂಬಿಕೆಗಳಿಗೆ ಬಲಿಯಾದವರು ಮತ್ತು ಅಜ್ಞಾನಿಗಳು.

ಅರ್ಥಶಾಸ್ತ್ರ 14ನೇ ಅಧ್ಯಯವಾದ ಔಪನಿಷದಿಕವು ಆರಾದನಾ ಪದ್ಧತಿಯ ಅವತಾರಗಳು ಮತ್ತು ಸವಾಡ ಸದೃಶ ಪರಿಣಾಮಗಳನ್ನುಂಟು ಮಾಡಬಹುದಾದ ಅನೇಕ ವಿಧಿ /ಸಂಸ್ಕಾರಗಳನ್ನು ವಿವರಿಸುತ್ತದೆ.

ಈ ಕಾಲದ ಶಾಸವಗಳು ಉತ್ಸವ ಮತ್ತು ಸಮಾಜ, ಹಬ್ಬ ಪರಿದಿನಗಳು ಮತ್ತು ಸಂತೋಷದ ಕೂಟಗಳು ಕುಸ್ತಿ, ಮನುಷರು ನಡುವೆ ಆನೆಗಳು ಹಾಗೂ ಇತರ ಪ್ರಾಣಿಗಳ ನಡುವಿನ ಕಾಳಗಗಳ ಬಗ್ಗೆ ಅಲ್ಲಲ್ಲಿ ಉಲ್ಲೇಖಿಸುತ್ತದೆ.

ಶಾಸನಗಳು ಆ ಕಾಲದ ಉತ್ಸವಗಳು ಮತ್ತು ಸಮಾಜ ಹಬ್ಬ ಹರಿದಿನಗಳು ಮತ್ತು ಸಂತೋಷದ ಕೂಟಗಳು , ಕುಸ್ತಿ, ಮನುಷರ ನಡುವೆ , ಆನೆಗಳ ನಡುವೆ ಹಾಗೂ ಇತರ ಪ್ರಾಣಿಗಳ ನಡುವಿನ ಕಾಳಗವನ್ನು ವಿವರಿಸುತ್ತದೆ. ರಥದ ಪಂಧ್ಯಗಳ ಬಗ್ಗೆಯೂ ಅವುಗಳಲ್ಲಿ ಉಲ್ಲೇಖಿಗಳಿವೆ.

ಮೌರ್ಯರ ಕಾಲದಲ್ಲಿ ಹಿಂದೂ ಸಮಾಜದಲ್ಲಿ ಭಕ್ತಿ ಚಳುವಳಿಯ ಏಳಿಗೆಯನ್ನು ಕಂಡಿತ್ತು. ಶೈವ ಮತ್ತು ವೈಷ್ಣವ ಭಕ್ತರು ಜನರಿಗೆ ಮೋಕ್ಷ ಸಾಧನೆಗೆ ಭಕ್ತಿಮಾರ್ಗವನ್ನು ಬೋಧಿಸಿದರು. ಅವರು ಹಿಂದೂ ಪುನಶ್ಚೇತನಕ್ಕೆ ಸಹಾಯ ಮಾಡಿದರು. ಮೌರ್ಯ ದೊರೆಗಳು ಬೌದ್ಧ ಮತ್ತು ಜೈನಧರ್ಮಗಳಿಗೆ ಆಶ್ರಯ ನೀಡಿದರೂ ಮೌರ್ಯರ ಕಾಲದಲ್ಲಿ ಹಿಂದೂಧರ್ಮವು ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿತು.

ದೇವರ ಹೆಸರಿನಲ್ಲಿ ಪ್ರಾಣಿಬಲಿ ಮುಂದುವರಿಯಿತು. ಆದರೆ ಅಶೋಕನು ಬಹುಮಟ್ಟಿಗೆ ಅದನ್ನು ನಿಯಂತ್ರಿಸಿದನು.

ಮೌರ್ಯರ ಕಾಲವು ಸಂಸ್ಕೃತ ಮತ್ತು ಪಾಳಿ ಸಾಹಿತ್ಯದ ಹುಲುಸಾದ ಬೆಳವಣಿಗೆಯನ್ನು ಕಂಡಿತು. ಮೌರ್ಯರ ಕಾಲದಲ್ಲಿ ರಚಿತವಾದ ಪ್ರಸಿದ್ಧ ಕೃತಿಗಳೆಂದರೆ

| | | |
|---|---|---|
| ಕೌಟಿಲ್ಯ | - | ಅರ್ಥಶಾಸ್ತ್ರ. |
| ಭದ್ರಬಾಹು | - | ಕಲ್ಪಸೂತ್ರ. |
| ಪತಾಂಜಲಿ | - | ವಾಸವದತ್ತ |
| ಕಾತ್ಯಾಯನ | - | ಮಹಾವರ್ತಿಕರು |
| ಪಾಣಿನಿ | - | ಸೂತ್ರಗಳು |

ವಿಹಾರಗಳು, ಮಠಗಳು ಮತ್ತು ಗುರುಕುಲಗಳು ಪ್ರಮುಖ ವಿದ್ಯಾಕೇಂದ್ರಗಳಾಗಿ ಕಾರ್ಯನಿರ್ವಗಿಸುತ್ತದ್ದವು. ತಕ್ಷಶಿಲ ಮತ್ತು ಕಾಶಿಗಳು ಮಹಾನ್ ವಿಶ್ವವಿದ್ಯಾನಿಲಯಗಳ ನಗರಗಳಾಗಿದ್ದು .

* ಮೌರ್ಯರ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪಗಳು ಅಭಿವೃದ್ಧಿ ಹೊಂದಿತ್ತು. ಅವುಗಳು ಗಾಂಧಾರ - ಇಂಡೋಗ್ರೀಕ್/ ಪರ್ಶಿಯನ್ -ಮಥುರ ಮುಂತಾದ ಆಲೋಚನಾ ಗುಂಪುಗಳಿಂದ ಪ್ರಭಾವಿತವಾಗಿದ್ದವು.

  ಪಾಟಲೀಪುತ್ರದ ಮರದ ಅರಮನೆಯನ್ನು ಪರ್ಶಿಯಾಶೈಲಿಯಲ್ಲಿ ನಿರ್ಮಿಸಲಾಗಿದ್ದಿತು ಮತ್ತು ಮೆಗಾಸ್ತನೀಸನು ಅದನ್ನು ಮೆಚ್ಚಿಕೊಂಡಿದ್ದನು.

* ಅಶೋಕನ ಕಾಲದಲ್ಲಿ ಮೂರ್ತಿಶಿಲ್ಪಕ್ಕೆ ಅಪಾರ ಪ್ರೋತ್ಸಾಹ ನೀಡಲಾಯಿತು. ಸಾಂಚಿಯ ಮಹಾಸ್ಥೂಪವು ಮೌರ್ಯರ ಕಲೆ ಮತ್ತು ವಾಸ್ತುಶಿಲ್ಪದ ಪರಿಶುದ್ಧತೆಯನ್ನು ತೋರಿಸುತ್ತದೆ.

ಸಿಂಹಾದ ಬೋದಿಗೆಯನ್ನು ಸ್ವತಂತ್ರ ಭಾರತವು ತಮ್ಮ ರಾಷ್ಟ್ರೀಯ ಲಾಂಛನವನ್ನಾಗಿ ಅಂಗೀಕರಿಸಿದೆ.

## 49.7 ಆರ್ಥಿಕ ವ್ಯವಸ್ಥೆ

ಕೃಷಿ ಮೌರ್ಯರ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾಗಿತ್ತು. ಆದಾಗ್ಯೂ ವ್ಯಾಪಾರ ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯತೊಡಗಿತ್ತು. ರೈತರು ಜನಸಮುದಾಯದ ಅತ್ಯಂತ ದೊಡ್ಡ ಭಾಗವಾಗಿದ್ದರು. ಅವರು ಪಶುಪಾಲನೆಯಲ್ಲಿಯೂ ತೊಡಗಿದ್ದರು. ವ್ಯವಸಾಯವು ಸಂಮೃದಿ ಹೊಂದಿ ರೈತರು ಸುಖದಿಂದ ಜೀವಿಸುತ್ತಿದ್ದರು. ಸರ್ಕಾರವು ಕೃಷಿಗೆ ಅನೇಕ ರೀತಿಯ ನೆರವು ನೀಡುತ್ತಿದ್ದಿತು. ಸರ್ಕಾರವು ನೀರಾವರಿ ಕಾಲುವೆಗಳು ಮತ್ತು ಆಹಾರವನ್ನು ನಿರ್ಮಿಸಿತು. ಬರಗಾಲದಲ್ಲಿ ಸರ್ಕಾರವು ಕೆಲಸ ಮತ್ತು ಆಹಾರವನ್ನು ನೀಡಿ

ರೈತರಿಗೆ ನೆರವಾಗಿತ್ತಿದ್ದಿತು.ಉತ್ತಮ ಸುಗ್ಗಿಯ ಕಾಲದಲ್ಲಿ ಕೆಟ್ಟ ದಿವಸಗಳಿಗಾಗಿ ಆಹಾರದಾನ್ಯಗಳನ್ನು ಶೇಖರಿಸಿಡಲಾಗುತ್ತಿದ್ದಿತು. ರಾಜನು ರೈತರ ಜೀವ ಮತ್ತು ಆಸ್ತಿಪಾಸ್ತಿಗಳಿಗೆ ರಕ್ಷಣೆ ನೀಡಿದ್ದನು ಮತ್ತು ಆದ್ದರಿಂದ ಭೂಮಿಯ ಉತ್ಪಾದನೆಯ 1/6 ಭಾಗವನ್ನು ಕಂದಾಯವಾಗಿ ಪಡೆಯುತ್ತಿದ್ದನು. ನೆರೆ ಹಾಗೂ ಕೀಟ ಹಾವಳಿಯ ಸಂದರ್ಭಗಳಲ್ಲಿ ರೈತರಿಗೆ ಪರಿಹಾರವನ್ನು ನೀಡಲಾಗುತ್ತಿದ್ದಿತು. ರುಮ್ಮಿಂದಿ ಶಾಸನವು ತೆರಿಗೆ ಪದ್ಧತಿಯ ಬಗ್ಗೆ ಉಲ್ಲೇಖವಿರುವ ಅಶೋಕನ ಏಕೈಕ ಶಾಸನವಾಗಿದೆ. ಸಿತಾಧ್ಯಕ್ಷನ ಹತೋಟಿಯಲ್ಲಿ ಸಿತಾಭೂಮಿ ಎಂದು ಕರೆಯಲಾಗಿದ್ದ ಸರ್ಕಾರದ ಒಡೆತನ ಭೂಮಿಯ ಬಗ್ಗೆ ಉಲ್ಲೇಖಗಳಿವೆ.

### *49.7.2 ಇತರ ಆಧಾಯ ಮೂಲಗಳು*

ಸಾಮಾನ್ಯ ಮೂಲಗಳಲ್ಲದೆ ರಾಜ್ಯಕ್ಕೆ ಸರ್ಕಾರಕ್ಕೆ ಇತರ ಅನೇಕ ಆಧಾಯ ಮೂಲಗಳೂ ಇದ್ದವು. ರಾಜ್ಯವು ಏಳು ಪ್ರಮುಖ ಮೂಲ (ಆಯಶರೀರ)ಗಳಿಂದ ಆಧಾಯವನ್ನು ಪಡೆಯುತ್ತಿದ್ದಿತು.

| | | | |
|---|---|---|---|
| 1 | ದುರ್ಗ | - | ಕೋಟೆಗಳಿಂದ ಆವರಿಸಲ್ಪಟ್ಟ ಪಟ್ಟಣಗಳು |
| 2 | ರಾಷ್ಟ್ರ | - | ಗ್ರಾಮೀಣ ಪ್ರದೇಶಗಳು |
| 3 | ಖಾಣೆ | - | ಗಣಿಗಳು |
| 4 | ಸೇತು | - | ಕಟ್ಟಡಗಳು ಮತ್ತು ತೋಟಗಳು |
| 5 | ವನ | - | ಅರಣ್ಯ |
| 6 | ವ್ರಜ | - | ದನಗಳ ಹಿಂಡು |
| 7 | ವಣಿಕ್‌ಪಥ | - | ಸಂಚಾರಿ ರಸ್ತೆಗಳು |

### *49.7.3 ವ್ಯಾಪಾರ ಮತ್ತು ನೌಕಾಯಾನ*

ಸಾಮ್ರಾಜ್ಯದ ವಿವಿಧ ಭಾಗಗಳ ನಡುವೆ ವಿವಿಧ ಬಗೆಯ ವಸ್ತುಗಳ ಬಿರುಸಿನ ಆಂತರಿಕ ವ್ಯಾಪಾರವಿದ್ದಿತು. ಮುಖ್ಯವಾಗಿ ಗ್ರೀಸ್ (ಹೆಲೆನಿಕ್ ಪ್ರಪಂಚ) ಮತ್ತು ಬರ್ಮಾಗಳೊಂದಿಗೆ ವಿದೇಶೀ ವ್ಯಾಪಾರ ನಡೆಸಲಾಗುತ್ತಿದ್ದಿತು. ವಿವಿಧ ಬಗೆಯ ಸಂಬಾರ ಪದಾರ್ಥಗಳು, ಮುತ್ತುಗಳು , ವಜ್ರಗಳು, ಹತ್ತಿಬಟ್ಟೆಗಳು, ದಂತದ ಕೆತ್ತನೆಗಳು ಕಪ್ಪೆಚಿಪ್ಪುಗಳು ಮುಂತಾದವು ಮುಖ್ಯ ರಫ್ತಿನ ವಸ್ತುಗಳಾಗಿದ್ದವು. ಆಮದಿನ ಮುಖ್ಯ ವಸ್ತುಗಳಲ್ಲಿ ಕುದುರೆಗಳು, ಚಿನ್ನ, ಗಾಜು, ನಾರುಬಟ್ಟೆ ಮುಂತಾದವು ಸೇರಿದ್ದವು. ವಿದೇಶೀ ವ್ಯಾಪಾರವು ಭಾರತಕ್ಕೆ ಹೆಚ್ಚು ಅನುಕೂಲಕರವಾಗಿತ್ತು.

ಈ ಕಾಲದ 18 ಕರಕುಶಲ ಕಲೆಗಳಲ್ಲಿ ತೊಡಗಿದ್ದ ಜನರು ಶ್ರೇಣಿ ಎಂದು ಕರೆಯಲಾಗಿದ್ದ ವೃತ್ತಿ ಸಂಘಗಳನ್ನು ರಚಿಸಕೊಂಡಿದ್ದರು. ವ್ಯಾಪಾರದ ವಸ್ತುಗಳ ಬೆಲೆಯ 1-5 ಭಾಗವನ್ನು ಸುಂಕದ ತೆರಿಗೆಯಾಗಿ ವಿಧಸಲಾಗುತ್ತೆದ್ದಿತು. ವ್ಯಾಪಾರಸ್ಥರ ಲಾಭದ ಪ್ರಮಾಣವನ್ನು ನಿಗದಿಪಡಿಸಲಾಗಿದ್ದು, ಹೆಚ್ಚುವರಿ ಲಾಭವು ಖಜಾನಗೆ ಸೇರುತ್ತಿದ್ದಿತು. ಲಾಭಾಂಶವು ಸ್ಥಳೀಯ ವಸ್ತುಗಳ ಮೇಲೆ ಶೇ.5 ಮತ್ತು ವಿದೇಶಿ ವಸ್ತುಗಳ ಮೇಲೆ ಶೇ. 10 ರಷ್ಟಿದ್ದಿತು.

ಮುಖ್ಯ ಹೆದ್ದಾರಿಗಳು ಅಥವಾ ನೌಕಾಯಾನ ಯೋಗ್ಯ ನದಿಗಳು ವ್ಯಾಪಾರದ ಮಾರ್ಗಗಳಾಗಿದ್ದವು. ಪಶ್ಚಿಮ ಮತ್ತು ಬರ್ಮಾದ ಉತ್ತರದ ಕರಾವಳಿಗಳೊಂದಿಗೆ ಸಮುದ್ರ ವ್ಯಾಪಾರವನ್ನು ನಡೆಸಲಾಗುತ್ತಿದ್ದಿತು. ಪೂರ್ವ ಕರಾವಳಿಯಲ್ಲಿ ತಾಲ್ಲೂಕ್ (ತಾಮ್ರಲಿಪಿ) ಮತ್ತು ಪಶ್ಚಮ ಕರಾವಳಿಯಲ್ಲಿ ಬ್ರೋಚ್ ಮತ್ತು ಸೊಪಾರ ಆ ಕಾಲದ ಭಾರತದ ಅತ್ಯಂತ ಪ್ರಮುಖ ಬಂದರುಗಳಾಗಿದ್ದವು. ಪೂರ್ವ ಕರಾವಳಿಯು ಸಮುದ್ರ ಮಾರ್ಗವು ಹೆಚ್ಚು ಸಂಚಾರ ದಟ್ಟಣೆಯಿಂದ ಕೂಡಿದ್ದಂತೆ ಕಂಡುಬರುತ್ತದೆ. ಹಡಗು ನಿರ್ಮಾಣ ಕೈಗಾರಿಕೆಯ ಮೇಲೆ ಸರ್ಕಾರ ಗಣನೀಯ ಹತೋಟಿ ಹೊಂದಿದ್ದಂತೆ ಕಂಡುಬರುತ್ತದೆ.

### *49.7.4 ಕುಶಲಕಲೆಗಳು ಮತ್ತು ಕೈಗಾರಿಕೆಗಳು*

ಮೌರ್ಯರ ಕಾಲದಲ್ಲಿ ಭಾರತದ ರಾಜಕೀಯ ಐಕ್ಯತೆ ಮತ್ತು ಬಲಿಷ್ಠ ಕೇಂದ್ರೀಕೃತ ಸರ್ಕಾರದ ಹತೋಟಿಯ ಅತ್ಯಂತ ಮುಖ್ಯ ಪ್ರಮುಖ ಪರಿಣಾಮವೆಂದರೆ ಅನೇಕ ಕರಕುಶಲ ಕಲೆಗಳಿಗೆ ನೀಡಲಾದ ಉತ್ತೇಜನ.

ಮೌರ್ಯರ ಕಾಲದಲ್ಲಿ ಅನೇಕ ಬಗೆಯ ಕುಶಲಕಲೆಗಳು ಮತ್ತು ಕೈಗಾರಿಕೆಗಳು ಅಭಿವೃದ್ಧಿ ಹೊಂದಿದ್ದವು. ನುರಿತ ಕುಶಲಕಲೆಗಾರರು ಹತ್ತಿ ಮತ್ತು ರೇಷ್ಮೆ ಬಟ್ಟೆ ತಯಾರಿಕೆ, ಕಸೂತಿ , ಲೋಹದ ಕೆಲಸ, ಚಿನ್ನದ ಕೆಲಸ ದಂತದ ಕೆತ್ತನೆ, ಬಣ್ಣದ ತಯಾರಿಕೆ ಮತ್ತು ಸುಗಂದ ವಸ್ತುಗಳ ತಯಾರಿಕೆಯಲ್ಲಿ ತೊಡಗಿದ್ದರು.

ಈ ಎಲ್ಲಾ ಕೈಗಾರಿಕೆ ಮತ್ತು ಕರಕುಶಲ ನಿರತ ಜನರು ತಮ್ಮದೇ ಆದ ವೃತ್ತಿ ಸಂಘಗಳನ್ನು ರಚಿಸಿಕೊಳ್ಳುವ ಮೂಲಕ ಸುಸಂಘಟಿತರಾಗಿದ್ದರು. ಪ್ರೋತ್ಸಾಹಧನವನ್ನು ನೀಡುವ ಮೂಲಕ ಸರ್ಕಾರವು ಕೈಗಾರಿಕೆಗಳಿಗೆ ಸಹಾಯ ನೀಡಿದ್ದಿತು. ಕೈಗಾರಿಕೆಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಪಾಟಲೀಪುತ್ರದಲ್ಲಿ ಒಂದು ಪ್ರತ್ಯೇಕ ಸರ್ಕಾರಿ ಮಂಡಳಿಯನ್ನು ಸ್ಥಾಪಿಸಲಾಗಿತ್ತು.

ಗ್ರೀಕ್ ಲೇಖಕರು ಭಾರತದ ಪರಿಚಿತ ಕುಶಲಕಲೆಗಾರರನ್ನು ಹೊಗಳಿದ್ದಾರೆ.

ವೃತ್ತಿ ಸಂಘಗಳು ಬಾಡಿಗೆ ಕೂಲಿಕಾರರನ್ನು ನೇಮಕ ಮಾಡಿಕೊಳ್ಳಬೇಕಾಗಿದ್ದು ಅದರಲ್ಲಿ ಎರಡು ಗುಂಪುಗಳಿದ್ದವು. ನಿರಂತರವಾಗಿ ವೇತನ ಪಡೆಯುತ್ತಿದ್ದ ಉಚಿತ ಕಾರ್ಮಿಕರೆಂದು ಪರಿಗಣಿಸಲಾಗಿದ್ದ ಕರ್ಮಾಕಾರರು ಅಥವಾ ಬ್ರಿತಕರು ಮತ್ತು ಗುಲಾಮರಾಗಿದ್ದ ದಾಸರು, ಲೋಹ ಕೈಗಾರಿಕ ಲೋಹಶಾಸ್ತ್ರ, ಕುಂಬಾರಿಕೆ, ಮರಗೆಲಸ ಮತ್ತು ಕಲ್ಲುಕುಟ್ಟುವುದು ಇತರ ಪ್ರಮುಖ ಕುಶಲಕಲೆಗಳು ಮತ್ತು ಕೈಗಾರಿಕೆಗಳಿದ್ದವು. ಹೀಗೆ ಕೈಗಾರಿಕೆಗಳು ಸರ್ವರೀತಿಯಲ್ಲಿಯ ಪ್ರಗತಿಯನ್ನು ಸಾಧಿಸಿದ್ದವು.

### *49.7.5 ಪಣಕಾಸಿನ ವ್ಯವಸ್ಥೆ ಮತ್ತು ನಾಣ್ಯ ಪದ್ಧತಿ*

ಈ ಕಾಲಕ್ಕೆ ಮೊದಲು ಆರಂಭವಾದ ನಾಣ್ಯಗಳ ಬಳಕೆಯು ವ್ಯಾಪಾರ ಮತ್ತು ವಾಣಿಜ್ಯಗಳ ಬೆಳವಣಿಗೆಯಿಂದಾಗಿ ಮೌರ್ಯರ ಕಾಲದಲ್ಲಿ ಸಾಮಾನ್ಯ ಲಕ್ಷಣವಾಯಿತು. ಹಣವನ್ನು ವ್ಯಾಪಾರಕ್ಕೆ ಮಾತ್ರವಲ್ಲದೆ ಸರ್ಕಾರವು ತನ್ನ ಅಧಿಕಾರಗಳಿಗೆ ನಗದು ವೇತನ ನೀಡಲೂ ಬಳಸುತ್ತಿದ್ದಿತು. ಗುರುತು ಹಚ್ಚಿದ, ನವಿಲು, ಬೆಟ್ಟ ಮತ್ತು ಅರ್ಧಚಂದ್ರಾಕೃತಿ ಚಿಹ್ನೆಗಳನ್ನೊಳಗೊಂಡ ಪಣ ಎಂದು ಕರೆಯಲಾಗಿದ್ದ ಬೆಳ್ಳಿಯ ನಾಣ್ಯಗಳು ಮೌರ್ಯ ಸಾಮ್ರಾಜ್ಯದ ಸಾಣ್ಯ ವ್ಯವಸ್ಥೆಯಲ್ಲಿದ್ದಂತೆ ಕಂಡುಬರುತ್ತದೆ.

ತಾಮ್ರದ ಗುರುತು ಹಚ್ಚಿದ ನಾಣ್ಯಗಳು ವಿರಳವಾಗಿದ್ದವು. ತಾಮ್ರದ ಮಸಿಕ ಸಾಂಕೇತಿಕ ನಾಣ್ಯವಾಗಿದ್ದಿತು. ಮತ್ತು ಅದರ ಕಾಲು ಭಾಗವನ್ನು ಕಾಕಿಣಿ ಎಂದು ಕರೆಯಲಾಗಿತ್ತು. ಕೌಟಿಲ್ಯವು ನಾಣ್ಯ ವ್ಯವಸ್ಥೆಯ ಜವಾಬ್ದಾರಿಯನ್ನು ಹೊಂದಿದ್ದ ಸುವರ್ಣಾಧ್ಯಕ್ಷ. ಲಕ್ಷಣಾಧ್ಯಕ್ಷ ಮತ್ತು ರುಪದರ್ಸಕ್ ಎಂಬ ಸರ್ಕಾರಿ ಅಧಿಕಾರಿಗಳನ್ನು ಉಲ್ಲೇಖಿಸಿದೆ.

## 49.8. ಇತರ ಸಾಮ್ರಾಜ್ಯಗಳೊಂದಿಗೆ ಸಂಬಂಧಗಳು

ಚಂದ್ರಗುಪ್ತಮೌರ್ಯನ ಕಾಲದಿಂದ ಮೌರ್ಯ ಸಾಮ್ರಾಜ್ಯದ ಅಂತ್ಯದ ಕಾಲದವರೆಗೆ ಮೌರ್ಯ ವಿದೇಶೀ ಸಂಬಂಧಗಳನ್ನು ಎರಡು ವಿಭಿನ್ನ ಹಂತಗಳಾಗಿ ವಿಗಂಡಿಸಬಹುದಾಗಿದೆ.

1 ಪ್ರಾರಂಭದ ಹಂತ ಅಥವಾ ವಿಸ್ತರಣೆಯ ಹಂತ .

2 ನಂತರದ ಹಂತ ಅಥವಾ ಕ್ರೋಢೀಕರಣದ ಹಂತ

ಪಾಶ್ಚಿಮಾತ್ಯ ಜಗತ್ತಿನೊಂದಿಗೆ ಸಂಪರ್ಕವನ್ನು ಸ್ಥಾಪಿಸಲಾಯಿತು ಮತ್ತು ಬಿಂದುಸಾರನ ಕಾಲದಲ್ಲಿ ನಿರಂತರವಾಗಿ ದೂತರನ್ನು ಬದಲಾಯಿಸಿಕೊಳ್ಳಲಾಗುತ್ತಿದ್ದಿತು. ಅಶೋಕನ 13ನೇ ಬಂಡೆಗಲ್ಲು ಶಿಲಾಶಾಸನವು ಐವರು ಸಮಕಾಲೀನ ದೊರೆಗಳನ್ನು ಉಲ್ಲೇಖಿಸುತ್ತದೆ.

* ಆಂಟಿಯೋಕ(ಸಿರಿಯಾದ 2ನೇ ಆಂಟಿಯೋಕಸ್)
* ತುರ್ಮಯ (ಈಜಿಪ್ಟಿನ 2ನೇ ಟಾಲೆಮಿ)
* ಆಂಟಿಕಿನಿ (ಮೆಸಿಡೋನಿಯಾದ ಆಂಟಿಗೊನಸ್)
* ಮೂಕ (ಸೈರೆಮ್‌ನ ಮಗಾಸ್) ಮತ್ತು
* ಅಲಿಕ್‌ಸುದಾರೊ (ಎಪಿರಸ್‌ನ ಅಲೆಕ್ಸಾಂಡರ್)

ಧರ್ಮವಿಜಯದ ಸಂಧರ್ಭದಲ್ಲಿ (ಧಮ್ಮದ ವಿಜಯ). ಈ ದೊರೆಗಳ ಉಲ್ಲೇಖವು ಈ ದೊರೆಗಳ ಒಳಗೆ ಧರ್ಮ ಸಂದೇಶದೊಂದಿಗೆ ನಿಯೋಗಗಳನ್ನು ಕಳುಹಿಸಿದುದನ್ನು ಸೂಚಿಸುತ್ತದೆ. ಧಾರ್ಮಿಕ ನೀತಿ (ಧಮ್ಮ) ನೀತಿಯಿಂದಾಗಿ ದಕ್ಷಿಣದ ರಾಜ್ಯಗಳು ಮತ್ತು ಶ್ರೀಲಂಕಾದೊಂದಿಗೆ ಸಂಬಂಧಗಳು ಮಧುರವಾಗಿದ್ದವು.

ಹೀಗೆ ಇತರ ರಾಜ್ಯಗಳೊಂದಿಗೆ ಮೌರ್ಯರ ಸಂಬಂಧಗಳಲ್ಲಿ ವಿಸ್ತರಣಾ ನೀತಿ ಮತ್ತು ಆಕ್ರಮಣ ನೀತಿಯಿಂದ ಸ್ನೇಹಪರ ಮತ್ತು ಸೈನಿಕ ಆಕ್ರಮಣ ಸಾಮಾನ್ಯ ಆಕ್ರಮಣದ ಕಡೆಗೆ ಗಮನಾರ್ಹವಾದ ಬದಲಾವಣೆಯನ್ನು ಕಾಣಬಹುದು.

## 49.9 ಮುಕ್ತಾಯ

ಈ ಘಟಕದಲ್ಲಿ ನಾವು ಕೇಂದ್ರ ಮಟ್ಟದಲ್ಲಿ ಮೌರ್ಯರ ಆಡಳಿತ ರಚನೆಯು ಅತ್ಯಂತ ವ್ಯವಸ್ಥಿತವಾಗಿತ್ತೆಂಬುದನ್ನು ನೋಡಿದೆವು. ಎಲ್ಲಾ ಅಧಿಕಾರಗಳು ರಾಜನಲ್ಲಿದ್ದವು. ಆದರೆ ಅನೇಕ ವಿಷಯಗಳಲ್ಲಿ ಮಂತ್ರಿಮಂಡಲವು ರಾಜನಿಗೆ ನೆರವು ನೀಡುತ್ತಿದ್ದವು. ಅಶೋಕನ ಕಾಲದಲ್ಲಿ ರಾಜಪ್ರಭುತ್ವದ ಪಿತೃಸದೃಶ ದೃಷ್ಟಿಕೋನದ ಬೆಳವಣಿಗೆ ಮತ್ತು ಸರ್ಕಾರ ಕೈಗೊಂಡ ಅನೇಕ ಬಗೆಯ ಲೋಕೋಪಯೋಗಿ ಕಾರ್ಯಗಳು ಅನುಪಮ ವೈಶಿಷ್ಟ್ಯಗಳಾಗಿದ್ದವು.

ಸರ್ಕಾರವು ಹೆಚ್ಚುವರಿ ಉತ್ಪಾದನೆಗೆ ಗಮನ ನೀಡಿದುದಲ್ಲದೆ ಉತ್ಪಾಧನೆಗೆ ಹೆಚ್ಚಳಿಕ್ಕೆ ವಿಧಾನಗಳನ್ನು ವ್ಯವಸ್ಥೆಗೊಳಿಸಿತು. ತೆರಿಗೆ ಪದ್ಧತಿಯನ್ನು ನಿಯಂತ್ರಿಸಲಾಗಿತ್ತು. ಈ ವ್ಯವಸ್ಥೆಯ ಒಂದು ಭಾಗವಾಗಿದ್ದವು.

ಮೌರ್ಯರ ವಿದೇಶೀ ಸಂಬಂಧಗಳು ಎರಡು ಹಂತಗಳಾದ ವಿಸ್ತರಣೆ ಮತ್ತು ಕ್ರೋಡೀಕರಣದ ಮೂಲಕ ನಡೆದವು. ಯುದ್ಧ ಮತ್ತು ಆಕ್ರಮಣ ನೀತಿಯ ಮೂಲಕ ಸಾಮ್ರಾಜ್ಯ ವಿಸ್ತರಣೆಯು ಒಂದು ಹಂತವನ್ನು ತಲುಪಿದ ನಂತರ ಸ್ನೇಹ ಸಂಬಂಧಗಳ ಮೂಲಕ ಕ್ರೋಡೀಕರಣಕ್ಕೆ ಪ್ರಾಮುಖ್ಯತೆಯನ್ನು ಬದಲಾಯಿಸಲಾಯಿತು.

ಒಟ್ಟಿನಲ್ಲಿ (ಸಂಕ್ಷಿಪ್ತವಾಗಿ) ಮೌರ್ಯರ ಕಾಲವು ಸಮಗ್ರ ಅಭಿವೃದ್ಧಿಯನ್ನು ಕಂಡಿತು.

# ಟಿಪ್ಪಣಿಗಳು

ಘಟಕ 50

# ಪ್ರಾಚೀನ ಭಾರತದ ರಾಜಕೀಯ ಚಿಂತನೆ ಮತ್ತು ಸಂಸ್ಥೆಗಳು

## ರಚನೆ


50.0 ಉದ್ದೇಶಗಳು

50.1 ಪೀಠಿಕೆ

50.2. ಭಾರತದ ರಾಜಕೀಯ ಚಿಂತನೆ ಮತ್ತು ಸಂಸ್ಥೆಗಳು ವೈಶಿಷ್ಟಗಳು

50.3 ರಾಜಕೀಯ ಕಲ್ಪನೆಗಳು ಮತ್ತು ಸಂಸ್ಥೆಗಳ ಅಧ್ಯಯನಕ್ಕೆ ಆಧಾರಗಳು

50.4 ಧರ್ಮಕದ ಕಲ್ಪನೆಗಳು ಮತ್ತು ಹಿಂದೂ ರಾಜಕೀಯ ಕಲ್ಪನೆಗಳ ಮೇಲೆ ಅದರ ಪರಿಣಾಮ

50.4.1 ಕಲ್ಪನೆಗಳು

50.4.2 ಪರಿಣಾಮಗಳು

50.5 ವೇದಗಳ ಕಾಲದ ರಾಜಕೀಯ ಕಲ್ಪನೆಗಳು ಮತ್ತು ಸಂಸ್ಥೆಗಳು

50.6 ರಾಜಪದವಿಯ ಕಲ್ಪನೆಗಳು (ಸಿದ್ಧಾಂತಗಳು)

50.6.1 ಮೂಲದ ಸಿದ್ಧಾಂತಗಳು

50.6..2 ರಾಜಪದವಿಯ ಲಕ್ಷಣ

50.6.3. ರಾಜರ ಕರ್ತವ್ಯಗಳು

50.6.4 ಸಿಂಹಾಸನಾರೋಹಣ ಸಮಾರಂಭ

50.7 ಮುಕ್ತಾಯ ಅಥವಾ ಸಾರಾಂಶ

## 50.0 ಉದ್ದೇಶಗಳು

* ಈ ಘಟಕದಲ್ಲಿ ನಾವು ಮೂಲಭೂತವಾಗಿ ಭಾರತದ ರಾಜಕೀಯ ಕಲ್ಪನೆಗಳು ಮತ್ತು ಸಂಸ್ಥೆಗಳ ಬಗ್ಗೆ ಅಧ್ಯಯನ ಮಾಡುತ್ತೇವೆ.
* ಭಾರತೀಯ ರಾಜಕೀಯ ಕಲ್ಪನೆ ಮತ್ತು ಸಂಸ್ಥೆಗಳ ವೈಶಿಷ್ಟಗಳ ಬಗ್ಗೆ ತಿಳಿದುಕೊಳ್ಳುವುದು
* ರಾಜಕೀಯ ಕಲ್ಪನೆಗಳು ಮತ್ತು ಸಂಸ್ಥೆಗಳ ಆಧಾರಗಳ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳುವುದು
* ಭಾರತೀಯ ತತ್ವಶಾಸ್ತ್ರದಲ್ಲಿ ಧರ್ಮದ ಕಲ್ಪನೆ ಮತ್ತು ಹಿಂದೂ ರಾಜಕೀಯ ಕಲ್ಪನೆಯ ಮೇಲೆ ಅದರ ಪರಿಣಾಮವನ್ನು ಅರ್ಥಮಾಡಿಕೊಳ್ಳುವುದುಯ
* ಕಲ್ಪನೆಗಳು ಮತ್ತು ಸಿದ್ಧಾಂತಗಳು ಅಥವಾ ಸಮಾಜದ ಮೇಲೆ ಪರಿಣಾಮಗಳನ್ನು ಗುರುತಿಸುವುದು.
* ವೇದಗಳ ಕಾಲದ ಪ್ರಾಚೀನ ಸಂಸ್ಥೆಗಳಾದ ಸಭಾ ಮತ್ತು ಸಮಿತಿಗಳ ಬಗ್ಗೆ ತಿಳಿದುಕೊಳ್ಳುವುದು
* ಕಡೆಯದಾಗಿ, ರಾಜಪದವಿಯ ಸಿದ್ಧಾಂತಗಳು, ರಾಜನ ಲಕ್ಷಣ, ಸಮಾಜದಲ್ಲಿ ಅನುಸರಿಸಬೇಕಾದ ರಾಜನ ಕರ್ತವ್ಯಗಳ ಬಗ್ಗೆ ತಿಳಿದುಕೊಳ್ಳುವುದು.

ಹೀಗೆ ಈ ಘಟಕದಲ್ಲಿ ನಾವು ಮೇಲಿನ ಎಲ್ಲಾ ಅಂಶಗಳನ್ನು ಗುರುತಿಸುವ ಮೂಲಕ ರಾಜಕೀಯ ಆಲೋಚನೆಗಳು ಮತ್ತು ಸಂಸ್ಥೆಗಳು ಹೇಗೆ ಮತ್ತು ಏಕೆ ಅಸ್ಥಿತ್ವದಲ್ಲಿದ್ದವೆಂಬುದನ್ನು ಅರ್ಥ ಮಾಡಿಕೊಳ್ಳಲು ಅವಕಾಶ ಕಲ್ಪಸುತ್ತದೆ.

## 50.1 ಪೀಠಿಕೆ

ರಾಜಕೀಯ ಸಿದ್ಧಾಂತವು ಮಾನ ಸಂಸ್ಕೃತಿಯ ಗುರುತಾಗಿದೆ ಪಾಶ್ಚಿಮಾತ್ಯ ವಿದ್ವಾಂಸರು ರಾಜಕೀಯಶಾಸ್ತ್ರಕ್ಕೆ ಪ್ರಾಚೀನ ಭಾರತ ಯಾವುದೇ ಕೊಡುಗೆಯನ್ನು ನೀಡಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಅಭಿಪ್ರಾಯ ಸಂಪೂರ್ಣವಾಗಿ ತಪ್ಪು. ಅನೇಕ ಅಂಶಗಳು ಪ್ರಾಚೀನ ಭಾರತೀಯರು ರಾಜಕೀಯ ಸಿದ್ಧಾಂತಗಳು ಮತ್ತು ಸಂಸ್ಥೆಗಳ ಬಗ್ಗೆ ಕಲ್ಪನೆಗಳನ್ನು ಹೊಂದಿದ್ದರೆಂಬುದನ್ನು ಸಮರ್ಥಿಸುತ್ತದೆ.

ಸಾಮಾಜಿಕ ನೀತಿ ನಿಯಮಗಳು ಒಂದು ಜನರ ಗುಂಪನ್ನು ಒಂದು ಸಮಾಜವನ್ನಾಗಿ ಮಾಡುತ್ತದೆ. ಕ್ರಮೇಣ ಸಮಾಜವು ಒಂದು, ರಾಜಕೀಯ ಕಲ್ಪನೆಯಾಗಿ ಬೆಳೆಯುತ್ತದೆ. ಮನುಷ್ಯರು ನಿಯಮಗಳ ಕಾಯಿದೆಯನ್ನು ಒಪ್ಪಿಕೊಂಡರು. ಮುಖ್ಯವಾಗಿ ನೀತಿ ನಿಯಮಗಳು ಸಮಾಜದಲ್ಲಿ ಸಾಮಾಜಿಕ ರೀತಿ ನೀತಿಗಳನ್ನು ಸೃಷ್ಟಿಸಿ ಉತ್ತಮ ಬದುಕಿಗೆ ಕಾರಣವಾದವು. ಇದು ರಾಜಕೀಯ ಕಲ್ಪನೆಗಳು ಮತ್ತು ಸಂಸ್ಥೆಗಳಿಗೆ ತಳಹದಿಯಾಯಿತು. ಇದನ್ನೇ ಈ ನಿರ್ದಿಷ್ಟ ಘಟಕದಲ್ಲಿ ನೋಡಬಹುದಾಗಿದೆ.

ಇತಿಹಾಸ ಕೇವಲ ಕಥೆಯಲ್ಲ. ಅದು ವಾಸ್ತವ ಅಂಶಗಳನ್ನು ಅವಲಂಭಿಸಿದೆ. ಈ ಅಂಶಗಳು ಸತ್ಯವಾಗಿರಬೇಕು. ಇತಿಹಾಸವು ಈಗಾಗಲೇ ನಡೆದು ಹೋಗಿರುವ ಘಟನೆಗಳೊಂದಿಗೆ ಸಾಗುತ್ತದೆ. ಇತಿಹಾಸದ ವಿಧ್ಯಾರ್ಥಿಗೆ ಸಾಕ್ಷ್ಯದ ಅಗತ್ಯವಿದೆ. ಸಾಕ್ಷ್ಯವು ಹೇಳಿಕೆಗಳಿಗೆ ಪಾವಿತ್ರ್ಯತೆಯನ್ನು ಒದಗಿಸುತ್ತದೆ ಎಂದರೆ ಘಟನೆಯ ವರದಿ ನಂಬಿಕೆಗೆ ಅರ್ಹವಾಗುತ್ತದೆ. ಇತಹಾಸದಲ್ಲಿ "ನಾವು ಅದು ಏಕೆ ನಡೆಯಿತು?" ಎಂದೂ ಪ್ರಶ್ನಿಸುತ್ತೇವೆ. ಹೀಗೆ ಏಕೆ ಎಂಬುದನ್ನು ಅರ್ಥೈಸುವುದು ಯಾವಾಗಲೂ ಅವಶ್ಯಕವಾಗಿದೆ. ಇದಕ್ಕೆ ಆಧಾರಗಳು ಉತ್ತಮ ಮಾಹಿತಿಯನ್ನು ಒದಗಿಸುತ್ತವೆಯೆಂಬುದನ್ನು ಈ ಘಟಕದಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

## 50.2 ಭಾರತೀಯ ರಾಜಕೀಯ ಚಿಂತನೆಗಳು ಮತ್ತು ಸಂಸ್ಥೆಗಳ ವೈಶಿಷ್ಟಗಳು

ರಾಜ್ಯವ್ಯವಸ್ಥೆಯ ಶಾಸ್ತ್ರ ಅಥವಾ ರಾಜಕೀಯ ಶಾಸ್ತ್ರಕ್ಕೆ ಪ್ರಾಚಿನ ಭಾರತೀಯರು ಯಾವುದೇ ಕೊಡುಗೆಯನ್ನು ನೀಡಲಿಲ್ಲವೆಂಬುದು ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಅವರ ಅಭಿಪ್ರಾಯದಲ್ಲಿ ಭಾರತೀಯರು ಸಾರ್ವಭೌಮಾಧಿಕಾರದ ಸಿದ್ಧಾಂತ, ವಿದೇಯತೆಯ ತತ್ವ ಮತ್ತು ಚರ್ಚೆಯ ವಿಷಯದಂತಹ ಶಾಸ್ತ್ರಗಳ ಬಗ್ಗೆ ಎಂದಿಗೂ ಚಿಂತಿಸಲಿಲ್ಲ.

ಪ್ರೊ. ಮ್ಯಾಕ್ಸ್‌ಮ್ಯಾಲರ್, ಬ್ಲೂಮ್‌ಫೀಲ್ಡ್ ಮೊದಲಾದವರು ರಾಜಕೀಯ ಊಹಾಪೋಹದ ಹಾದಿಯ ಪ್ರಾಚಿನ ಭಾರತೀಯರ ಚಿಂತನೆಯನ್ನು ಆಕರ್ಶಿಸಲಿಲ್ಲವೆಂದು ಹೇಳಿದ್ದಾರೆ. ಮ್ಯಾಕ್ಸ್‌ಮ್ಯುಲರ್ ಮಾತುಗಳಲ್ಲಿಯೇ ಹೇಳುವುದಾದರೆ " ಧರ್ಮ ಮತ್ತು ತತ್ವಶಾಸ್ತ್ರಗಳು ಮಾತ್ರವೇ ಅವರ ವಲಯಗಳಾಗಿದ್ದು ಅವುಗಳಲ್ಲಿ ಮಾತ್ರವೇ ಭಾರತೀಯರ ಮನಸ್ಸು ವರ್ತಿಸಲು ಸೃಷ್ಟಿಸಲು ಮತ್ತು ಆರಾಧಿಸಲು ಮುಕ್ತವಾಗಿದ್ದಿತು.

ಈ ಎಲ್ಲಾ ಅಭಿಪ್ರಾಯಗಳಿಂದ ನಾವು ಪ್ರಾಚೀನ ಭಾರತೀಯರ ಚಿಂತನೆಯನ್ನು ಧರ್ಮ ಮತ್ತು ಪಾರಮಾರ್ಥಿಕ ವಿಷಯಗಳಿಂದಲ್ಲದೆ ಬೇರೆ ಯಾವುದರಿಂದಲೂ ಅಳೆಯವಾಗಿಲ್ಲವೆಂದು ಅರ್ಥಮಾಡಿಕೊಳ್ಳಬಹುದಾಗಿದೆ. ಪ್ರಾಚೀನ ಭಾರತವು-ತನ್ನದೇ ಆದ ಪ್ರಗತಿಯನ್ನು ಹೊಂದಿದ್ದಿತು. ಅವುಗಳು ಧಾರ್ಮಿಕ ಗ್ರಂಥಗಳಲ್ಲಿ ಸೇರಿ ಹೋಗಿವೆ. ಆದ್ದರಿಂದ ರಾಜಕೀಯ ಚಿಂತನೆಯೆ ಕಲ್ಪನೆ ಕಡೆಗಣಿಸುವಂತಹುದಲ್ಲ ಇಲ್ಲವೇ ಸಂಪೂರ್ಣವಾಗಿ ಇಲ್ಲವೆಂದೂ ಹೇಳಿಲಾಗುವುದಿಲ್ಲ. ಅವರು ಇತರರ ವಿಷಯಗಳ ಬಗ್ಗೆಯೂ ಆಸಕ್ತಿಯುಳ್ಳವರಾಗಿದ್ದು ಯಾವುದೇ ನಾಗರೀಕತೆಗಳು ಇತರ ರಂಗಗಳಲ್ಲಿ ಆಲೋಚಿಸದಿದ್ದಾಗಲೇ ಭಾರತೀಯ ಮನಸ್ಸು ಕರಕುಶಲಕಲೆಗಳು, ಪಾಕಶಾಸ್ತ್ರ, ನಾಟ್ಯ, ಸಂಗೀತ ಮತ್ತು ಲೈಗಿಂಕ ಶಾಸ್ತ್ರ(ಪ್ರಣಯಶಾಸ್ತ್ರ) ಮುಂತಾದ ಸಾಮಾನ್ಯವಾಗಿ ಸಾಹಿತ್ಯದಲ್ಲಿ ಕಡೆಗಣಿಸಲಾಗುವ ವಿಷಯಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಪ್ರಾಚೀನ ಭಾರತೀಯರು 64 ಕಲೆಗಳಲ್ಲಿ ಪಾರಂಗತರಾಗಿದ್ದರೂ, ಅವರು ತಮ್ಮ ಜೀವನಕ್ಕೆ ಧಾರ್ಮಿಕ ಬಣ್ಣವನ್ನು ನೀಡಿದ್ದರು. ವಾಸ್ತವವಾಗಿ ಮಹಾಭಾರತ ಮುಂತಾದ ಪವಿತ್ರ ಸಾಹಿತ್ಯದಲ್ಲಿ ರಾಜಕೀಯ ಚಿಂತನೆಗಳಿವೆ. ಮನುಸ್ಮೃತಿಯು ರಾಜಕೀಯ ಒಂದು ಭಾಗವನ್ನು ಒಳಗೊಂಡಿದೆ. ಅರ್ಥಶಾಸ್ತ್ರವು ಸಂಪೂರ್ಣವಾಗಿ ರಾಜಶಾಸ್ತ್ರ ಗ್ರಂಥವಾಗಿದೆ. ಉದಾಹರಣೆಗೆ, ವೇದ ಸಂಹಿತೆಗಳು, ಸ್ಮೃತಿಗಳು ಮತ್ತು ಇತರ ಹಿಂದೂ ಪವಿತ್ರ ಗ್ರಂಥಗಳು ಕಾನೂನು ಕುಟುಂಬದ ವಿದಿ ಅಥವಾ ಸಂಸ್ಕಾರಗಳು ಮತ್ತು ರಾಜಕೀಯ ಆಲೋಚನೆಗಳನ್ನು ಒಳಗೊಂಡಿದೆ. ಭಾರತೀಯ ಧರ್ಮಕ್ಕೆ ಸಂಪೂರ್ಣವಾಗಿದ್ದರೆಂಬುಹು ನಿಸ್ಸಂದೇಶವಾಗಿಯೂ ವಸ್ತು ಸ್ಥಿತಿಯಾಗಿದೆ. ಪಾಶ್ಚಿಮಾತ್ಯ ವಿದ್ವಾಂಸರೊಬ್ಬರು ಅಭಿಪ್ರಾಯಪಟ್ಟಿರುವಂತೆ " ಧಾರ್ಮಿಕವಲ್ಲದ ಭಾರತದ ಇತಿಹಾಸವಿಲ್ಲ". ನಮ್ಮ ಎಲ್ಲಾ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಸಂಘಸಂಸ್ಥೆಗಳು ಧಾರ್ಮಿಕ ಬಣ್ಣವನ್ನು ಹೊಂದಿದೆ. ಒಬ್ಬ ವ್ಯಕ್ತಿಯ ಜೀವನದಲ್ಲಿ, ಹುಟ್ಟಿನಿಂದ ಸಾವಿನವರೆಗೆ ಎಲ್ಲಾ ಘಟನೆಗಳೂ ಧಾರ್ಮಿಕ ಮಹತ್ವವನ್ನು ಪಡೆದಿವೆ. ಭಾರತೀಯ ರಾಜಕೀಯ ಚಿಂತನೆಗಳು ಮತ್ತು ಸಂಸ್ಥೆಗಳು ಏಕೆ ಧಾರ್ಮಿಕ ಬಣ್ಣವನ್ನು ಪಡೆದವೆಂಬುದನ್ನು ಇದು ವಿವರಸುತ್ತದೆ.

ರಾಜಕೀಯ ಸಿದ್ಧಾಂತದ ಸ್ವರೂಪ ಮತ್ತು ಸ್ವಭಾವ ಮೇಲೆ ನೀತಿಶಾಸ್ತ್ರದ ಪ್ರಾಬಲ್ಯವು ಭಾರತೀಯ ರಾಜಕೀಯ ಆಲೋಚನೆಯ ಮತ್ತೊಂದು ವೈಶಿಷ್ಟ್ಯವಾಗಿದೆ. ಉದಾಹರಣೆಗೆ ಮಹಾಭಾರತದಲ್ಲಿ ಯುದ್ಧದ ನೈತಿಕ ತತ್ವದ ಮೇಲೆ ಒಂದು ಭಾಗವಿದೆ. ಮನುಸ್ಮೃತಿಯಲ್ಲಿಯೂ ಅಂತಹ ವಿವರಗಳು ದೊರೆಯುತ್ತದೆ.

ಜನರ ಅರ್ಥಿಕ ಸಂಮೃದ್ಧಿಯನ್ನು ಅಭ್ಯುದಯವನ್ನು ನೋಡಿಕೊಳ್ಳವುದು ಸರ್ಕಾರ ವಿಶೇಷ ಕರ್ತವ್ಯವಾಗಿದ್ದಿತು. ರಾಜಕೀಯ ಚತುರತೆ ರಾಜಕೀಯ ಸಿದ್ಧಾಂತದ ಸಮಗ್ರಭಾಗವಾಯಿತು. ಏಳು ಶಾಖೆಗಳನ್ನೊಳಗೊಂಡ (ಸಪ್ತಾಂಗ) ರಾಜ್ಯದ ಕಲ್ಪನೆಯು ಸೇನೆ, ಕೋಟೆಗಳಿಂದ ರಕ್ಷಣೆ, ಹಣಕಾಸು, ಗೂಡಚರ್ಯೆ ಮುಂತಾದವುಗಳ ಬಗ್ಗೆ ಸಮಾನ ಗಮನ ನೀಡುವುದು ಅತ್ಯವಶ್ಯಕವೆಂಬಂತೆ ಮಾಡಿದ್ದಿತು. ಸಾಮಾಜಿಕ ವ್ಯವಸ್ಥೆಯನ್ನು ಸಮರ್ಥಿಸುವುದು (ಎತ್ತಿಹಿಡಿಯುವುದು) ರಾಜ್ಯದ ರಕ್ಷಣಾ ಕರ್ತವ್ಯದ ಒಂದು ಭಾಗ ಎಲ್ಲಾ ಕಾಲದಲ್ಲೂ ಪರಿಗಣಿಸಲಾಗಿದ್ದಿತು. ಸ್ವಾಭಾವಿಕವಾಗಿಯೇ ಸಮಾಜದಲ್ಲಿ ಮನುಷ್ಯನ ಸಂಘಟನೆಯಿಂದ ಉದ್ಭವಿಸುವ ಎಲ್ಲಾ ಸಮಸ್ಯೆಗಳನ್ನು ಅದು ಗಂಬೀರವಾಗಿ ಎದುರಿಸಿತು. ಪಾಶ್ಚಿಮಾತ್ಯ ದೇಶಗಳೊಂದಿಗೆ ಹೋಲಿಸಿ ನೋಡಿದಾಗ ಸಾಮಾಜಿಕ ಚಿಂತನೆಯು ಹೆಚ್ಚು ಭಿನ್ನವಾಗಿದ್ದಂತೆ, ಅಲ್ಪವೇ ವ್ಯವಸ್ಥಿತ ಮತ್ತು ನಿಖರವಾಗಿದ್ದಂತೆ ಕಂಡುಬರುತ್ತದೆ.

ರಾಜ್ಯ ಮತ್ತು ಸಮಾಜದ ರಚನೆಯಲ್ಲಿ ದೈವದ ಕೈವಾಡ ಭಾರತೀಯ ಸಾಮಾಜಿಕ ಚಿಂತನೆಯ ಮತ್ತೊಂದು ವೈಶಿಷ್ಟ್ಯವಾಗಿದೆ. ಆನಂತರದ ಎಲ್ಲಾ ಉಲ್ಲಂಘನೆಯು ಸಾಮಾಜಿಕ ವ್ಯವಸ್ಥೆಯವನ್ನು ಅಲುಗಿಸುವ ಮೂಲಕ ರಾಜಕೀಯ ವ್ಯವಸ್ಥೆಯ ಮೇಲೆ ಪರಿಣಾಮವುಂಟು ಮಾಡಿದೆ.

ಇಂತಹ ವ್ಯವಸ್ಥೆಯಲ್ಲಿ ವ್ಯಕ್ತಿಗಿಂತಲೂ ಸಮಾಜವು ಹೆಚ್ಚಿನ ಪ್ರಾಮುಖ್ಯತೆಯನ್ನ ಪಡೆಯುತ್ತದೆ. ವ್ಯಕ್ತಿಯು ಸಮಾಜದ ಹಿತವನ್ನು ಕಾಯಬೇಕಾಗುತ್ತದೆ. ನೈತಿಕ ಉದ್ದೇಶವು ವ್ಯಕ್ತಿ ಮತ್ತು ಸಮಾಜವನ್ನು ಒಂದು ಗೂಡಿಸುತ್ತದೆ. ಇಂತಹ ಭಾವನೆಯು ಸ್ವಾಭಾವಿಕ ಹಕ್ಕುಗಳನ್ನು ನಿರಾಕರಿಸುತ್ತದೆ. ವ್ಯಕ್ತಿ ಮತ್ತು ಸಮಾಜಗಳು ಒಂದಾಗುವುದರಿಂದ ವ್ಯಕ್ತಿಯು ಸಮಾಜದ ವಿರುದ್ಧ ಯಾವುದೇ ಹಕ್ಕುಗಳನ್ನು ಪಡೆಯಲು ಸಾಧ್ಯವಿಲ್ಲ.

ಸಮಾಜವು ರಾಜ್ಯ ರಚನೆಯ ಹೊಸ್ತಲಿನಂತಿದ್ದರೆ ಮತ್ತು ವರ್ಣ(ಜಾತಿ) ರಚನೆಯು ರಾಜ್ಯ ಅಥವಾ ಸರ್ಕಾರಕ್ಕೆ ಸಾಮಾಜಿಕ ಆಧಾರವಾದುತ್ತದೆ. ವರ್ಣಾಶ್ರಮ ವ್ಯವಸ್ಥೆಯನ್ನು ರಕ್ಷಿಸುವುದು ಮತ್ತು ಧರ್ಮವನ್ನು ಎತ್ತಿ ಹಿಡಿಯುವುದು ರಾಜ್ಯದ ಅಧಿಕಾರಕ್ಕೆ ಬಿಡಲಾಗಿದೆ. ಸಾಮಾಜಿಕ ವ್ಯವಸ್ಥೆಯನ್ನು (ಶಿಸ್ತು) ಎತ್ತಿ ಹಿಡಿಯುವುದೂ ರಾಜ್ಯದ ಕರ್ತವ್ಯವಾಗಿದೆ.

ಆಧುನಿಕ ಚಿಂತಕರು ರಾಜ್ಯ ಮತ್ತು ಸರ್ಕಾರಗಳ ನಡುವೆ ಸ್ಪಷ್ಟವಾದ ವ್ಯತ್ಯಾಸವನ್ನು ಮಾಡಿದ್ದಾರೆ. ಸರ್ಕಾರಗಳು ಬರಬಹುದು ಮತ್ತು ಹೋಗಬಹುದು, ಆದರೆ ರಾಜ್ಯ ಶಾಶ್ವತವಾಗಿರುತ್ತದೆ. ಕಾಯ್ದೆ ಕಾನೂನುಗಳು ನೀತಿ ಮೊದಲಾದವುಗಳನ್ನು ಸರ್ಕಾರದ

ಭಾಗಗಳೆಂದು ಪರಿಗಣಿಸಲಾಗುತ್ತದೆ. ಆದರೆ ಪ್ರಾಚೀನ ಭಾರತೀಯ ಚಿಂತಕರು. ರಾಜ್ಯ ಮತ್ತು ಸರ್ಕಾರಗಳ ನಡುವೆ ವ್ಯತ್ಯಾಸವನ್ನು ಮಾಡುವುದಿಲ್ಲ, ಸರ್ಕಾರವು ಸಾಮಾನ್ಯವಾಗಿ ರಾಜಪ್ರಭುತ್ವವಾಗಿದ್ದುದರಿಂದ ರಾಜ ಎಂಬ ಪದವು ಸರ್ಕಾರ ಮತ್ತು ರಾಜ್ಯಗಳ ನಿಜವಾದ ಪರ್ಯಾಯ ಪದವಾಗಿತ್ತು.

ಚರ್ಚ್ (ಕ್ರೈಸ್ತ ದೇವಾಲಯ) ಮತ್ತು ರಾಜ್ಯಗಳ ನಡುವೆ ಸಂಘರ್ಷವು ಮಧ್ಯಕಾಲೀನ ಯೂರೋಪಿನ ಇತಿಹಾಸದ ಒಂದು ಲಕ್ಷಣವಾಗಿದ್ದು, ಯೂರೋಪಿನ ರಾಜಕೀಯ, ಚಿಂತನೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಪ್ರಾಚೀನ ಭಾರತೀಯ ರಾಜಕೀಯ ಚಿಂತನೆಯಲ್ಲಿ ಈ ಸಮಸ್ಯೆ ಪ್ರಮುಖವಾಗಿಲ್ಲ. ಪ್ರಾಚೀನ ಭಾರತೀಯ ರಾಜ್ಯವನ್ನು ಕಾರ್ಯಾತ್ಮಕವಾಗಿ ಮತ್ತು ರಚನಾತ್ಮಕವಾಗಿ ಒಂದೇ ಶಕ್ತಿಯೆಂದು ನೋಡಲಾಗಿದೆ. ಸರ್ಕಾರವು ಕೇವಲ ರಾಜ್ಯದ ಕಾರ್ಯಾತ್ಮಕ ಅಂಶವಾಗಿದ್ದು ಅದನ್ನು ಯಾವುದೇ ಕಾರಣದಿಂದ ಸಾರ್ವಭೌಮನೆಂದು ಪರಿಗಣಿಸಲಾಗಿಲ್ಲ. ಅದು ಸಾಮಾಜಿಕ ಶಿಸ್ತನ್ನು ಸಹಿಸಿಕೊಂಡಿದ್ದಲ್ಲ. ಅದು ಸರ್ಕಾರದ ಒಂದು ಕಾರ್ಯವಾಗಿದ್ದುದರಿಂದ ಎಂದರೆ ಸಮೂಹದ ಮೇಲೆ ದಂಡದ ಶಾಖೆಯಾಗಿದ್ದುದರಿಂದ ರಾಜಕೀಯ ಅಂತಿಮ ಗುರಿ ಸಮಾಜ ಮತ್ತು ರಾಜ್ಯವು ವ್ಯಕ್ತಿಯು ಸೇರಿರುವ ಒಂದು ಗುಂಪು ಮಾತ್ರ. ಹೀಗೆ ರಾಜ್ಯವೇ ಪರಮಾಧಿಕಾರವಲ್ಲ. ಆದರೆ ಸರ್ಕಾರದ ಅಧಿಕಾರವನ್ನು ಮಿತಿಗೊಳಿಸುವ ಮತ್ತು ಅದರ ಚಲಾವಣೆಯನ್ನು ನಿಯಂತ್ರಿಸುವ ಧರ್ಮ.

ಒಟ್ಟಿನಲ್ಲಿ ಪ್ರಾಚೀನ ಭಾರತದ ರಾಜಕೀಯ ಚಿಂತಕರು ಆಧುನಿಕ ಚಿಂತಕರಿಂದ ಸಂಪೂರ್ಣವಾಗಿ ಭಿನ್ನವಾಗಿದ್ದರು. ಆಧುನಿಕ ಚಿಂತಕರು ಸರ್ಕಾರದ ಕರ್ತವ್ಯಗಳಿಗಿಂತಲೂ ಸರ್ಕಾರಿ ಯಂತ್ರದ ಬಗ್ಗೆ ಕಾಳಜಿ ಹೊಂದಿದ್ದರು.

ಭಾರತೀಯ ರಾಜಕೀಯ ಚಿಂತಕರು ಸರ್ಕಾರಿ ಯಂತ್ರಕ್ಕಿಂತಲೂ ಅದರ ಕರ್ತವ್ಯಗಳೂ ಮಹತ್ವದ ಅಂಶವೆಂದು ಪರಿಗಣಿಸಿದ್ದರು. ಆದಾಗ್ಯೂ ಅವರು ಎರಡನೇ ಅಂಶವನ್ನು ಕಡೆಗಣಿಸಿರಲಿಲ್ಲ. ಏಕೆಂದರೆ ಆ ವಿಷಯವನ್ನು ದಂಡನೀತಿಯ ಮೇಲಿನ ಸಾಹಿತ್ಯದಲ್ಲಿ ಪ್ರಸ್ತಾಪಿಸಲಾಗಿದೆ. ಧರ್ಮವು ಕರ್ತವ್ಯವನ್ನು ನಿರ್ಧರಿಸುತ್ತದೆ ಮತ್ತು ಯಾವುದೇ ಉಲ್ಲಂಘನೆಯನ್ನು ಸರ್ಕಾರದ ಅನ್ಯಾಯದ ಪಾಪದ ಕೆಲಸವೆಂದು ಪರಿಗಣಿಸಲಾಗಿತ್ತು, ಹೀಗೆ ಆಡಳಿತದ ಕರ್ತವ್ಯಗಳು ಸರ್ಕಾರದ ಯಂತ್ರವನ್ನು ನಿರ್ಧರಿಸುತ್ತಿದ್ದು, ಈ ಎರಡು ಕಲ್ಪನೆಗಳ ನಡುವೆ ಒಂದು ಬಗೆಯ ಭಿನ್ನತೆಯ ಭಾವದ ಉಳಿವು ಭಾರತೀಯ ರಾಜಕೀಯ ಚಿಂತನೆಯ ಮಹತ್ವದ ವಿಶಿಷ್ಠ ಲಕ್ಷಣವಾಗಿತ್ತು.

## 50.3 ಭಾರತೀಯ ರಾಜಕೀಯ ಚಿಂತನೆ ಮತ್ತು ಸಂಸ್ಥೆಗಳ ಅಧ್ಯಯನಕ್ಕೆ ಆಧಾರಗಳು

ಪ್ರಾರಂಭದಿಂದಲೂ ಎಂದರೆ ವೇದಗಳ ಕಾಲದಿಂದಲೂ ಭಾರತೀಯರು ಬರವಣಿಗೆಯಲ್ಲಿ ಪರಿಣತರಾಗಿದ್ದು ಮತ್ತು ರಾಜಕೀಯ ಸಂಸ್ಥೆಗಳ ಬೆಳವಣಿಗೆಯ ಬಗ್ಗೆ ಮಾಹಿತಿಯನ್ನು ನೀಡುವ ಅನೇಕ ಧಾರ್ಮಿಕ ಮತ್ತು ಲೌಕಿಕ ಕೃತಿಗಳನ್ನು ಹೊಂದಿದ್ದರು. ಭಾರತದಲ್ಲಿ ರಾಜಕೀಯ ಸಂಸ್ಥೆಗಳ ಆಧಾರಗಳನ್ನು ಸಂಗ್ರಹಿಸುವುದು ಕಷ್ಟದ ಕೆಲಸವಾಗಿದೆ. ನಿಜವಾಗಿಯೂ ಈ ಪ್ರಾಚಿನ ಸಾಹಿತ್ಯದ ಮಾಹಿತಿಯ ದೊಡ್ಡ ಬಂಡಾರವನ್ನು ತನ್ನಲ್ಲಿ ಅಡಗಿಸಿಕೊಂಡಿದ್ದ ಮತ್ತು ಅದನ್ನು ಹೊರತೆಗೆಯುವುದು ಮಹಾ ಮೇಧಾವಿಗಳಾದ ವಿದ್ವಾಂಸರಿಗೆ ಬಿಟ್ಟುದಾಗಿದೆ.

**ಸಾಮಾನ್ಯವಾಗಿ ರಾಜಕೀಯ ಸಂಸ್ಥೆಗಳ ಅಧ್ಯಯನಕ್ಕೆ ನಮಗೆ ಮಾಹಿತಯ ಮಾರ್ಗದರ್ಶನವನ್ನು ನೀಡುವ ಗ್ರಂಥಗಳೆಂದರೆ.**

1 ನಾಲ್ಕು ವೇದಗಳು ಮತ್ತು ಅದರ ಗಣನೀಯ ಸಾಹಿತ್ಯವಾದಿ ಬ್ರಾಹ್ಮಣಗಳು, ಉಪನಿಷತ್ತುಗಳು, ಅರಣ್ಯಕಗಳು, ವೇಂದಾಂಗಗಳು ಮತ್ತು ಇತರೆ ಸಾಹಿತ್ಯ

2 ಮಹಾಕಾವ್ಯಗಳು - ರಾಮಾಯಣ ಮತ್ತು ಮಹಾಭಾರತ ವಿಶೇಷವಾಗಿ ಮಹಾಭಾರತ (ಶಾಂತಿಪರ್ವ)

3 ಧರ್ಮಶಾಸ್ತ್ರಗಳು - ಮನು, ನಾರದ, ಬೃಹಸ್ಪತಿ

4 ಕೌಟಿಲ್ಯನ ಅರ್ಥಶಾಸ್ತ್ರ

5 ಪುರಾಣಗಳು ಮತ್ತು ಉಪನಿಷತ್ತುಗಳು

6 ಕಮಂಡಕನ ನೀತಿಶಾಸ್ತ್ರಗಲು

7 ನಾಣ್ಯಗಳ ಮೇಲಿನ ಪುರಾಣಗಳು.

8 ನಾಣ್ಯಶಾಸ್ತ್ರ

ಪ್ರಾರಂಭದಿಂದಲೂ ಭಾರತೀಯರಿಗೆ ರಾಜಕೀಯ ಶಾಸ್ತ್ರದ ಅರಿವಿದ್ದಿತು. ಅದನ್ನು ರಾಜಶಾಸ್ತ್ರವೆಂದು ಕರೆಯಲಾಗಿದ್ದು ಅದಕ್ಕೆ ರಾಜ್ಯಕ್ಕೆ ಸಂಬಂಧಿಸಿದ ವಿಜ್ಞಾನವೆಂದು ಅರ್ಥವಿತ್ತು. ಅದು ರಾಜಪದವಿ ಮತ್ತು ರಾಜ್ಯದ ಮೂಲವನ್ನು ವಿವರಿಸುತ್ತದೆ. ಅದು ಮುಖ್ಯವಾಗಿ ಸಾಮಾಜಿಕ ಒಪ್ಪಂದ ಸಿದ್ಧಾಂತದ ಮೂಲಕ ರಾಜ್ಯದ ಮೂಲವನ್ನು ವಿವರಿಸುತ್ತದೆ.

ಇವುಗಳ ಜೊತೆಗೆ ಕಮಂಡಕ, ಸೋಮೇಶ್ವರನ ಮಾನಸೋಲ್ಲಾಸ ಮತ್ತು ತಮಿಳಿನಲ್ಲಿ ತಿರುವಲ್ಲೂರರ ತಿರುಕ್ಕುರಳ್ ಪ್ರಾಚೀನ ರಾಜಕೀಯ ಮೇಲೆ ಬೆಳಕು ಚೆಲ್ಲುತ್ತದೆ. ಅಲ್ಲದೆ ವಿವಿಧ ವಿದೇಶೀ ಯಾಂತ್ರಿಕರು ಮತ್ತು ಪ್ರವಾಸಿಗರ ಬರವಣಿಗೆಗಳು ಭಾರತೀಯ ರಾಜಕೀಯ ಚಿಂತನೆಯ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಮೆಗಾಸ್ತನೀಸನ ಇಂಡಿಕಾ ಫಾಹೀನ್, ಹ್ಯೂಯನ್‌ತ್ಸಾಂಗ್ , ಇತ್ಸಿಂಗ್ ಮುಂತಾದ ಚೀನಿ ಬೌದ್ಧ ಯಾತಿರಿಕರು ಬಿಟ್ಟುಹೋಗಿರುವ ವರದಿಗಳು ಪ್ರಾಚೀನ ಭಾರತದಲ್ಲಿದ್ದ ರಾಜಕೀಯ ಪರಿಸ್ಥಿತಿ ಮತ್ತು ಚಿಂತನೆಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡುತ್ತವೆ.

ಅಂತೇಯೇ, ಪ್ರಾಕ್ತನಶಾಸ್ತ್ರ, ಶಿಲಾಶಾಸನಗಳು ಮತ್ತು ನಾಣ್ಯಗಳು ಮಾಹಿತಿಯನ್ನು ಒದಗಿಸುತ್ತವೆ. ಅಶೋಕನ ಶಾಸನಗಳು - ಕ್ರಿ.ಶ. 158 ರ ರುದ್ರದಾಮನ ರಿಗ್‌ನಾರ್ ಖಂಡೆಗಲ್ಲು ಶಾಸನವು 13 ಮತ್ತು 14ನೇ ಶತಮಾನಗಳ ಚೋಳ ದೊರೆ ಪರಾಂತಕನ ಉತ್ತರಮೆರೂರು ಶಾಸನಗಳು ರಾಜ್ಯಗಳಲ್ಲಿ ಅಧಿಕಾರ ವಿಕೇಂದ್ರೀಕರಣ ತತ್ವಗಳನ್ನು ತೋರಿಸುತ್ತದೆ.

ಹೀಗೆ ಪ್ರಾಚೀನ ಶಾಸನಗಳು ಪ್ರಾಚಿನ ಭಾರತೀಯ ರಾಜಕೀಯ ಕಲ್ಪನೆಗಳಿಗೆ ಸಂಪೂರ್ಣ ಬೆಂಬಲ ನೀಡುತ್ತವೆ. ಸಾಮ್ರಾಜ್ಯಗಳ ಕಾಲಕ್ಕೆ ಸೇರಿದ ಪ್ರಾಚೀನ ಭಾರತೀಯ ನಾಣ್ಯಗಳ ಮೇಲೆ ನಾವು ಕಾಣುವ ದಂತಕಥೆಗಳು ಪ್ರಾಚೀನ ಭಾರತೀಯರಲ್ಲಿದ್ದ ರಾಜಕೀಯ ಕಲ್ಪನೆಗಳನ್ನು ಹೊರಗೆಡವುತ್ತವೆ.

ನಾಣ್ಯಶಾಸ್ತ್ರವೂ ಸಹ ವಿಭಿನ್ನ ರಾಜಕೀಯ ಕಲ್ಪನೆಗಳನ್ನು ಗ್ರಹಿಸಲು ನಮಗೆ ನೆರವಾಗುತ್ತದೆ.

ಹೀಗೆ ಪ್ರಾಚೀನ ಭಾರತೀಯ ರಾಜಕೀಯದ ಅಧ್ಯಯನಕ್ಕೆ ಇರುವ ಆಧಾರಗಳು ಅನೇಕ ರೂಪಗಳಲ್ಲಿ ಹಂಚಿ ಹೋಗಿವೆ. ಇವೆಲ್ಲವುಗಳಿಂದಲೂ ಪ್ರಾಚೀನ ಭಾರತೀಯರು ಸಮಕಾಲಿನ ಪಾಶ್ಚಿಮಾತ್ಯರೊಂದಿಗೆ ಹೋಲಿಸಿ ನೋಡಿದಾಗ ಉತ್ತಮ ರಾಜಕೀಯ ಸಿದ್ಧಾಂತಗಳನ್ನು ಹೊಂದಿದ್ದರೆಂಬುದನ್ನು ಸಮರ್ಥಿಸಬಹುದಾಗಿದೆ.

## 50.4 ಧರ್ಮದ ಕಲ್ಪನೆ ಮತ್ತು ಹಿಂದೂ ರಾಜಕೀಯ ಭಾವನೆಗಳ ಮೇಲೆ ಅದರ ಪರಿಣಾಮ

'ಧರ್ಮ' ವೆಂಬ ಪದದ ನಿಖರವಾದ ಅರ್ಥವನ್ನು ನಿರ್ಧರಿಸಲು ಸಾಧ್ಯವಿಲ್ಲ. ಶಬ್ದೋತ್ಪತ್ತಿಯಂತೆ ಧರ್ಮವೆಂದರೆ ಏನು ವಸ್ತುಗಳನ್ನು ಒಂದುಗೂಡಿಸುವುದೋ ಅದು. ಧರ್ಮವೆಂಬ ಪದ ಹಿಡಿದುಕೊ ಎಂಬ ಮೂಲದಿಂದ ಬಂದಿದ್ದು ಯಾವುದು ಒಂದು ವಸ್ತುವನ್ನು ಹಿಡಿದುಕೊಂಡಿರುವುದೊ ಮತ್ತು ಅದರ ಜೀವವನ್ನು ಉಳಿಸಿರುವುದೊ ಎಂಬ ಅರ್ಥವಿದೆ. ಯಾವುದು ಮಾನವೀಯತೆಯನ್ನು ಪರಿಶುದ್ಧತೆ ಪರಿಪೂರ್ಣತೆಯನ್ನು ಅಥವಾ ಪ್ರಪಂಚದ ಸಮಗ್ರತೆಯನ್ನು ಮಾಡುವುದೋ ಅಥವಾ ಛಿದ್ರಗೊಳಿಸುವುದೋ ಅದೇ ಅಧರ್ಮ ಅಥವಾ ಅವನತಿಯ ತತ್ವ. ಧರ್ಮದ ಕಲ್ಪವನೆಯು ವ್ಯಕ್ತಿಯು ಪರಿಶುದ್ಧತೆ ಮತ್ತು ಸಮಾಜದ ಸಮಗ್ರತೆಯನ್ನು ಒಂದುಗೂಡಿಸಿ ಅವುಗಳನ್ನು ಒಂದಾಗಿ ರೂಪಿಸುತ್ತದೆ. ಮನುವಿನ ಮಾತಿನಲ್ಲಿ "ಧರ್ಮವು ಪರಿಪೂರ್ಣ ಪರಿಶುದ್ಧ ಹೃದಯದೊಂದಿಗೆ ವಿವೇಕವುಳ್ಳವರು ಮತ್ತು ಪಂಡಿತರು ಅನುಸರಿಸಿದ ಮತ್ತು ಬದುಕಿದ ಹಾದಿಯಾಗಿದೆ. ಅವರಿಗೆ ಇಷ್ಟವಾದುದಾಗಲಿ , ಇಷ್ಟವಿಲ್ಲದಿದ್ದುದಾಗಲಿ ಇರಲಿಲ್ಲ, ಅವರು ಎಲ್ಲಾ ಜೀವಿಗಳಿಗೂ ಹಿತವನ್ನು ಬಯಸುವವರು, ಅವರು ವೇದಗಳನ್ನು ತಿಳಿದಂತವರಾಗಿದ್ದರು ಮತ್ತು ಅವರ ನಡವಳಿಕೆಯು ಧರ್ಮದ ಗುಣಮಟ್ಟಕ್ಕೆ ಹೊಂದಿಕೆಯಾಗಿರುವವರು".

ಧರ್ಮ ಎಂಬ ಪದವನ್ನು ಸಾಂಪ್ರದಾಯಿಕ ವರ್ಣದ ಆಚರಣೆಗಳಿಂದ ಆತ್ಮದ ಗುಣವಿಶೇಷಗಳವರೆಗೆ ವಿಸ್ತರಿಸಿರುವ ಅನೇಕ ಭಾವನೆಗಳಲ್ಲಿ ಬಳಸಲಾಗಿದೆ. ಅ ಧರ್ಮದಲ್ಲಿ ಜೀವನದ ಬಾಹ್ಯ ಮೌಲ್ಯಗಳನ್ನು ರೂಪಿಸುವ ಅನೇಕ ವಿಧಗಳಿವೆ. ಅವುಗಳೆಂದರೆ 1 ಧರ್ಮ -ಸನಾತನ ಅಥವಾ ಸಾಧಾರಣ ಧರ್ಮ 2 ವರ್ಣ ಧರ್ಮ 3 ಆಶ್ರಮ ಧರ್ಮ 4 ಆಪದ್ಧರ್ಮ 5 ಕ್ಷಾತ್ರಧರ್ಮ 6 ರಾಜಧರ್ಮ ಮೊದಲಾದವು.

ಪ್ರತಿಯೊಂದು ಧರ್ಮವೂ ತನ್ನದೇ ಆದ ಲಕ್ಷಣಗಳನ್ನು ಹೊಂದಿದೆ.

ಸನಾತನ ಧರ್ಮ ಅಥವ ಸಾಧಾರಣ ಧರ್ಮವು ಜೀವನದ ಬಾಹ್ಯ ಮೌಲ್ಯಗಳನ್ನು ರೂಪಿಸುತ್ತದೆ. ಇದು ಮನುಷ್ಯನನ್ನು ದುರಾಸೆ ಕೋಪ ಮತ್ತು ಲೋಭಗಳಿಂದ ಮುಕ್ತಗೊಳಿಸುವುದೆಂದು ಎಲ್ಲಾ ಧರ್ಮಶಾಸ್ತ್ರಕಾರರೂ ಒಮ್ಮತದಿಂದ ಪರಿಗಣಿಸಿದ್ದಾರೆ.

ವರ್ಣಧರ್ಮವು ಒಂದು ನಿರ್ದಿಷ್ಟ ವರ್ಣ ಅಥವ ವರ್ಗಕ್ಕೆ ವಹಿಸಲಾದ ಕರ್ತವ್ಯಗಳನ್ನು ಅರ್ಥೈಸುತ್ತದೆ. ಆಶ್ರಮ ಧರ್ಮವು ನಾಲ್ಕು ಜೀವನ ಹಂತಗಳಲ್ಲಿ ಪಾಲಿಸಬೇಕಾದ ಕರ್ತವ್ಯಗಳನ್ನು ಸೂಚಿಸುತ್ತದೆ. ಆಪದ್ಧರ್ಮವೆಂದರೆ ಹತಾಶೆಯ ಸಮಯದಲ್ಲಿ ಪಾಲಿಸಬೇಕಾದ ಕರ್ತವ್ಯಗಳನ್ನು ಸೂಚಿಸುತ್ತದೆ. ಕ್ಷಾತ್ರಧರ್ಮವು ಕ್ಷತ್ರಿಯರ ಧರ್ಮವಾಗಿದೆ, ರಾಜಧರ್ಮವು ರಾಜನ ಕರ್ತವ್ಯಗಳನ್ನು ಸೂಚಿಸುತ್ತದೆ.

ವ್ಯಕ್ತಿಯು ಯಾರೇ ಆಗಿದ್ದರು ಮತ್ತು ಅವನು ಯಾವುದೇ ಸ್ಥಾನದಲ್ಲಿದ್ದರು ಅವನು ಸಮಾಜದಲ್ಲಿ ಮತ್ತು ಸಮಾಜದ ಮೂಲಕವಾಗಿದೆ, ತನ್ನಲ್ಲಿರುವ ಅತ್ಯಂತ ಉತ್ತಮವಾದುದನ್ನು ಪಡೆಯಲು ಸಾಧ್ಯವೆಂಬ ಸತ್ಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಮಾಜವು ಅವನನ್ನು ರೂಪಿಸುತ್ತದೆ ಮತ್ತು ಅವನು ಸಮಾಜದ ಹಿತಕ್ಕಾಗಿ ದುಡಿಯುತ್ತಾನೆ.

ಈ ವ್ಯವಸ್ಥೆಯಲ್ಲಿ ವೈಯಕ್ತಿಕ ಧರ್ಮ ಮತ್ತು ಸಾಮಾಜಿಕ ಧರ್ಮಗಳು ಒಂದರಲ್ಲಿ ಸೇರಿಹೋಗುತ್ತವೆ. ಆದರೆ ಸಮಾಜ ವ್ಯಕ್ತಿಗಳ ಸಂಘಟನೆ ಮತ್ತು ಆದ್ದರಿಂದ ಸಮಾಜವು ಪ್ರಗತಿಯ ಗತಿಯನ್ನು ತ್ವರಿತಗೊಳಿಸಲು ಬದಲಾವಣೆಗಾಗಿ ವ್ಯಕ್ತಿಯ ಬಯಕೆಗೆ ಸ್ಪಂದಿಸಬೇಕಾಗುತ್ತದೆ.

### 50.4.2. *ಹಿಂದೂ ರಾಜಕೀಯ ಕಲ್ಪನೆಗಳ ಮೇಲೆ ಆದರ ಪರಿಣಾಮಗಳು*

ಭಾರತೀಯ ರಾಜಕೀಯ ಕಲ್ಪನೆಯ ಮೇಲೆ ಧರ್ಮ ಅಥವ ನೀತಿಶಾಸ್ತ್ರದ ಪ್ರಭಾವ ಅಪಾರವಾಗಿದೆ. ಭಾರತೀ. ರಾಜಕೀಯ ಚಿಂತನೆಯು ಮುಖ್ಯವಾಗಿ ನೀತಿಯ ಉದ್ದೇಶವನ್ನು ಹೊಂದಿದೆ. ರಾಜ್ಯದ ಕರ್ತವ್ಯವು ಕೇವಲ ಕಾರಾತ್ಮಕವಾಗಿಲ್ಲ ಆದರೆ ಪ್ರತಿ ಬಂಧರಾತ್ಮಕವಾಗಿದೆ. ಈಗಾಗಲೇ ಸೂಚಿಸಿರುವಂತೆ ವರ್ಣ ವ್ಯವಸ್ಥೆಯ ರಾಜ್ಯದ ಸಾಮಾಜಿಕ ತಳಹದಿಯಾಯಿತು. ರಾಜ್ಯವನ್ನು ಸಂಕೇತಿಸುವ (ರಾಜ್ಯದ ಸಂಕೇತವಾದ) ರಾಜನ ಮುಖ್ಯ ಕರ್ತವ್ಯವೆಂದರೆ, ವರ್ಣವ್ಯವಸ್ಥೆಯ ರಕ್ಷಣೆ ಮತ್ತು ಆ ಮೂಲಕ ಧರ್ಮವನ್ನು ಎತ್ತಿಹಿಡಿಯುವುದು. ಇವುಗಳ ಜೊತೆಗೆ ದುಷ್ಟರ ಶಿಕ್ಷಣೆ ಮತ್ತು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯ ಸಮರ್ಥನೆ ರಾಜನ ಕರ್ತವ್ಯಗಳಾಗಿದ್ದವು. ಇವುಗಳೆಲ್ಲವೂ ಧರ್ಮ ರಕ್ಷಣೆಯ ಅವನ ಕರ್ತವ್ಯದ ಸಮಗ್ರ ಭಾಗವಾಗಿದ್ದವು.

ರಾಜನು ಸಮಾಜವನ್ನು ರೂಪಿಸುವವನಾಗಿದ್ದನು(ತಿದ್ದಿ ತೀಡುವನಾಗಿದ್ದನು). ತಾನು ಬಯಸಿದ ಸದ್ಗುಣಗಳಗೆ ಚಾಲನೆ ನೀಡುವ ಮೂಲಕ ರಾಜನು ಯುಗದ ನಿರ್ಮಾಣಕಾರನಾಗುತ್ತಿದ್ದನು. ಯುಗದ ರೂವಾರಿಯೆಂಬ ಈ ಕಲ್ಪನೆ ಕೇವಲ ಸಿದ್ಧಾಂತವಾಗಿರದೆ ಬದಲಾಗಿ ಹಿಂದೂ ದೊರೆಗಳು ಅನುಸಲಿಸುತ್ತಿದ್ದ ಒಂದು ತತ್ವವಾಗಿತ್ತು.

ರಾಜಕೀಯದ ಅಂತಿಮ ಗುರಿ ರಾಜ್ಯವಲ್ಲ ಸಮಾಜ, ರಾಜ್ಯವು ಸಮಾಜವನ್ನು ಎಲ್ಲಾ ಸದಾಚಾರಗಳ ಸಾರ್ವಭೌಮ ಭಂಡಾರವೆಂದು ಪರಿಗಣಿಸಿದೆ ಮತ್ತು ಸ್ವಾತಂತ್ರ ಹಾಗೂ ಧರ್ಮದ ಮೇಲೆ ಸ್ಥಾಪಿಸಲಾಗಿರುವ ಮಾನವೀಯತೆಯನ್ನು ಒಳಗೊಳ್ಳಲು ಒಪ್ಪಿಕೊಳ್ಳಲಾಗಿದೆ. ಇದು ಭಾರತೀಯ ರಾಜ್ಯ ವ್ಯವಸ್ಥೆಯ(ಪದ್ಧತಿ) ಸಿದ್ಧಾಂತ, ತತ್ವ ಮತ್ತು ನಿಜವಾದ ಸಂವಿಧಾನವಾಗಿತ್ತು. ಮತೀಯ ಸ್ವಾತಂತ್ರ ಮತ್ತು ಸ್ವಯಂನಿರ್ಧಾರಗಳ ಸಂಕೀರ್ಣದೊಂದಿರೆ ಸಮನ್ವಯನ್ನು ಏರ್ಪಡಿಸುವ ಅತ್ಯುಚ್ಛ ಪ್ರಾಧಿಕಾರವು ಧರ್ಮದ ನಿರ್ವಹಣೆ ಮತ್ತು ರಕ್ಷಣೆಯ ಹೊರೆಯನ್ನು ಹೊಂದಿದ್ದಿತು. ರಾಜನು ಧರ್ಮಕ್ಕಿಂತಲೂ ಮೇಲಿನವನಾಗಿರಲಿಲ್ಲ. ಅವನು ಶಾಸನಗಳನ್ನು ರೂಪಿಸುವವನಾಗಿರಲಿಲ್ಲ. ಆದರೆ ವೇದಗಳು, ಸ್ಮೃತಿಗಳು, ಸದ್ಗುಣಗಳ ಆಚರಣೆ ಮತ್ತು ಆತ್ಮಸಾಕ್ಷಿಯ ತೃಪ್ತಿಗಳ ಆಧಾರದ ಮೇಲೆ ಕಾನೂನುಗಳನ್ನು ಅರ್ಥೈಸುವವನಾಗಿದ್ದನು. (ಕಾನೂನುಗಳಿಗೆ ಅರ್ಥ ಕಲ್ಪಿಸುವವನಾಗಿದ್ದನು) ಅವನು ಧರ್ಮಪ್ರವರ್ತಕವಾಗಿದ್ದನು. ಮತೀಯ ಜೀವನದ ಆರ್ಥಿಕ ಮತ್ತು ರಾಜಕೀಯ ವಿಷಯಗಳು ಕೇವಲಧರ್ಮದ ಭಾಗವಾಗಿದ್ದವು.

ಧರ್ಮ ಅಥವ ರಾಜಕೀಯ ಸದಾಚಾರವನ್ನು ರೂಡಿಸಿಕೊಳ್ಳುವುದು ನಾಗರೀಕ ಜೀವನದ ಮತ್ತೊಂದು ಗುರಿಯೆಂದು ಪರಿಗಣಿಸಲಾಗಿತ್ತು. ಭಾರತೀಯ ರಾಜಕೀಯ ಕಲ್ಪನೆಯ ಮೇಲೆ ಧರ್ಮದ ಪ್ರಭಾವ ಇದರಲ್ಲಿ ಅಡಗಿದೆ. ಭಾರತೀಯ ರಾಜಕೀಯ ಸಿದ್ಧಾಂತವು ಯಾವ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯಿರುವುದೋ, ಎಲ್ಲಿ ಸೌಹಾರ್ಧತೆ ಸ್ವಾತಂತ್ರ ಮತ್ತು ನ್ಯಾಯವಿರುವುದೊ ಮತ್ತು ಎಲ್ಲಿ ಕಾನೂನಿನ ವ್ಯವಸ್ಥೆ ನೈತಿಕ ವ್ಯವಸ್ಥೆಗೆ ಪೂರಕವಾಗಿರುವುದೊ ಅಂತಹ ರಾಜ್ಯದ ಬಗ್ಗೆ ಧಾನಿಸುತ್ತದೆ(ಚಿಂತಿಸುತ್ತದೆ).

## 50.5 ವೇದಗಳ ಕಾಲದ ರಾಜಕೀಯ ಕಲ್ಪನೆಗಳು ಮತ್ತು ಸಂಸ್ಥೆಗಳು

ಈ ಕಾಲದ ರಾಜಕೀಯ ವಿಕಾಶದಲ್ಲಿ 2 ಹಂತಗಳನ್ನು ಗುರುತಿಸಬಹುದು.

1 ಸಂಬಂಧ ಸೂಚಕವಾದ ಸರಳ ಆರ್ಯರ ಸಮಾಜ ಮತ್ತು

2 ರಾಜಪ್ರಭುತ್ವ ಮತ್ತು ರಾಜ್ಯ ರಚನೆಯ ಪರಿವರ್ತನೆಯ ಕಾಲ.

ಋಗ್ವೇದದ ಕಾಲದ ಸಾಮಾಜಿಕ ರಚನೆಗೆ ರಾಜ ಪದವಿ ಆಧಾರವಾಗಿತ್ತು. ವೇದಗಳ ಕಾಲದಲ್ಲಿದ್ದ ಅತ್ಯಂತ ಜನಪ್ರಿಯ ಸಂಸ್ಥೆಗಳೆಂದರೆ ವಿಷಯವೆಂದರೆ ಸಭಾ ಮತ್ತು ಸಮಿತ . ಅವು ಋಗ್ವೇದದ ಕಾಲದ ಅತ್ಯಂತ ಪ್ರಮುಖ ಜನಪ್ರಿಯ ಸಂಸ್ಥೆಗಳಾಗಿದ್ದವು.

ಸಭಾ ಮತ್ತು ಸಮಿತಿಗಳು ಪ್ರಾಚೀನ ಭಾರತೀಯ ರಾಜಕೀಯ ವ್ಯವಸ್ಥೆಯ ಎರಡು ಬಹು ಮುಖ್ಯ ಮತ್ತು ಅತ್ಯಂತ ವಿವಾದಾತ್ಮಕ ಸಂಸ್ಥೆಗಳಾಗಿದ್ದವು. ರಾಜಕೀಯ ಚಿಂತಕರಲ್ಲಿ ಭಿನ್ನ ಅಭಿಪ್ರಾಯಗಳಿದ್ದರೂ ಒಂದು ಸಂಗತಿಯೆಂದರೆ ವೇದದಗಳ ಕಾಲದಲ್ಲಿ ಹೆಚ್ಚಿನ ಈ ಎರಡೂ ಅಧಿಕ ಅಧಿಕಾರ ಮತ್ತು ಪ್ರತಿಷ್ಠೆಯನ್ನು ಹೊಂದಿದ್ದವು ಮತ್ತು ಕಾಲ ಕಳೆದಂತೆ ಅವುಗಳ ಪ್ರಾಮುಖ್ಯತೆ ಕ್ರಮೇಣ ಕ್ಷೀಣಿಸಿತು ಮತ್ತು ಕಡೆಗೆ ತಮ್ಮ ಸ್ಥಾನಮಾನ ಮತ್ತು ಹತೋಟಿಯನ್ನು ಕಳೆದುಕೊಂಡವು" ಹೇಳಬಹುದು.

ಲುಡ್‌ವಿಗ್‌ನ ಅಭಿಪ್ರಾಯದಲ್ಲಿ " ಸಭಾ ಒಂದೇ ಸಭೇಯ ಮೇಲ್ಮನೆ ಮತ್ತು ಸಮಿತಿ ಕೆಳಮನೆಗಳಾಗಿದ್ದವು. ಜಿಮ್ಮರ್ ಎಂಬುವವನು ಹೇಳಿಕೆಯಂತೆ " ಸಭಾ ಗ್ರಾಮ ಸಭೆಯಾಗಿದ್ದಿತು ಮತ್ತು ಸಮಿತಿ ಕೇಂದ್ರ ಸಭೆಯಾಗಿತ್ತು". ಹಿಲ್ಲೆ ಬ್ರೌಡ್ಸ್ ಅಭಿಪ್ರಾಯ ಪಡುವಂತೆ "ಸಭಾ, ಸಮಿತಿಯ ಸಮಾವೇಶದ ಬಿಂದುವಾಗಿತ್ತು". ಸಭಾ ಮತ್ತು ಸಮಿತಗಳ ಬಗೆ ವಿಭಿನ್ನ ಅಭಿಪ್ರಾಯಗಳಿದ್ದೂ "ಅವೆರಡೂ ವಿಶೇಷ ಸಭೆಗಳಾಗಿದ್ದು, ಒಂದು ಮತ್ತೊಂದಕ್ಕಿಂತ ಸಂಪೂರ್ಣವಾಗಿ ಭಿನ್ನವಾಗಿದ್ದವೆಂಬುದು ಸ್ಪಷ್ಟವಾಗಿದೆ. ಸಭಾ ಮತ್ತು ಸಮಿತಿಗಳೆರಡೂ ಸಾಮಾಜಿಕ ಮತ್ತು ರಾಜಕೀಯ ಕರ್ತವ್ಯಗಳನ್ನು ನಿರ್ವಹಿಸುತ್ತದ್ದವು.

ವೇದಗಳಿಂದ ರಾಜನು ಸಭಾ ಮತ್ತು ಸಮಿತಿಗಳಿಗೆ ಭೇಟಿ ನೀಡುತ್ತಿದ್ದನೆಂಬುದು ಸ್ಪಷ್ಟವಾಗಿದೆ. ಈ ಎರಡು ಸಭೆಗಳನ್ನು ' ಪ್ರಜಾಪತಿಯ ಇಬ್ಬರು ಹೆಣ್ಣು ಮಕ್ಕಳೆಂದು ಪರಿಗಣಿಸಿರುವುದು ಅವುಗಳ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.

ಸಭಾಪತಿ ಸಭಾದ ಅಧ್ಯಕ್ಷನಾಗಿದ್ದನು. ಸಭಾ ನ್ಯಾಯಾಲಯವಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಿತು. ಅದರ ಸದಸ್ಯತ್ವವು ಗೌರವ ಮತ್ತು ಸಾಮಾಜಿಕ ಪ್ರತಿಷ್ಠೆಯ ವಿಷಯವಾಗಿತ್ತು. ಪ್ರಾರಂಭದ ಹಂತದಲ್ಲಿ ಸಮಾಜದ ಮೇಲೆ ಸಭಾ ಮತ್ತು ಸಮಿತಿಗಳು ಪ್ರಭಾವ ಗಣನೀಯವಾಗಿದ್ದಿತು. ರಾಜಪ್ರಭುತ್ವ ಪ್ರಬಲವಾದಂತೆ ಅದರ ಪ್ರಭಾವ ಕ್ಷೀಣಿಸಿತು.

ಈ ಎರಡು ಸಭೆಗಳು ಜನಪ್ರಿಯ ಲಕ್ಷಣಗಳನ್ನು ನಿರ್ಧರಿಸಲು ಇರುವ ಮುಖ್ಯ ತೊಡಕುಗಳೆಂದರೆ 1. ಇಡೀ ವೇದಗಳ ಕಾಲವನ್ನು ಒಳಗೊಂಡ ಅಷ್ಟು ದೀರ್ಘ ಕಾಲದಲ್ಲಿ ಅದು ಸಾಧ್ಯವಿಲ್ಲ.

ಸಭಾ ಪ್ರಾರಂಭದಲ್ಲಿ ಒಂದು ಬುಡಕಟ್ಟಿಗೆ ಸಂಬಂಧಿಸಿದ ಜನಪ್ರಿಯ ಸಭೆಯಾಗಿದ್ದು ನಂತರ ಶ್ರೀಮಂತರ ಸಭೆಯಾಯಿತು. ಆದರೆ ಸಮಿತಿಯು ನಂತರದ ವೇದಗಳ ಕಾಲದಲ್ಲಿಯೂ ತನ್ನ ಜನಪ್ರಿಯ ಸ್ವಭಾವವನ್ನು(ಸ್ವರೂಪ) ಉಳಿಸಿಕೊಂಡಿತು.

ಈ ಸಂಸ್ಥೆಗಳ ಅಸ್ತಿತ್ವವು ವೇದಗಳ ಕಾಲದ ಜನರು ರಾಜಕೀಯವನ್ನು ಗಂಬೀರವಾಗಿ ಪರಿಗಣಿಸಿದ್ದರು ಮತ್ತು ವೇದಗಳ ಕಾಲದಲ್ಲಿ ಸಮಾಜವು ಸಾರ್ವಜನಿಕ ಜೀವನದ ಸೂಕ್ಷ್ಮ ಅರಿವು ಮತ್ತು ಉತ್ತೇಜನಕಾರಿ ರಾಜಕೀಯ ಚಟುವಟಿಕೆಗಳ ಲಕ್ಷಣಗಳಿಂದ ಕೂಡಿಟ್ಟಿತೆಂಬುದನ್ನು ಸೂಚಿಸುತ್ತದೆ. ಆದರೆ ರಾಜ್ಯ ದೊಡ್ಡದಾದಂತೆ ಸಮಿತಿ ಆಗಿಂದಾಗ್ಗೆ ಸಭೆ ಸೇರುವುದು ಕಷ್ಟವಾಯಿತು. ಈ ಪರಿಸ್ಥಿತಿಯಲ್ಲಿ ಉತ್ತರ ವೇದಗಳ ಕಾಲದಲ್ಲಿ ಜನಪ್ರಿಯ ಸಭೆಯಾಗಿ ಸಮಿತಿ ಕಣ್ಮರೆಯಾಯಿತು. ಆದರೆ ಸಭಾ ರಾಜನ ಗುಪ್ತ ಸಭೆ ಅಥವಾ ಆಸ್ಥಾನವನ್ನು ಹೋಲುವ ಒಂದು ಸಂಕುಚಿತ ಸಭೆಯ ಮಟ್ಟಕ್ಕೆ ಕುಸಿಯಿತು.

## 50.6 ರಾಜಪದವಿ

ಪ್ರಾಚೀನ ಭಾರತದಲ್ಲಿ ಇತರ ಬಗೆಯ ರಾಜ್ಯಗಳಿದ್ದರೂ ರಾಜಪ್ರಭುತ್ವ ಸರ್ವಸಾಮಾನ್ಯ ಸರ್ಕಾರ ಮಾದರಿಯಾಗಿತ್ತು. ರಾಜನು ರಾಜ್ಯದ ಅಧಿಕಾರದ ಸಂಕೇತವಾಗಿದ್ದವು. ಧರ್ಮ ಪರಮಾಧಿಕಾರಿಯಾಗಿದ್ದಿತೇ ವಿನಃ ರಾಜನಲ್ಲ. ರಾಜ ಪದವಿಯ ಆದರ್ಶವನ್ನು ಮುಖ್ಯವೆಂದು ಪರಿಗಣಿಸಲಾಗಿತ್ತು. ಅವನ ಹಿರಿಮೆ ಕೇವಲ ಭ್ರಮೆಯಾಗಿತ್ತು. ರಾಜನ ಆದರ್ಶವನ್ನು ತಿಳಿದುಕೊಳ್ಳಲು ರಾಜಪದವಿಯ ಮೂಲ ಸುಳಿವು ನೀಡುತ್ತದೆ.

### *50.6.1 ರಾಜಪದವಿ(ರಾಜತ್ವ)ಯ ಮೂಲದ ಸಿದ್ಧಾಂತಗಳು*

ಆಧಾರಗಳ ವಿಶ್ಲೇಶಣೆಯು, ಚುನಾವಣ ಆಯ್ಕೆಯ ಒಪ್ಪಂದದ ಮತ್ತು ದೈವದತ್ತಾಧಿಕಾರ ಸಿದ್ಧಾಂತಗಳ ಕಡೆಗೆ ಗಮನ ಸೆಳೆಯುತ್ತದೆ. ಐತ್ತರೇಯ ಬ್ರಾಹ್ಮಣವು ದೇವರುಗಳು ಮತ್ತು ದಾನವರ(ರಾಕ್ಷಸರು) ನಡುವೆ ನಡೆದ ಯುದ್ಧದ ಬಗ್ಗೆ ಉಲ್ಲೇಖಿಖಿಸಿದ್ದು, ಈ ಯುದ್ಧದಲ್ಲಿ ದೇವರುಗಳು ದಾನವರ ಕೈಯಲ್ಲಿ ನಿರಂತರ ಸೋಲನ್ನು ಅನುಭವಿಸಿದರು. ಇದರಿಂದ ದೇವರುಗಳು ತಮ್ಮ ಸೋಲಿಗೆ

ತಮ್ಮನ್ನು ಮುನ್ನಡೆಸಲು ನಾಯಕನ ಕೊರತೆಯಿದ್ದರೆ, ದಾನವರಿಗೆ ರಾಜನಿದ್ದುದೇ ಕಾರಣವೆಂದು ಅರಿತರು. ಈ ಪ್ರಯೋಗವನ್ನು ಮಾಡಲು ನಿರ್ಧರಿಸಿದ ಅವರು ಅಂತಿಮವಾಗಿ ಇಂದ್ರನನ್ನು ತಮ್ಮ ರಾಜದೊರೆಯನ್ನಾಗಿ ಆಯ್ಕೆ ಮಾಡಿ ರಾಕ್ಷಸರ ಮೇಲೆ ವಿಜಯವನ್ನು ಸಾಧಿಸಿದರು. ಇದರಿಂದ ಯುದ್ಧದ ಅವಶ್ಯಕತೆಯೇ ರಾಜಪದವಿಯ ಮೂಲವಾಯಿತೆಂಬುದನ್ನು ಸೂಚಿಸುತ್ತದೆ. ಮತ್ತು ಇದು ಚುನಾವಣೆಯ ಲಕ್ಷಣವನ್ನು ಹೊಂದಿದ್ದಿತು. ಪ್ರಾರಂಭದಲ್ಲಿ ಇದಕ್ಕೆ ಕನಿಷ್ಠ ಮೂರು ತತ್ವಗಳು ಆಧಾರವಾಗಿದ್ದವು.

ಕೌಟಿಲ್ಯ ಅರ್ಥಶಾಸ್ತ್ರವು ರಾಜಪದವಿಯ ಮೂಲವನ್ನು ಕೇವಲ ಪ್ರಾಸಂಗಿಕವಾಗಿ ಪರಿಚಯಿಸಿದ. ಈ ವಿಷಯವು ಎರಡು ಗುಂಪುಗಳಾಗಿದ್ದ ಗೂಡಚಾರರ ಒಂದು ಚರ್ಚೆಯ ಸಂದರ್ಭದಲ್ಲಿ ಬರುತ್ತದೆ. ಒಂದು ಗುಂಪು ಹೇಳುತ್ತದೆ " ಮೀನು ಸಣ್ಣ ಮೀನನ್ನು ನುಂಗುತ್ತದೆ" ಎನ್ನುವ ಗಾದೆಮಾತಿನಂತೆ, ಜನರು ಅರಾಜಕತೆಯಿಂದ ಸಂಕಷ್ಟಗಳಿಗೆವ ಗುರಿಯಾಗಿದ್ದು, ಮೊದಲು ಅವರು ವೈವಸ್ವತ ಮನುವನ್ನು ತಮ್ಮ ರಾಜನನ್ನಾಗಿ ಆಯ್ಕೆ ಮಾಡಿದರು ಮತ್ತು ತಾವು ಬೆಳೆದ ಧಾನ್ಯದ 1-6 ಭಾಗವನ್ನು ಹಾಗೂ ವ್ಯಾಪಾರದ ಸರಕುಗಳಲ್ಲಿ 1-10 ಭಾಗವನ್ನು ದೊರೆಗೆ ಕಾಣಿಕೆಯಾಗಿ ನೀಡಿದರು. ಇದಕ್ಕೆ ಪ್ರತಿಯಾಗಿ ರಾಜನು ತನ್ನ ಪ್ರಜೆಗಳ ಸುರಕ್ಷತೆ ಮತ್ತು ರಕ್ಷಣೆಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಂಡನು". ಈ ಸಂಭಾಷಣೆಯು ಒಂದು ಒಪ್ಪಂದ ಸಿದ್ಧಾಂತವನ್ನು ಬೆಂಬಲಿಸುತ್ತದೆ.

ಅದೇ ರೀತಿ ರಾಜನು ಭೂಮಿಯ ಮೇಲೆ ದೇವತೆಗಳಾದ ಇಂದ್ರ ಮತ್ತು ಯಮನ ಕರ್ತವ್ಯಗಳನ್ನು ಈಡೇರಿಸುವುದರಿಂದ ಅವನನ್ನು ನಿರ್ಲಕ್ಷಿಸುವ ಎಲ್ಲರನ್ನು ಲೌಕಿಕ ಅಸ್ತ್ರದಿಂದ ಮಾತ್ರವಲ್ಲದೆ ಸ್ವರ್ಗದಿಂದಲೂ ಶಿಕ್ಷಿಸುವುದಾಗಿ ಜನರಿಗೆ ಹೇಳಲಾಯಿತು. ಕೌಟಿಲ್ಯನು ದೈವದತ್ತಾಧಿಕಾದ ಸಿದ್ಧಾಂತದ ಮೂಲಕ ರಾಜನ ಅಧಿಕಾರವನ್ನು ಸಮರ್ಥಿಸಿದರೂ ಅದೋ ವೇಳೆಗೆ ಅವನು ರಾಜನು ರಕ್ಷಣೆಯ ಸೇವೆಗಾಗಿ ಆಧಾಯವನ್ನು ಪಡೆಯುವ ಒಬ್ಬ ಅಧಿಕಾರಿ ಮಾತ್ರವೆಂಬ ತತ್ವವನ್ನು ಅತ್ಯಂತ ಸ್ಪಷ್ಟವಾಗಿ ವಿವರಿಸಿದ್ದಾನೆ.

ಈ ಕಲ್ಪನೆಯು ಅವನ ಮುಂದಿನ ಹೇಳಿಕೆಯಿಂದ ಮತ್ತೊಂದು ವಿಷಯಕ್ಕೆ ಬರುತ್ತದೆ. 'ರಾಜನು ತನ್ನ ಕರ್ತವ್ಯಗಳನ್ನು ನಿಷ್ಠೆಯಿಂದ ನಿರ್ವಹಿಸಲು ಅಧ್ಯಾತ್ಮಿಕವಾಗಿ ಜವಾಬ್ದಾರನಾಗಿರುತ್ತಾನೆ. ಆದ್ದರಿಂದ ಈ ಸಂಬಂಧದ ಅವಶ್ಯಕ ನಿಬಂಧನೆಯೆಂದರೆ ತೆರಿಗೆಯ ಪಾವತಿ'. ಇಲ್ಲಿಯೂ ಒಪ್ಪಂದ ಸಿದ್ಧಾಂತವನ್ನು ಹೆಣೆಯಲಾಗಿದ್ದು ರಾಜನ ಅಧಿಕಾರವನ್ನು ಒತ್ತಿ ಹೇಳಲಾಗಿದೆ.

ಹೀಗೆ ರಾಜನು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ವಿವಿಧ ಇತಿಹಾಸಕಾರರಲ್ಲಿ ಅನೇಕ ಊಹಾಪೋಹ (ಕಲ್ಪನೆ)ಗಳಿವೆ.

ಈಗ ಮೇಲೆ ಗಮನಿಸಲಾದ ಸಿದ್ಧಾಂತಗಳನ್ನು ಒಂದು ನಿರ್ಧಾರವನ್ನು ಮಾಡಬಹುದಾಗಿದೆ. ಎಲ್ಲಾ ಸಿದ್ಧಾಂತಗಳಿಗಿಂತಲೂ ಜನರ ಮೇಲೆ ಹೇರವಾದ ಅಧಿಕಾರಕ್ಕೆ ಸ್ವಯಂ ವಿದೇಯತೆಯ ಸಮಸ್ಯೆಗೆ ರಾಜ ಪದವಿಯ ಮೂಲದ ಒಪ್ಪಂದದ ಕಲ್ಪನೆ ಹೆಚ್ಚು ಸೂಕ್ತವಾದ ಉತ್ತರವೆಂಬಂತೆ ಕಂಡುಬರುತ್ತದೆ. ತಮ್ಮನ್ನು ಅತ್ಯಂತ ದುರ್ಬರ ಸ್ಥಿತಿಯಿಂದ ರಕ್ಷಿಸಿದ್ದುದರಿಂದ ಜನರಿಗೆ ರಾಜನೊಬ್ಬನ ಅಗತ್ಯವಿತ್ತು. ಆದ್ದರಿಂದ ಈ ಏಕಪಕ್ಷಿಯ ಒಪ್ಪಂದ.

### 50.6.2. *ರಾಜಪದವಿಯ ಸ್ವಭಾವ*

ಕೆಲವು ಚಿಂತಕರು ರಾಜನು ದೈವೀ ವಿಶೇಷಣ ಗುಣಗಳನ್ನು ಹೊಂದಿದ್ದನೆಂಬ ಅಭಿಪ್ರಾಯವನ್ನು ಹೊಂದಿದ್ದರೂ, ಅವನ್ನು ಲೌಕಿಕ ಸಂಸ್ಥೆಯೆಂದು (ಹುದ್ದೆ) ಪರಿಗಣಿಸಲಾಗಿತ್ತು. ರಾಜನು ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಫಲನಾದ ಸಂದರ್ಭದಲ್ಲಿ ಜನರು ನಿಜವಾದ ದೊರೆಗಳಿಗೆ ತಮ್ಮ ವಿದೇಯತೆಯನ್ನು ಬದಲಾಯಿಸಲು ಅನುಮತಿ ನೀಡಲಾಗಿತ್ತು. ನಿರಂಕುಶಾಧಿಕಾರವು ಭಾರತೀಯ ರಾಜಕೀಯ ವ್ಯವಸ್ಥೆಯ ಉದ್ದೇಶದ ಭಾಗವಾಗಿರಲಿಲ್ಲವೆಂಬುದನ್ನು ತೋರಿಸಲು ಈ ಸಮರ್ಥನೆ ಸಾಕಾಗುತ್ತದೆ. ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡುವುದು ಮೊದಲ ಅಗತ್ಯವಾಗಿತ್ತು ಮತ್ತು ಯಾರು ಅದನ್ನು ಮಾಡಲು ಸಮರ್ಥನಾಗಿದ್ದನೋ ಅವನು ವಿಧೇಯತೆಗೆ ಅರ್ಹನಾಗಿದ್ದನು.

ಕೌಟಿಲ್ಯ ರಾಜಪದವಿಯ ದೈವ ಸ್ವರೂಪದ ಬಗ್ಗೆ ಯಾವ ಭ್ರಮೆಯನ್ನು ಹೊಂದಿರಲಿಲ್ಲ. ಅವನು ರಾಜನನ್ನು ರಾಜ್ಯದ ಸೇವಕನೆಂದು ಪರಿಗಣಿಸಿದ್ದನು.

ಭೀಷ್ಮನೂ ಸಹಾ ಶಾಂತಿ ಪರ್ವದಲ್ಲಿ ಇದನೆಲ್ಲ ಸಮರ್ಥಿಸಿದ್ದಾನೆ. ಶುಕ್ರನ ಅಭಿಪ್ರಾಯದಲ್ಲಿ ರಾಜನು ನೀತಿಯನ್ನು ಪಾಲಿಸುವವರೆಗೆ ಮತ್ತು ನ್ಯಾಯಯುತವಾಗಿ ಆಡಳಿತ ನಡೆಸುವವರೆಗೆ ಜನರು ರಾಜನಿಗೆ ವಿದೇಯರಾಗಿರಬೇಕೆಂದಿದ್ದಾನೆ.

ಸೈನ್ಯವನ್ನು ಉದ್ದೇಶಿಸಿ ಮಾತನಾಡುವಾಗ ಕೌಟಿಲ್ಯವು ಈ ಮಾತನ್ನು ಹೇಳಿದ್ದಾನೆ. "ಸೈನಿಕರು ತಮ್ಮ ಕರ್ತವ್ಯಗಳಿಗಾಗಿ ಸಂಬಳ ಪಡೆಯುವಂತೆಯೇ ರಾಜನೂ ತಾನು ಮಾಡುವ ಕೆಲಸಕ್ಕೆ ವೇತನ ಪಡೆಯುವನು".

### 50.6.3. ರಾಜನ ಕರ್ತವ್ಯಗಳು

ಪ್ರಜೆಗಳ (ಜನರ) ಜೀವ ಮತ್ತು ಆಸ್ತಿಯನ್ನು ರಕ್ಷಿಸುವುದು ರಾಜನ ಆದ್ಯ ಕರ್ತವ್ಯವಾಗಿದೆ. ರಾಜನ ರಕ್ಷಣೆಯಲ್ಲಿ ಜನರು ತಮ್ಮ ಮನೆಯ ಬಾಗಿಲು ತೆರೆದಿದ್ದರೂ ನಿರಾತಂಕವಾಗಿ ನಿದ್ರಿಸಲು ಸಾಧ್ಯವಾಗುವುದು: ಬಾಹ್ಯ ಮತ್ತು ಆಂತರಿಕ ಶಾಂತಿಯನಾನು ಕಾಪಾಡುವುದು, ಸಾಮಾಜಿಕ ವ್ಯವಸ್ಥೆಯನ್ನು ಸಮರ್ಥಿಸುವುದು, ಜನರು ಮುಕ್ತವಾಗಿ ಜೀವಿಸಬಹುದಾದ ಪರಿಸ್ಥಿತಿಯನ್ನು ಸೃಷ್ಟಿಸುವುದು. ತನ್ನ ಪ್ರಜೆಗಳನ್ನು ರಕ್ಷಿಸಲು ವಿಫಲನಾದ ದೊರೆಯನ್ನು ಬಂಜೆಗೆ ಸಂತಾನಶಕ್ತಿಯಿಲ್ಲದ ಹಸು ಮತ್ತು ಬಾರವನ್ನು ಹೊರಲಾಗದ ಗೂಳಿಗೆ ಹೋಲಿಸಲಾಗಿದೆ.

ಭೀಷ್ಮವು "ಪ್ರಜೆಗಳ ಹಿತ ದೇವರ ಸೇವೆಗಿಂತಲೂ ಮಿಗಿಲಾದ ಬೆಲೆಯುಳ್ಳದ್ದು" ಎಂದು ಹೇಳಿದ್ದಾನೆ ಮತ್ತು ಕಡೆಯದಾಗಿ ಹೀಗೆ ವರ್ತಿಸುವಂತೆ ರಾಜನಿಗೆ ಸಲಹೆ ನೀಡಿದ್ದಾನೆ. " ಗರ್ಭಿಣಿಯಾದ ಸ್ತ್ರೀಯಂತೆ ತನಗೆ ತೊಂದರೆಯಾದರೂ ಮತ್ತು ತನ್ನ ಸಂತೋಷವನ್ನು ಅದುಮಿಟ್ಟು, ತಾವು ತನ್ನಲ್ಲಿ ಏನನ್ನು ದರಿಸಿರುವಳೋ ದರ ಹಿತಕ್ಕಾಗಿ ಏನು ಬೇಕೋ ಅದನ್ನು ಮಾಡುತ್ತಾಳೆ. ಆದ್ದರಿಂದ ರಾಜನು ಜನರ ಇಷ್ಟಕ್ಕನುಗುಣವಾಗಿ ತನ್ನ ಕರ್ತವ್ಯವನ್ನು ಅನುಸರಿಸಬೇಕು"

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇಂತಹದೇ ರಾಜನಿಷ್ಠೆಯ ಉತ್ಸಾಹವನ್ನು ವ್ಯಕ್ತಪಡಿಸಲಾಗಿದೆ.

ಪ್ರಾಚೀನ ಭಾರತದ ಎಲ್ಲಾ ರಾಜಕೀಯ ಸಿದ್ಧಾಂತಗಳು ಪ್ರಜಾಹಿತವನ್ನು (ಪ್ರಜೆಗಳ ಕಲ್ಯಾಣ) ರಾಜನೀತಿಯ ಮೊದಲ ತತ್ವವಾಗಿ ನಿಗದಿಪಡಿಸಿವೆ. ಶಭ್ಧೋತ್ಪತ್ತಿಯಂತೆ ರಾಜ ಎಂಬ ಪದವು" ಪ್ರಜೆಗಳು ತನನ್ನು ಪ್ರೀತಿಸುವಂತೆ ಮಾಡುವವನು" ಎಂಬ ಅರ್ಥವನ್ನು ನೀಡುತ್ತದೆ. ಅವನು ಧರ್ಮವನ್ನು ಎತ್ತಿ ಹಿಡಿಸಬೇಕು, ನ್ಯಾಯ, ಸಾಮಾಜಿಕ ಶಿಸ್ತನ್ನು(ವ್ಯವಸ್ಥೆ) ನೀಡಬೇಕು ರಕ್ಷಣೆಯನ್ನು ಒದಗಿಸಬೇಕು ಮತ್ತು ಎಲ್ಲವುದಕ್ಕಿಂತಲೂ ಮಿಗಿಲಾಗಿ ಪ್ರಜೆಗಳ ಹಿತಾಸಕ್ತಿಗಳೊಂದಿಗೆ ತನ್ನ ಹಿತಾಸಕ್ತಿಗಳನ್ನು ಗುರುತಿಸಿಕೊಳ್ಳಬೇಕು.

ಪ್ರಜೆಗಳ ಆರ್ಥಿಕ ಅಭಿವೃದ್ಧಿಯೂ ಅವನ ಪ್ರಮುಖ ಚಿಂತನೆಯಾಗಿದ್ದಿತು. ರೈತರಿಗೆ ಉತ್ತಮ ಬಿತ್ತನೆ ಬೀಜಗಳನ್ನು ಒದಗಿಸಲು ಕೃಷಿ ತೋಟಗಳನ್ನು ಸ್ಥಾಪಿಸುವ ಮೂಲಕ, ನೀರಾವರಿ ಸೌಲಭ್ಯಗಳನ್ನು ಒದಗಿಸುವ ಮೂಲಕ, ಸಾರಿಗೆ ಸಂಪರ್ಕ ಮೊದಲಾದವುಗಳನ್ನು ಒದಗಿಸುವ ಮೂಲಕ ಅವನು ತನ್ನ ಪ್ರಜೆಗಳ ಆರ್ಥಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕಾದ್ದಿತು.ಪ್ರಜೆಗಳ ಶೈಕ್ಷಣಿಕ ಅಗತ್ಯಗಳ ಬಗ್ಗೆಯೂ ಅವನು ಎಚ್ಚರವಹಿಸಬೇಕಾಗಿತ್ತು. ಸಂಸ್ಕೃತಿಯ ನಿಜವಾದ ಅಭಿವ್ಯಕ್ತಿಯೆಂದು ಪಗಿರಣಿಸಲಾಗಿದ್ದ ಸಾಹಿತ್ಯ ಮತ್ತು ಕಲೆಗಳ ಅಭಾದಿತ ಬೆಳವಣಿಗೆಗೆ ಅವನು ಸೂಕ್ತ ಪರಿಸ್ಥಿತಿಯನ್ನು ಸೃಷ್ಟಿಸಬೇಕಾಗಿತ್ತು.

ತನ್ನ ಕರ್ತವ್ಯಗಳ ಪಾಲನೆಯಲ್ಲಿ ರಾಜನು ಪ್ರಾಮಾಣಿಕತೆ, ಉತ್ಸಾಹ, ಸತ್ಯಸಂದತೆ, ಸ್ವಯಂ ನಿರ್ಬಂಧ, ನರ್ಮತೆ, ಮಾನವೀಯತೆ, ಸದ್ಗುಣ, ಧೈರ್ಯ ಮತ್ತು ಅನುಕಂಪದ ಗುಣಗಳನ್ನು ಆಚರಿಸುವಂತೆ ಸಲಹೆ ಮಾಡಲಾಗಿದೆ.

ಅಶೋಕನ್ನ ಈ ಘೋಷಣೆಯೊಂದಿಗೆ ನಾವು ಇದನ್ನು ಮುಕ್ತಾಯ ಮಾಡಬಹುದು. "ಎಲ್ಲಾ ಪ್ರಜೆಗಳೂ ನನ್ನ ಮಕ್ಕಳು, ನಾನು ಇಹಪರಗಳೆರಡರಲ್ಲೂ ನನ್ನ ಮಕ್ಕಳಿಗೆ ಸುಖ ಸಂತೋಷಗಳನ್ನು ಬಯಸುವಂತೆ ನಾನು ಎಲ್ಲಾ ಪ್ರಜೆಗಳಿಗೂ ಅದನ್ನೇ ಬಯಸುತ್ತೇನೆ".

### 50.6.4 ಸಿಂಹಾಸನಾರೋಹಣ(ಪಟ್ಟಾಭಿಷೇಕ) ಸಮಾರಂಭ ಮತ್ತು ಅದರ ಸಂವಿಧಾನಾತ್ಮಕ ಮಹತ್ವ

' ದೀಕ್ಷಾ' ಎಂದು ರಕೆಯಲಾಗಿರುವ ಪಟ್ಟಾಭಿಕ್ಷೇಕ ಸಮಾರಂಭವು ಪ್ರಾಚೀನ ಭಾರತದ ಸಂವಿಧಾನದ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಅಲ್ಲದೆ ಈ ಸಮಾರಂಭವು ಪ್ರಜೆಗಳ (ಆಳ್ವಿಕೆಗೊಳಗಾದವರು) ನಡುವಿನ ಒಪ್ಪಂದದ ದೃಡೀಕರಣದ ಸಂಕೇತವಾಗಿದೆ.

ರಾಜಸೂಯವೆಂದು ಕರೆಯಲಾದ ಪಟ್ಟಾಭೀಷೇಕ ವಿಧಿಯನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.

1 ಪಟ್ಟಾಭಿಷೇಕಕ್ಕೆ ಪೂರ್ವಭಾವಿಯಾದ ವಿಧಿ.

2 ಪಟ್ಟಾಭಿಷೇಕ ಮತ್ತು

3 ಪಟ್ಟಾಭಿಷೇಕ ನಂತರದ ಆಚಾರ ವಿಧಿ.

ವಿವಿಧ ಸಾಮಾಜಿಕ ಸಮೂಹ(ಗುಂಪು)ಗಳ ಬೆಂಬಲವನ್ನು ಪಡೆಸುವುದು ಈ ವಿಧಿಗಳ ಉದ್ದೇಶವೆಂಬುದು ಪಟ್ಟಾಭಿಷೇಕ ಸಮಾರಂಭದ ಮಹತ್ವವನ್ನು ಮನವರಿಕೆ ಮಾಡಿಕೊಡುತ್ತದೆ. ಕೆ.ಪಿ.ಜಯಸ್ವಾಲ್ ಎಂಬುವವರು ಅಭಿಪ್ರಾಯಪಟ್ಟಿರುವಂತೆ " ರಾಜ್ಯದ ಸಾಮ್ರಾಜ್ಯದ ನಾಲ್ಕು ವರ್ಗಗಳಿಂದ ರಾಜದಿಂದ ರಾಜನನ್ನು ರಕ್ಷಿ,ಬೇಕೆಂಬುದು ಇದರ ನಿಜವಾದ ಸಂವಿಧಾನಾತ್ಮಕ ಮಹತ್ವವಾಗಿತ್ತು. ತನ್ನ ಹುದ್ದೆಯಲ್ಲಿ ಪ್ರಜೆಗಳಿಂದ ರಕ್ಷಸಲ್ಪಟ್ಟಲು ರಾಜನು ಆಡಳಿತವನ್ನು ನಡೆಸಬೇಕು". ಜಯಸ್ವಾಲರ ಅಭಿಪ್ರಾಯದಲ್ಲಿ ಇದು ಆಧುನಿಕ ರಾಜಕೀಯ ಒಂದು ಸಮ್ಮತಿಯನ್ನು ಪಡೆದ.

## 50.7 ಮುಕ್ತಾಯ / ಸಾರಾಂಶ

ಭಾರತೀಯ ರಾಜಕೀಯ ಚಿಂತನೆ, ಕಲ್ಪನೆ ಮತ್ತು ಸಂಸ್ಥೆಗಲ ಅಧ್ಯಯನವು ಭಾರತದ ಇತಿಹಾಸವನ್ನು ಪ್ರೀತಿಸುವ ಪ್ರತಿಯೊಬ್ಬರಿಗೂ ಅಸಾಧಾರಣ ಆಸಕ್ತಿಯ ವಿಷಯವಾಗಿದೆ.

ಇದು ಹೇಗೆ ಮಹಾಚಿಂತಕರು ರಾಜಕೀಯ ಸಂಸ್ಥೆಗಳನ್ನು ಕಲ್ಪಿಸಿಕೊಂಡದು ಮತ್ತು ರೂಪಿಸಿದರು ಮತ್ತು ಶತಮಾನಗಳ ಕಾಲದ ಸಮಾಜಕ್ಕೆ ಮಾರ್ದದರ್ಶನವನ್ನು ನೀಡಿದರೆಂಬುದನ್ನು ತೋರಿಸಿಕೊಡುತ್ತದೆ. ಇದು ಕಾಲಕ್ರಮದಲ್ಲಿ ವಿವಿಧ ಬಗೆಯ ರಾಜಕೀಯ ವಿಷಯಗಳ ವಿಕಾಸವನ್ನು ನಮ್ಮ ಮುಂದೆ ಬಿಚ್ಚಿಡುತ್ತದೆ.

ವಾಸ್ತವವಾಗಿ, ಪ್ರಾಚೀನ ಕಾಲದಲ್ಲಿ ರಾಜ್ಯದ ಕಾರ್ಯವನ್ನು ರಾಜಕೀಯ ಚಿಂತನೆಗಳ ಹಿನ್ನಲೆಯಲ್ಲಿ ಮಾತ್ರವೇ ಅರ್ಥಮಾಡಿಕೊಳ್ಳಲು(ತಿಳಿದುಕೊಳ್ಳಲು) ಮತ್ತು ಮೆಚ್ಚಿಕೊಳ್ಳಲು ಸಾಧ್ಯವಾಗುತ್ತದೆ.

**ಕೆ.ಬಿ. ಚಂದ್ರ**
ಇತಿಹಾಸ ಪ್ರಾಧ್ಯಾದಕ(ನಿವೃತ್ತ)
ವಿದ್ಯಾನಗರ.
ಹಾಸನ.

# ಟಿಪ್ಪಣಿಗಳು

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✛ **M.Ed Study Centres : 06**


Feedback : improvement, revision and launching of new programmes
Multimedia learning material
Academic and other support
Evaluation - methods and media
STUDENT
INSTRUCTIONAL SYSTEM